ಅಖಿಲ ಭಾರತ ಪತ್ರಿಕೆ

ಜೂನ್ 2021

# ದೈವೀ ಕೃಪೆ



ಬೆಲೆ : 15/-



ಒಡಮೂಡಿತ್ತೀ ಸತ್ಯಂ ಅಗ್ನಿ ಜಯ ಸ್ವರೂಪದೋಳ್;
ಗಳಿಸಿದೊಂದು ವಿಜಯಮಿದು ದೇವಗಾಗಿ ಮಾನವನೋಳ್,
ಬೆಳಗಿಸಿದನನಾವರಿಸಿ ನಿಜ ನಿಭೃತ ವದನಮಂ ದೇವನ್.

**– ಮಂದರ್ಕೆ ಮಾಧವ ಪೈ**

**(ಶ್ರೀ ಅರವಿಂದರ 'ಸಾವಿತ್ರಿ'; ಪರ್ವ 1 ದಳ 2 ಪುಟ 21)**

Photo: Imaging Savitri

# ಅಖಿಲ ಭಾರತ ಪತ್ರಿಕೆ

**ಜೂನ್ 2021**

ಸಂಪುಟ: 31 ಸಂಚಿಕೆ: 06

**ಪರಿವಿಡಿ**



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## ದೈವೀ ಕೃಪೆ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಕೃಪೆ ಎಂದರೇನು** 6
**ಕೃಪೆಯ ಉಗಮ** 7
**ಕೃಪೆ ಹಾಗೂ ನಮ್ಮ ಸಹಯೋಗ** 9
ಅನು: ನಾಗಜ್ಯೋತಿ ಮಾನಿ

**ಕೃಪೆಯ ಎರಡು ಸ್ವರೂಪಗಳು** 12
**ಕೃಪೆಯನ್ನು ಆಹ್ವಾನಿಸುವದು** 14
**ನಮ್ರತೆ ಮತ್ತು ಕೃತಜ್ಞತೆ** 18
**ಕಷ್ಟಗಳು ಮತ್ತು ಅನುಗ್ರಹ** 20
ಅನು: ಡಾ॥ ಮಹಾದೇವ ಸಕ್ರಿ

**ಅನಾರೋಗ್ಯ ಮತ್ತು ಅನುಗ್ರಹ** 23
**ಕರ್ಮ ಮತ್ತು ಕೃಪೆ** 25
ಅನು: ಡಾ॥ ಬಿ.ಆರ್.ಭೀಡ್

**ಕೃಪೆಯ ಪರಮ ಸತ್ಯ** 28
**ಕೃಪೆ ಮತ್ತು ತಪಸ್ಸು** 31
ಅನು: ಪ್ರೊ. ವೀರಭದ್ರಪ್ಪ ಕೆ.

**ಆಧ್ಯಾತ್ಮದ ಪಥದಲ್ಲಿ ಪ್ರವೇಶಿಸಿದಾಗ...** 34
**ಪರಮಾತ್ಮನ ಆಶ್ವಾಸನೆ** 37
**ಸರ್ವೋಚ್ಚ ಪ್ರಜ್ಞೆ** 38
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ "ಋಗ್ವೇದದ ಪ್ರಥಮ ಋಕ್"** 41
ಅನು: ಪುಟ್ಟು ಕುಲಕರ್ಣಿ

**ಮಹರ್ಷಿ ಶ್ರೀ ಅರವಿಂದ ಘೋಷರ**
**ಸಂಕ್ಷಿಪ್ತ ಚರಿತವು – 6** 53
– ಡಾ॥ ಶಂ.ಬಾ. ಜೋಶಿ

## ಸಂಪಾದಕರ ಟಿಪ್ಪಣಿ

ಸೃಷ್ಟಿ ಎನ್ನುವದು ಒಂದು ರಹಸ್ಯ. ಈ ರಹಸ್ಯಕ್ಕಿಂತಲೂ ಪರಮ ಗೋಪ್ಯವಾಗಿರುವ ವಿಷಯವೆಂದರೆ, ಇದು ಕೇವಲ ಘಟಿಸುವದಷ್ಟೇ ಅಲ್ಲದೇ, ನಿರಂತರವಾಗಿ ಘಟಿಸುತ್ತಲೇ ಇರುವಂತೆಯೇ ಈ ಜಗತ್ತಿನ ಮೂಲಕ ಸಾಫಲ್ಯಗೊಳ್ಳುತ್ತದೆ. ನಾವು ಅದರ ಯಾದೃಚ್ಛಿಕ ಘಟನೆಗಳನ್ನು ಮಾತ್ರ ಕಾಣುತ್ತೇವೆ. ಈ ಪರಮಗೋಪ್ಯವು, ಕೇವಲ ಈ ರೀತಿಯ ಸಾಫಲ್ಯತೆಗಳನ್ನು ರೂಪಿಸುವದಷ್ಟೇ ಅಲ್ಲದೇ, ಈ ಸುವಿಶಾಲ ವ್ಯಾಪ್ತದವಕಾಶದಲ್ಲಿ ಭೌತಿಕ ಸ್ವರೂಪದಲ್ಲಿಯೂ ವಿಸ್ತಾರಗೊಳ್ಳುತ್ತದೆ. ಪ್ರಗತಿಗೊಳ್ಳುತ್ತದೆ. ಆದರೆ ಅತ್ಯಂತ ಅರ್ಥಪೂರ್ಣ ಪಥದಲ್ಲಿ ಅದು ವಿಕಾಸಗೊಳ್ಳುತ್ತದೆ! ಈ ಅಸಂಭವವೆಂದೇ ಪರಿಭಾವಿಸಲಾಗುವ ಸಂಭವಗಳ ಹಿಂದೆ(ಮೂಲದಲ್ಲಿ) ಇರುವ ಪರಮ–ಸತ್ಯವು ಈ 'ಸೃಷ್ಟಿಯ ಮೂಲ'ವೇ ಆಗಿ ಅಲ್ಲಿದೆ; ಇದು ರಹಸ್ಯವೂ ಹೌದು; ದೈವೀ ಕೃಪೆಯ ಹಾಗೂ ಪ್ರೇಮದ ಅದ್ಭುತವೂ ಆಗಿದೆ.

ಈ ಅಪೂರ್ವ, ವಿಸ್ಮಯಕರ ದೈವೀ ಕೃಪೆಯ ರಹಸ್ಯೋದ್ಘಾಟನೆಯ ಕುರಿತು ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ಸುಬೋಧಗಮ್ಯ ಜ್ಞಾನಪ್ರಕಾಶದ ಮೂಲಕ ಅಭಿವ್ಯಕ್ತಿಸಿರುವ ವಿಷಯಗಳಲ್ಲಿ ರೂಪಿಸಲ್ಪಟ್ಟಿದೆ. [ಎಐಎಮ್]

*

## ಸಂಪಾದಕರ ಟಿಪ್ಪಣಿ

## ದೈವೀ ಕೃಪೆ ಮತ್ತು ಸಹನೆ; ಒಂದು ಉದಾಹರಣೆ

ಆರ್ತಭಾವದಿಂದ ತುಂಬಿರುವ ಅಭೀಪ್ಸೆ ಇರುವಲ್ಲಿ ಅದಕ್ಕೆ ಇಚ್ಛಿತ ಫಲವು ಖಚಿತವಾಗಿಯೇ ದೊರೆಯುತ್ತದೆ. ಹೃದಯಪೂರ್ವಕವಾಗಿ ದೇವರ ಅನುಗ್ರಹವನ್ನು ಆಶಿಸುವ ಸಂದರ್ಭಗಳಲ್ಲಿ, ಬಹುತೇಕವಾಗಿ, ಮಾನವನು ದುಃಖ, ದುಗುಡ ಹಾಗೂ ನಿರಾಶೆಯ ಚರಮಾವಸ್ಥೆಯಲ್ಲಿ ಇರುತ್ತಾನೆ. ಸಂಪೂರ್ಣ ಹತಾಶನಾಗಿ, ಬೇರೆ ಯಾವುದೂ ದಾರಿ ಕಾಣದೇ ಇದ್ದಾಗಲಂತೂ ಈ ಆಶಯವು ಮತ್ತೂ ತುರೀಯಾವಸ್ಥೆಯನ್ನು ತಲುಪುತ್ತದೆ. ಆ ಸಂದರ್ಭದಲ್ಲಿಯೂ ತನ್ನನ್ನು ಅರಿತುಕೊಳ್ಳಲು ಸತತ ಪ್ರಯತ್ನಶೀಲನಾಗಿದ್ದುಕೊಂಡಾಗಲೂ ಇಂತಹ ವಿಷಣ್ಣ ಪರಿಸ್ಥಿತಿ ಬಂದಿದೆ ಎಂದರೆ ಬಹುತೇಕವಾಗಿ ಸ್ವಯಂಕೃತಾಪರಾಧಗಳಿಗೆ ದೊರೆತ ಪ್ರತಿಫಲದಂತೆ ಇರುತ್ತವೆ. ಈ ರೀತಿಯ ಪಾಠದ ಮೂಲಕವೇ ತನ್ನನ್ನು ತಾನು ಸುಧಾರಿಸಿಕೊಳ್ಳಲು ತುಡಿತವಿದ್ದರೆ, ಅದೇ ಆ ದೈವೀ ಕೃಪೆ ಅವತರಣಗೊಳ್ಳುವ ಸೂಕ್ತ ತಾಣವಾಗಿರುತ್ತದೆ.

ಇಂತಹ ದೈವೀ ಕೃಪೆಯ ನೈಜ ಉದಾಹರಣೆಯೊಂದನ್ನು ಇಲ್ಲಿ ಕಾಣಬಹುದು. ಹಾವೇರಿ ಜಿಲ್ಲೆಯ ಗ್ರಾಮವೊಂದರಲ್ಲಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾಗಿ ಆರೇಳು ವರ್ಷದ ಹಿಂದೆ ನಿವೃತ್ತರಾದ "ಶ್ರೀ .." ಎನ್ನುವವರು ಹಂಚಿಕೊಂಡ ಘಟನೆಯಿದು. ಅವರು ಶ್ರೀಮಾತಾರವಿಂದರ ಅನುಯಾಯಿ. ತಾವು ಎಲ್ಲಿ ಎಲ್ಲಿ ವರ್ಗಾವಣೆಗೊಂಡು ಹೋಗುತ್ತಾರೋ ಅಲ್ಲೆಲ್ಲ ತಮ್ಮ ಕೊಠಡಿಯಲ್ಲಿ ಮತ್ತು ಮೇಜಿನ ಮೇಲೆ ಶ್ರೀಮಾತಾರವಿಂದರ ಸೂಕ್ತಿಗಳನ್ನು ಎಲ್ಲರಿಗೂ ಸದಾ ಕಾಣುವಂತೆ ಹಾಕಿಕೊಳ್ಳುತ್ತಿದ್ದರು.

ಅವರ ಸಹಯೋಗಿಯೋರ್ವರು ಮತ್ತೊಂದು ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಆದರೆ ಅವರ ಬದುಕಿನಲ್ಲಿ ನಡೆದ ದರಂತಗಳ ಸರಣಿಯಿಂದಾಗಿ, ದುಃಖದಿಂದ, ಹತಾಶೆಯಿಂದ ಸಂಪೂರ್ಣ ನಿರ್ವಿಣ್ಣರಾಗಿದ್ದರು. ಅದು ಯಾವ ಹಂತಕ್ಕೆ ತಲುಪಿತ್ತು ಎಂದರೆ ಆತ್ಮಹತ್ಯೆ ವಿಚಾರದವರೆಗೂ ಬೆಳೆದು ನಿಂತಿತ್ತು. ಯೋಗಾಯೋಗವೆನ್ನುವಂತೆ, ಈ ಸ್ಥಿತಿಯಲ್ಲಿದ್ದಾಗ, ಆ ಹತಾಶೆಯಲ್ಲಿದ್ದ "ವ್ಯಕ್ತಿಯು" ಈ "ಶ್ರೀ.."ಯವರ ಶಾಲೆಗೆ ಕಾರ್ಯನಿಮಿತ್ತ ಬಂದಾಗ, ಅಲ್ಲಿ ಇದ್ದ

ಶ್ರೀಮಾತಾರವಿಂದರ ಸೂಕ್ತಿಗಳನ್ನು ನೋಡಿ ಒಂದರೆಕ್ಷಣ ಏನೂ ಮಾತನಾಡದೇ ಹಾಗೇ ಹೋಗಿದ್ದರಂತೆ. ಆದರೆ ಮುಂದೆ, ಶ್ರೀಮಾತಾರವಿಂದರ ಕುರಿತು ಆಸಕ್ತಿ ಬೆಳೆದು, ಮುಖ್ಯೋಪಾಧ್ಯಾಯರ ಹತ್ತಿರ ಚರ್ಚಿಸಿ, "ಆ ಸೂಕ್ತಿಗಳು" ಮತ್ತು ಲಭ್ಯವಿದ್ದ ಕನ್ನಡದ ಪುಸ್ತಕಗಳ ಮೂಲಕ ಶ್ರೀಮಾತಾರವಿಂದರ ಉಪದೇಶಗಳನ್ನು ಮನನ ಮಾಡಿಕೊಂಡ ನಂತರ, ಅವರಲ್ಲಿದ್ದ ಹತಾಶೆ, ನಿರಾಸೆ, ಆಘಾತದಿಂದ ಜರ್ಝರಿತಗೊಂಡ ಹೃದಯ ಮತ್ತು ಬದುಕಿನ ದೈನಂದಿನ ಸಂಗತಿಗಳೆಲ್ಲವೂ ಸುಸಂಗತವಾಗಿ, ಅವರು ತಮ್ಮನ್ನು ಮತ್ತೆ ತಾವೇ ಸುಧಾರಿಸಕೊಂಡು, ಜೀವನವನ್ನು ಸಮರ್ಥವಾಗಿ ಬದುಕುವದನ್ನು ರೂಢಿಸಿಕೊಂಡರು. ಈ ಬದಲಾವಣೆಗೆ ಕಾರಣವಾದ ಮುಖ್ಯೋಪಾಧ್ಯಾಯರನ್ನು ಕಂಡು, ಅವರಿಗೆ ಕೃತಜ್ಞತೆಗಳನ್ನೂ ಹೇಳಿ, ಈಗಲೂ ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾರೆ. ಮುಖೋಪಾಧ್ಯಾಯರು ನಿವೃತ್ತ ಜೀವನದಲ್ಲಿ, ತಮ್ಮ ಶ್ರೀಮಾತಾರವಿಂದರ ಅಧ್ಯಯನವನ್ನು ಮುಂದುವರೆಸಿದ್ದಾರೆ.

ದೈವೀ ಕೃಪೆಯು ಯಾವ ರೀತಿಯಲ್ಲಿ ದೊರೆಯುತ್ತದೆ ಎನ್ನುವದಕ್ಕೆ ಒಂದು ನೈಜ ಉದಾಹರಣೆಯಾಗಿದೆ. ಈ ಆರ್ತತೆಯ ಹಿಂದೆ ಇರುವ ಜೀವನದ ಪರಿಶುದ್ಧ ಭಾವ ಹಾಗೂ ಬದಲಾವಣೆಗಳನ್ನು ಸ್ವೀಕರಿಸುವಲ್ಲಿ ನಿರ್ಲಿಪ್ತ ಮನೋಭಾವ ಜೊತೆಗೆ ಅಪರಿಮಿತವಾದ ವಿಶ್ವಾಸ ಇದ್ದಲ್ಲಿ, ಅದೇ ದೈವೀ ಕೃಪೆಯು ಅವತರಣಗೊಳ್ಳಲು ಆಶಿಸುವ ತಾಣವಾಗಿರುತ್ತದೆ. [ಪಿಪಿಕೆ]



ತಲ್ಲಣದ ಲೋಕಕೀಗಿದೋ ಬಂದೆ
ಅವತರಣಗೊಳುತ ನೀನು
ಅಂಧಕಾರದಲಿ ತೊಳಲುತಿಹ ಮರ್ತ್ಯ–
ಕುಲಕೀಗ ರಕ್ಷೆಯಾಗಿ
ಕಾಣಲಸಮರ್ಥವಾಗಿರುವ ಕಣ್ಣು–
ತೆರೆತೆರೆಸಲೆಂದು ಬೆಳಕು
ತೋಷದಾ ಧಾರೆ ಧಾರೆಯನು ತುಂಬಿ
ದುಃಖಾರ್ತ ಹೃದಯದಲ್ಲಿ
ಭವದ ಜೊತೆ ದಿವವ ಸಂಯೋಗಗೊಳಿಸೆ
ನಿನ್ನ ಜೀವನವೆ ಸೇತು.

**– ಶ್ರೀ ಅರವಿಂದರು**

# ಕೃಪೆ ಎಂದರೇನು

**– ಅನುವಾದ: ನಾಗಜ್ಯೋತಿ ಮಾನ್ವಿ**

ಕೃಪೆಯು ಪ್ರೇಮದಲ್ಲಿದೆ, ಅದರ ಉಗಮದಲ್ಲಿದೆ, ನಿರಂತರವಾಗಿ ಲಭ್ಯವಾಗುವಂತೆ ತನ್ನ ವ್ಯಾಪ್ತಿಯಲ್ಲಿಯೇ ಅದು ಒಂದು ಶಕ್ತಿಯಾಗಿ, ಮಾಧುರ್ಯವಾಗಿ ಸದಾ ಸಾಂತ್ವನವನ್ನು ಒದಗಿಸುವ ಸ್ಪಂದನದಂತೆ ಅದರ ಕಂಪನದಂತೆ ಎಲ್ಲೆಡೆಗೂ ವ್ಯಾಪಿಸಿದೆ...

**11:42**

ಕೃಪೆ, ಹೌದು ಈ ಕೃಪೆ ಎನ್ನುವದು ಎಲ್ಲಾ ಗ್ರಹಿಕೆಗಳಿಗೂ ಆಚೆ ಆಚೆ ಇರುವ ಸಂಗತಿಯಾಗಿದೆ, ಅದೂ ತನ್ನದೇ ಆದ ದಯಾಳುತನವನ್ನು ಸ್ಪಷ್ಟವಾಗಿ ಗೋಚರಿಸುವ ಗುಣದಿಂದಾಗಿ....

**11:206**

ಕೃಪೆ ಎನ್ನುವದು .. .. .. ಆ ಪರಮಾತ್ಮನ ಅಭಿವ್ಯಕ್ತಿಯೇ ಆಗಿದೆ..

**11:206**

ನೀವು ಸಾಧಿಸಲೇಬೇಕಾದ ಗುರಿಯೆಡೆಗೆ ಈ ಕೃಪೆಯು ನಿಮ್ಮನ್ನು ತಲುಪಿಸುತ್ತದೆ. ಹೀಗಾಗಿ ಇದನ್ನು ನೀವು ನಿಮ್ಮ ಮನಸ್ಸಿನ ದೃಷ್ಟಿಯಿಂದ ನಿರ್ಣಯಿಸಬೇಡಿ. ನಿಮಗೇ ನೀವೇ ಅದನ್ನು ಎಲ್ಲಿಯೂ ಕಾಣಲಾರಿರಿ. ಏಕೆಂದರೆ ಅದು ಅತ್ಯಪೂರ್ವವಾಗಿರುವ ಅಸಾಧಾರಣವಾಗಿರುವ ಮತ್ತು ಅದರ ಅನುಭವಗಳನ್ನು ಮಾನತ ಸಹಜ ಶಬ್ದಗಳಲ್ಲಿ ರೂಪಿಸಲು ಸಾಧ್ಯವಿಲ್ಲ.

**14:97**

ನೀವು ದೈವೀ ಕೃಪೆಗೆ ಸಮೀಪಿಸದಂತೆಲ್ಲಾ, ಆಗ ನೀವು ಹೆಚ್ಚು ಹೆಚ್ಚು ಧಾರೆಗೊಳ್ಳುತ್ತಿರುವ ಆ ಅಗಾಧ ಕೃಪೆಯ ಅಡಿಯಲ್ಲಿ ಇರುತ್ತೀರಿ.

**14:89** **– ಶ್ರೀಮಾತೆ**

ಕೃಪೆಯು ಒಂದು ಕಲ್ಪನೆಯಲ್ಲ, ಇದು ಒಂದು ಆಧ್ಯಾತ್ಮಿಕ ಅನುಭವದ ಸತ್ಯವಾಗಿದೆ.

**29:172**

ಕೃಪೆಯು ಒಂದು ದೈವೀ ಪ್ರಜ್ಞೆಯ ಆಳದಿಂದ ಸಹಜವಾಗಿ ಅರಳುವ ಹೂವಾಗಿದೆ.

**29:473** **– ಶ್ರೀ ಅರವಿಂದರು**

# ಕೃಪೆಯ ಉಗಮ

**– ಅನುವಾದ: ನಾಗಜ್ಯೋತಿ ಮಾನ್ವಿ**

ನೀವು ಒಂದು ನಿರ್ದಿಷ್ಟ ರೀತಿಯ ಸಂದರ್ಭಗಳಲ್ಲಿ ಮತ್ತು ಕೆಲವೊಂದು ಘಟನೆಗಳು ಜರುಗಿದಾಗ ಈ ಘಟನೆಗಳು ನಿಮ್ಮ ಆಸೆ ಅಥವಾ ನಿಮಗೆ ಯಾವುದು ಅತ್ಯುತ್ತಮವೆನಿಸುತ್ತದೆಯೋ ಅದನ್ನು ವಿರೋಧಪಡಿಸಿದಾಗ ಮತ್ತು ಆಗ ನೀವು ಮರುಗಲಾರಂಭಿಸುತ್ತೀರಿ. ಜೊತೆಗೆ ನಿಮಗೆ ನೀವೇ ಹೇಳಿಕೊಳ್ಳುತ್ತೀರಿ, "ಓಹ್! ಇದು ಈ ರೀತಿ ಅಥವಾ ಆ ರೀತಿಯಾಗಿರುವ ಬದಲು ಬೇರೆ ರೀತಿಯಲ್ಲಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು;" ಚಿಕ್ಕ ಮತ್ತು ದೊಡ್ಡ ವಿಷಯಗಳಿಗೂ ಹೀಗೆ ಹೇಳುತ್ತೀದ್ದೀರಿ.. ಆಗ ವರ್ಷಗಳು ಕಳೆಯುತ್ತವೆ, ಘಟನೆಗಳು ತೆರೆದುಕೊಳ್ಳುತ್ತವೆ; ನೀವು ಪ್ರಗತಿಯಾಗಿರುತ್ತೀರಿ, ಹೆಚ್ಚು ಪ್ರಜ್ಞಾಯುತರಾಗಿರುತ್ತೀರಿ, ತಿಳುವಳಿಕೆ ಹೆಚ್ಚುತ್ತದೆ ಮತ್ತು ನೀವು ಹಿಂದಿರುಗಿ ನೋಡಿದಾಗ, ಮೊದಲಿಗೆ ಆಶ್ಚರ್ಯದಿಂದ ಮತ್ತು ನಂತರ ಮುಗುಳ್ನಗೆಯಿಂದ ನೀವು ಗಮನಿಸುತ್ತೀರಿ. ಅದೇನೆಂದರೆ ಕೆಟ್ಟ ಅಥವಾ ಅನಾನುಕೂಲಕರ ಎಂದೆನಿಸಿದ ಆ ಪ್ರತೀ ಸಂದರ್ಭಗಳು ನೀವು ಪ್ರಗತಿಯಾಗಲೇಬೇಕಾದ ನಿಶ್ಚಿತವಾಗಿ ಉತ್ತಮವಾದ ಘಟನೆಗಳು ಎಂದೆನಿಸುತ್ತದೆ. ಮತ್ತು ನೀವು ಸ್ವಲ್ಪ ಮಾತ್ರವೇ ಜಾಣರಿದ್ದರೆ ನಿಮಗೆ ನೀವೇ ಹೇಳಿಕೊಳ್ಳುತ್ತಿದ್ದಿರಿ, "ನಿಜವಾಗಿಯೂ, ದೈವದ ಕೃಪೆಯು ಅನಂತವಾಗಿದೆ" ಎಂದು.

ಹಾಗಾಗಿ, ಹಲವು ಬಾರಿ ಈ ರೀತಿಯ ಘಟನೆಗಳು ನಿಮಗಾದಾಗ ನೀವು ಮನುಷ್ಯನ ಕುರುಡುತನದ ಮತ್ತು ವಂಚಕ ನೋಟಗಳ ಬದಲಾಗಿ ಅರ್ಥ ಮಾಡಿಕೊಳ್ಳಲಾರಂಭಿಸುತ್ತೀರಿ, ಎಲ್ಲಾ ಕಡೆಗೂ ಕೃಪೆಯು ಕಾರ್ಯೋನ್ಮುಖವಾಗಿದೆ. ಆದ್ದರಿಂದ ಸದ್ಯದ ಕ್ಷಣದಲ್ಲಿ ಜಗತ್ತು ಇರುವ ಸ್ಥಿತಿಯಲ್ಲಿ ಪ್ರತೀ ಕ್ಷಣದಲ್ಲಿಯೂ ಸಾಧ್ಯವಾದಷ್ಟು ಅತ್ಯುತ್ತಮವಾದುದೇ ಆಗುತ್ತದೆ. ನಮ್ಮ ದೃಷ್ಟಿ ಸಂಕುಚಿತವಾಗಿರುವುದರಿಂದ ಅಥವಾ ನಮ್ಮದೇ ಆದ ಪ್ರಾಮುಖ್ಯತೆಗಳಿಂದ ನಾವು ಕುರುಡಾಗಿರುವುದರಿಂದ ವಸ್ತುಗಳು ಈ ರೀತಿಯಾದ ಎಂದು ಭೇದವನ್ನು ಗ್ರಹಿಸಲಾಗುವುದಿಲ್ಲ.

**8:256**

ಮಾನವನ ಬುದ್ಧಿ ಹೇಗಿದೆಯೆಂದರೆ ವಿಭಿನ್ನತೆ ಇಲ್ಲದಿದ್ದರೆ ಅದನ್ನು ಅರ್ಥಮಾಡಿಕೊಳ್ಳುವುದಿಲ್ಲ. ನಿನಗೆ ಗೊತ್ತಾ, ಜನರಿಂದ ನೂರಾರು ಕೃತಜ್ಞತೆಯ ಪತ್ರಗಳನ್ನು ನಾನು ಸ್ವೀಕರಿಸಿದ್ದೇನೆ, ಏಕೆಂದರೆ ಅವರು ರಕ್ಷಿಸಲ್ಪಟ್ಟಿದ್ದಾರೆ; ಆದರೆ ಅತೀ ವಿರಳವಾಗಿ ಕೆಲವರು ಕೃತಜ್ಞತೆ ಹೇಳಲು ಬರೆಯುತ್ತಾರೆ. ಅವರಿಗೆ ಏನೂ ಅಪಾಯವಾಗಿಲ್ಲವೆಂದು, ನಿನಗೆ ಅರ್ಥವಾಯಿತೇ!.. ಅಲ್ಲೊಂದು ಅಪಾಯ–ವಾಗುವವರೆಗೆ ಜನರು ಕೃಪೆಯ ಕಾರ್ಯದ ಬಗ್ಗೆ ಜಾಗೃತವಿರಲಾರರು.., ಅದೆಂದರೆ, ಅಪಘಾತ ಜರುಗುತ್ತಿರುವಾಗ ಅಥವಾ ಅಪಘಾತವಾಗಿ ಮತ್ತು ಅದರಿಂದ ಪಾರಾದಾಗ ಅವರು ಜಾಗ್ರತರಾಗುತ್ತಾರೆ. ಆದರೆ ಒಂದು ವೇಳೆ, ಒಂದು ಪ್ರಯಾಣ ಅಥವಾ ಯಾವುದೇ ಆಗಿರಲಿ ಅಪಘಾತವಾಗದೇ ಸಾಗಿದರೆ, ಇದೊಂದು ಅನಂತ ಉನ್ನತ ಕೃಪೆಯಿದ್ದಂತೆ ಎಂದು ಜಾಗೃತರಾಗಲಾರರು. ಸಾಮರಸ್ಯ ಯಾವ ರೀತಿ ಸ್ಥಾಪನೆಯಾಗಿರುತ್ತದೆ ಎಂದರೆ ಅಲ್ಲಿ ಯಾವ ಅಪಾಯವೂ ಆಗುವುದಿಲ್ಲ. ಆದರೆ ಅದು ಅವರಿಗೆ ಸಹಜವೆನಿಸುತ್ತದೆ. ಜನರು ಅನಾರೋಗ್ಯದಿಂದದ್ದು ಬೇಗನೇ ಆರೋಗ್ಯವಂತರಾದರೆ, ಅವರು ಕೃತಜ್ಞರಾಗಿರುತ್ತಾರೆ; ಆದರೆ ಅವರು ಆರೋಗ್ಯದಿಂದದ್ದಾಗ ಕೃತಜ್ಞತೆ ಸಲ್ಲಿಸುವ ಬಗ್ಗೆ ಯೋಚಿಸುವುದೇ ಇಲ್ಲ; ಮತ್ತು ಆರೋಗ್ಯದಿಂದಿರುವುದೇ ದೊಡ್ಡ ಪವಾಡವೆಂದು ಅವರಿಗೆ ತಿಳಿದಿಲ್ಲ!

**5:506** **– ಶ್ರೀಮಾತೆ**

ನಮ್ಮ ಜೀವನದ ಪ್ರತೀ ಕ್ಷಣದಲ್ಲಿಯೂ, ಎಲ್ಲಾ ಸಂದರ್ಭಗಳಲ್ಲಿಯೂ ಎಲ್ಲಾ ಕಷ್ಟಗಳನ್ನು ಮೀರಿರಲು ಸಹಾಯಕವಾಗಿ ಕೃಪೆಯು ಇದ್ದೇ ಇರುತ್ತದೆ.

*

ಪರಾತ್ಪರನ ಸಾಮರ್ಥ್ಯ ಅನಂತವಾದುದು–ನಮ್ಮ ಶ್ರದ್ಧೆ ಕಿರಿದಾದುದಾಗಿದೆ.

*

ದೈವೀ ಸಹಾಯವಿದ್ದಾಗ ಅಸಾಧ್ಯವಾದುದು ಯಾವುದೂ ಇಲ್ಲ.

**14:89–90** **– ಶ್ರೀಮಾತೆ**

# ಕೃಪೆ ಹಾಗೂ ನಮ್ಮ ಸಹಯೋಗ

**– ಅನುವಾದ: ನಾಗಜ್ಯೋತಿ ಮಾನ್ವಿ**

ನಾನು ಎಲ್ಲೋ ಒಂದು ಕಡೆ ಹೇಳಿದ್ದೆ, ಅಥವಾ ಬರೆದಿರಬಹುದು, ನಿಮ್ಮ ಶ್ರದ್ಧೆ ಎಷ್ಟು ಶ್ರೇಷ್ಟವೆಂಬುದಕ್ಕಿಂತಲೂ ಮತ್ತು ದೈವೀ ಕೃಪೆಯ ಮೇಲೆ ಎಷ್ಟು ನಂಬಿಕೆಯಿದೆ ಎಂಬುದಕ್ಕಿಂತಲೂ, ಎಲ್ಲಾ ಸಂದರ್ಭದ ಕೆಲಸಗಳಲ್ಲಿ ಕೃಪೆಯನ್ನು ಎಷ್ಟರ ಮಟ್ಟಿಗೆ ಕಾಣುವ ಸಾಮರ್ಥ್ಯವಿದೆ ಎಂಬುದಕ್ಕಿಂತಲೂ, ಪ್ರತೀ ಕ್ಷಣ, ಜೀವನದ ಪ್ರತೀ ಹಂತದಲ್ಲಿಯೂ, ಅದ್ಭುತವಾದ ಅಪಾರವಾದ ಕೃಪೆಯ ಕಾರ್ಯದ ಬಗ್ಗೆ ಎಂದಿಗೂ ನೀನು ಅರ್ಥಮಾಡಿಕೊಳ್ಳುವಲ್ಲಿ ಯಶಸ್ವಿಯಾಗುವುದಿಲ್ಲ; ಮತ್ತು ಈ ಕಾರ್ಯ ಸಾಧಿಸಲ್ಪಡುತ್ತದೆ; ಕೃಪೆಯು ಎಷ್ಟರ ಮಟ್ಟಿಗೆ ಎಲ್ಲವನ್ನೂ; ಮಾಡುತ್ತದೆ, ಎಲ್ಲದರ ಹಿಂದೆಯೂ ಇರುತ್ತದೆ, ಎಲ್ಲವನ್ನೂ ಸಂಘಟಿಸುತ್ತದೆ, ಎಲ್ಲವನ್ನೂ ನಡೆಸುತ್ತದೆ, ಜಗತ್ತಿನ ಪರಿಸ್ಥಿತಿಯನ್ನು ಪರಿಗಣಿಸಿ ದೈವೀ ಸಾಕ್ಷಾತ್ಕಾರದೆಡೆಗಿನ ಹೆಜ್ಜೆಯು ತ್ವರಿತ, ಸಂಪೂರ್ಣ, ಒಟ್ಟಾದ ಮತ್ತು ಸಾಧ್ಯವಾದಷ್ಟು ಸಾಮರಸ್ಯಕರವಾಗಿರುವಂತೆ ನೋಡಿಕೊಳ್ಳುತ್ತದೆ.

ನೀವು ಕೃಪೆಯೊಂದಿಗೆ ಸಂಪರ್ಕ ಹೊಂದಿದಂತೆಲ್ಲಾ ಸಮಯದ ಒಂದು ಕ್ಷಣ, ಅವಕಾಶದ ಒಂದು ಬಿಂದು ಕೂಡ ನಿಬ್ಬೆರಗಾಗುವ ಈ ಸತತ ಪಾಲ್ಗೊಳ್ಳುವಿಕೆಯನ್ನು ತೋರಿಸದೇ ಇರುವುದಿಲ್ಲ. ಮತ್ತು ಒಮ್ಮೆ ನೀವು ಇದನ್ನು ನೋಡಿದಾಗ, ನೀವು ಕೃಪೆಗೆ ಎಂದಿಗೂ ಸಮಾನಾಗುವುದಿಲ್ಲ ಎಂದು ನಿಮಗನಿಸುತ್ತದೆ. ಇದನ್ನು ನೀವು ಎಂದಿಗೂ ಮರೆಯಬಾರದು, ಯಾವ ರೀತಿಯ ಭಯವನ್ನು, ಯಾವುದೇ ದುಃಖ, ಯಾವುದೇ ಪಶ್ಚಾತ್ತಾಪ ಯಾವುದೇ ಮರುಕಳಿಸುವಿಕೆ ಯಾವ ಬಳಲುವಿಕೆಯನ್ನು ಹೊಂದದಿರಿ. ಒಬ್ಬರು ಈ ದೈವೀ ಕೃಪೆಯ ಜೊತೆ ಐಕ್ಯವಾದರೆ, ಕೃಪೆಯನ್ನು ಎಲ್ಲಾ ಕಡೆಗೂ ನೋಡಿದರೆ ಸರ್ವ–ಸಾಮರ್ಥ್ಯದ, ಅನಂತ, ಸಂತೋಷದ, ಉದಾತ್ತತೆಯ ಜೀವನವನ್ನು ಬದುಕಲಾರಂಭಿಸುತ್ತೀರಿ.

ಮತ್ತು ಅದು ದೈವೀ 'ಕಾರ್ಯ'ದಲ್ಲಿ ಸಾಧ್ಯವಾದ ಅತ್ಯುತ್ತಮ ಸಹಕರಿಸುವಿಕೆಯಾಗಿದೆ.

**8:250**

..,ಯಾವಾಗ ಒಬ್ಬರು ಇದನ್ನು ನೋಡಲಾರಂಭಿಸುತ್ತಾರೋ, ಯಾವುದೂ ವಿವರಿಸಲಾರದ ಆಶ್ಚರ್ಯದ ಸ್ಥಿತಿಯಲ್ಲಿ ಯಾರು ಕಾಲಿಡುತ್ತಾರೋ ಆಗ,

ಕಾಣುವುದರ ಆಚೆಗೆ ಈ ಕೃಪೆಯನ್ನು, ಗ್ರಹಿಸುತ್ತಾರೆ, ಅನಂತ, ಅದ್ಭುತ, ಸರ್ವಶಕ್ತ – ಎಲ್ಲವನ್ನೂ ತಿಳಿಯುವ, ಎಲ್ಲವನ್ನೂ ಸಂಘಟಿಸುವ, ಎಲ್ಲವನ್ನೂ ಜೋಡಿಸುವ, ಮತ್ತು ನಮಗೆ ಇಷ್ಟವಿರಲಿ ಅಥವಾ ಇಲ್ಲದಿರಲಿ, ನಮಗೆ ತಿಳಿದಿರಲಿ ಅಥವಾ ಇಲ್ಲದಿರಲಿ ಪರಾತ್ಪರ ಗುರಿಯೆಡೆಗೆ ನಮ್ಮನ್ನು ಮುನ್ನಡೆಸುವ ಎಂದರೆ, ದೈವೀ ಐಕ್ಯತೆ, ದೈವತ್ವದ ಜಾಗೃತೆ ಮತ್ತು 'ಆತ'ನೊಂದಿಗಿನ ಐಕ್ಯತೆಯೆಡೆಗೆ ಮುನ್ನಡೆಸುತ್ತದೆ.

ಆಗ ಒಬ್ಬರು ಜೀವನದಲ್ಲಿ ಸಂತೋಷದಿಂದ ಅದ್ಭುತವಾಗಿ, ಅಸಾಧಾರಣ ಸಾಮರ್ಥ್ಯದಿಂದ ಮತ್ತು ಅದೇ ಸಮಯದಲ್ಲಿ ಶಾಂತಿಯಿಂದ ಕೂಡಿದ ನಂಬಿಕೆ, ಅತೀ ಸಂಪೂರ್ಣ ಎಂದರೆ, ಅದನ್ನು ಯಾವುದೂ ಅಲುಗಾಡಿಸಲಾಗದು ಎಂಬಂತೆ ಕೃಪೆಯ 'ಕ್ರಿಯೆ' ಮತ್ತು 'ಸಾನಿಧ್ಯ'ದಲ್ಲಿ ಬದುಕುತ್ತಾರೆ ಮತ್ತು ಯಾವಾಗ ಒಬ್ಬರು ಈ ಸಂಪೂರ್ಣ ಸ್ವೀಕರಿಸುವಿಕೆಯಲ್ಲಿರುತ್ತಾರೋ ಮತ್ತು ಸಂಪೂರ್ಣ ಬದ್ಧತೆಯಲ್ಲಿರುತ್ತಾರೋ, ಆಗ ದೈವೀ ಕಾರ್ಯಕ್ಕೆ ಜಗತ್ತಿನ ಅಡೆತಡೆಯನ್ನು ಅಷ್ಟರ ಮಟ್ಟಿಗೆ ಕಡಿಮೆ ಮಾಡುತ್ತಾರೆ: ಪರಿಣಾಮವಾಗಿ, ಇದು ದೈವೀ ಕಾರ್ಯಕ್ಕೆ ತಾವು ನೀಡುವ ಅತ್ಯುತ್ತಮ ಸಹಕಾರವಾಗಿದೆ. ಅವನು ಪರಮಾತ್ಮ ಏನು ಬಯಸುತ್ತಾನೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾನೆ ಮತ್ತು ತನ್ನ ಎಲ್ಲಾ ಪ್ರಜ್ಞೆಯಿಂದ ಅವನ ಸಂಕಲ್ಪವನ್ನು ಅನುಸರಿಸುತ್ತಾನೆ.

**8:256–57**

ಈ ಕಷ್ಟ, ಅಸ್ಪಷ್ಟತೆ ಮತ್ತು ಮೂರ್ಖತನದಲ್ಲಿರುವ ಈ ಜಗತ್ತನ್ನು ಕಷ್ಟಗಳಿಂದ ಹೊರತರಲು ಇಡೀ ಪ್ರಕಟಣೆಯಲ್ಲಿ ಅನಂತ ಕೃಪೆಯು ನಿರಂತರವಾಗಿ ಕಾರ್ಯಗೈಯುತ್ತದೆ, ತನ್ನ ಪ್ರಯತ್ನ ಬಿಟ್ಟುಬಿಡದೇ ಎಲ್ಲಾ ಸಮಯದಿಂದಲೂ ಈ ಕೃಪೆ ಕಾರ್ಯನಿರತವಾಗಿದೆ. ಮತ್ತು ಉನ್ನತವಾದ, ಅತೀ ಸತ್ಯವಾದುದು, ಹೆಚ್ಚು ಸುಂದರವಾದುದುರೆಡೆಗೆ ಜಾಗೃತಗೊಳಿಸಲು ಎಷ್ಟು ಸಾವಿರ ವರ್ಷಗಳು ಬೇಕಾಗಿದ್ದವು.

ಯಾರು ತನ್ನಲ್ಲಿ ಕೃಪೆಯ ಕಾರ್ಯಕ್ಕಿರುವ ಪ್ರತಿರೋಧವನ್ನು ಅರಿಯುತ್ತಾನೋ ಅವನು ಜಗತ್ತಿನಲ್ಲಿರುವ ಪ್ರತಿರೋಧವನ್ನು ಅಳೆಯಬಲ್ಲನು.

ಮತ್ತು ಎಲ್ಲಾ ಬಾಹ್ಯ ವಸ್ತುಗಳು, ಎಲ್ಲಾ ಮಾನಸಿಕ ರಚನೆಗಳು, ಎಲ್ಲಾ ಭೌತಿಕ ಪ್ರಯತ್ನಗಳು ವ್ಯರ್ಥ, ಕ್ಷುಲಕವೆಂದು, ಒಂದು ವೇಳೆ ಅವು ಇಡೀಯಾಗಿ ಮೇಲಿನ

ಈ ಬೆಳಕು ಮತ್ತು ಶಕ್ತಿ, ತನ್ನನ್ನು ತಾನು ವ್ಯಕ್ತಪಡಿಸಲು ಪ್ರಯತ್ನಿಸುತ್ತಿರುವ ಈ ಸತ್ಯಕ್ಕೆ ಇಡೀಯಾಗಿ ಮೀಸಲಿಟ್ಟಿದಿದ್ದಲ್ಲಿ ಅವೆಲ್ಲ ವ್ಯರ್ಥವೆಂದು ಯಾವಾಗ ತಿಳಿದುಕೊಳ್ಳುತ್ತಾನೋ ಆಗ ಅವನು ನಿರ್ಣಯಾತ್ಮಕವಾದ ಪ್ರಗತಿ ಸಾಧಿಸಲು ಸಿದ್ಧನಾಗುತ್ತಾನೆ. ಆದ್ದರಿಂದ ಏಕೈಕ, ನಿಜವಾಗಿಯೂ ಪರಿಣಾಮಕಾರಿಯಾದ ಮನೋಧೋರಣೆಯೆಂದರೆ, ನಮಗಿಂತ ಮೇಲಿರುವ ಮತ್ತು ಏಕಮಾತ್ರನೇ ಎಲ್ಲವನ್ನೂ ಬದಲಾಯಿಸುವ ಸಾಮರ್ಥ್ಯವಿರುವವನಿಗೆ, ಸಂಪೂರ್ಣವಾಗಿ, ಇಡಿಯಾಗಿ ಹಾಗೂ ಉತ್ಸಾಹದಿಂದ ನಮ್ಮ ಆಸ್ತಿತ್ವವನ್ನು ಕೊಟ್ಟುಕೊಳ್ಳುವುದು.

ನಿಮ್ಮೊಳಗಿನ ಚೈತನ್ಯಕ್ಕೆ ತೆರೆದಿಟ್ಟುಕೊಂಡಾಗ, ಅದು ನಿಮಗೆ ಉನ್ನತ ಜೀವನದ ಮೊದಲ ಯಾವ ಪೂರ್ವ ಸೂಚನೆಯನ್ನು ನೀಡುತ್ತದೆಯೋ, ಅದು ಏಕಮಾತ್ರ ಬದುಕಲು ಯೋಗ್ಯವಾದುದಾಗಿದೆ..

**9:419–20**

ನೀವು ತರ್ಕವಂತರಾಗಿದ್ದರೆ ಸಹಜವಾಗಿ ಸ್ವಲ್ಪ ಉನ್ನತ ಹಂತದ ಸಂವಾದ ಅಥವಾ ತರ್ಕದಲ್ಲಿ, ಯಾವುದೇ ಎರಡು ವಸ್ತುಗಳು, ಎರಡು ಸಂಯೋಜನೆಗಳು, ಎರಡು ವಿಶ್ವಾತ್ಮಕ ಪ್ರಕಟಣೆಗಳು ಎಂದಿಗೂ ಒಂದೇಯಾಗಿರುವುದಿಲ್ಲ, ಯಾವುದೇ ವಸ್ತುಗಳು ಮರುಕಳಿಸಲು ಹೇಗೆ ಸಾಧ್ಯ? ಇದು ನಿಜವಲ್ಲ, ಕೇವಲ ತೋರಿಕೆ ಮಾತ್ರ. ಮತ್ತು ಈ ರೀತಿಯಾಗಿ ಅನನ್ಯ ನಿಯಮಗಳನ್ನು ರಚಿಸಲು ಮೇಲ್ನೋಟದ ನಿಯಮಗಳಿಂದ ನಿಮ್ಮನ್ನು ನೀವು ಕತ್ತರಿಸಿಕೊಳ್ಳುವ ಅವಶ್ಯಕತೆಯಿಲ್ಲ, ಮನಸ್ಸು ಅನೇಕ ನಿಯಮಗಳನ್ನು ಮಾಡುತ್ತದೆ ಮತ್ತು ಮೇಲ್ಮೈ ಕಡ್ಡಾಯವಾಗಿ ಈ ನಿಯಮಗಳನ್ನು ಅನುಸಿರಿಸದಂತೆ ಕಾಣುತ್ತದೆ, ಆದರೆ ಇದು ಕೇವಲ ಒಂದು ಮೇಲ್ನೋಟ ಆದರೆ ಇದು 'ಚೈತನ್ಯ'ನ ಸೃಜನಾತ್ಮಕ ಶಕ್ತಿಯಿಂದ ಕೃಪೆಯ ನಿಜವಾದ ಶಕ್ತಿಯಿಂದ ನಿಮ್ಮನ್ನು ತೊರೆದುಹಾಕುತ್ತದೆ. ನಿಮ್ಮ ಅಭೀಪ್ಸೆಯಿಂದ ಅಥವಾ ನಿಮ್ಮ ಮನೋಭಾವದಿಂದ ನೀವು ಉನ್ನತ ಮೂಲವಸ್ತುವನ್ನು ಪರಿಚಯಿಸಿದರೆ, ಒಂದು ಹೊಸ ಮೂಲವಸ್ತು – ನಾವು ಈ ಕರೆಯುವ ಅತಿಮಾನಸ ಮೂಲವಸ್ತು, ಈಗಾಗಲೇ ಅಸ್ತಿತ್ವದಲ್ಲಿರುವ ಸಂಯೋಜನೆಗಳನ್ನು ತಕ್ಷಣವೇ ಅವುಗಳ ಸ್ವಭಾವವನ್ನು ಬದಲಿಸಬಹುದು. ಮತ್ತು ಎಲ್ಲಾ ಅವಶ್ಯಕ ಮತ್ತು ತಪ್ಪಿಸಿಕೊಳ್ಳಲಾಗದ ನಿಯಮಗಳನ್ನು ಅಸಂಬದ್ಧವಾಗುತ್ತವೆ.

ನೀವು ನೀವೇ ನಿಮ್ಮ ತಿಳುವಳಿಕೆ, ನಿಮ್ಮ ಮನೋಧೋರಣೆ ಮತ್ತು ಕೆಲವು ಆರೋಪಿಸಲಾದ ತತ್ವಗಳ ಸ್ವೀಕಾರದಿಂದ, ಪವಾಡಗಳ ಸಾಧ್ಯತೆಯ ಬಾಗಿಲನ್ನು ನೀವು ನೀವಾಗಿಯೇ ಮುಚ್ಚಿದಂತೆ. ಅವು ಹೇಗೆ ಆಗುತ್ತವೆ ಎಂದು ಒಬ್ಬರಿಗೆ ತಿಳಿದಾಗ ಅವು ಪವಾಡಗಳೇ ಅಲ್ಲ, ಆದರೆ ಸ್ಪಷ್ಟವಾಗಿ ಬಾಹ್ಯ ಪ್ರಜ್ಞೆಗೆ ಅವು ಪವಾಡ ಸದೃಶ್ಯವಾಗಿ ಕಾಣುತ್ತವೆ, ಮತ್ತು ನೀವು ನಿಮ್ಮಷ್ಟಿಗೆ ತರ್ಕದಿಂದ ಹೇಳಿಕೊಳ್ಳುವುದು ಸಹಜವಾಗಿದೆ–" ಒಳ್ಳೆಯದು ನಾನು ಇದನ್ನು ಮಾಡಿದರೆ, ಅದು ಅವಶ್ಯವಾಗಿ ಜರುಗುತ್ತದೆ, ಅಥವಾ ನಾನು ಇದನ್ನು ಮಾಡದಿದ್ದರೆ, ಅವಶ್ಯವಾಗಿ ಇದು ಬೇರೆಯ ರೀತಿ ಜರುಗುತ್ತದೆ; ಇದು ನೀವು ನೀವಾಗಿಯೇ ಬಾಗಿಲನ್ನು ಮುಚ್ಚಿಕೊಂಡಂತೆ – ಇದು ಕೃಪೆಯ ಸ್ವತಂತ್ರ ಕಾರ್ಯ ಮತ್ತು ನಿಮ್ಮ ಮಧ್ಯೆ ಒಂದು ಉಕ್ಕಿನ ಪರದೆಯನ್ನು ಇಟ್ಟುಕೊಂಡಂತೆ.

**8:315–16** **– ಶ್ರೀಮಾತೆ**

## ಕೃಪೆಯ ಎರಡು ಸ್ವರೂಪಗಳು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಮನುಷ್ಯನ ಆಧ್ಯಾತ್ಮಿಕ ಮಹತ್ವಾಕಾಂಕ್ಷೆಯು ಎಲ್ಲ ಪ್ರಾಪಂಚಿಕ ವಿಷಯಗಳಿಂದ ಹೋರಾಟವನ್ನು ತಪ್ಪಿಸಲು, ಜೀವನದಿಂದ ಪಾರಾಗಲು, ಎಲ್ಲ ಸಂಘರ್ಷದಿಂದ ಮೇಲೆಳಲು, ಎಲ್ಲ ಪ್ರಯತ್ನವನ್ನು ತಪ್ಪಿಸಲು, ಮೌನದೆಡೆಗೆ, ಜಡ ಶಾಂತಿಯೆಡೆಗೆ ಹೊರಳಿದಂಥ ಒಂದು ಸಮಯವಿತ್ತು, ಬಹಳ ಹಿಂದೆ ಅಲ್ಲ; ಎಲ್ಲ ಒತ್ತಡದ, ಸಂಘರ್ಷದ. ಶ್ರಮದ ಅಂತ್ಯದೊಂದಿಗಿನ ತನ್ನೆಲ್ಲ ರೂಪಗಳಲ್ಲಿನ ಯಾತನೆಯನ್ನು ನಿಲ್ಲಿಸಲು ಆಧ್ಯಾತ್ಮಿಕ ಶಾಂತಿ ಸಹ ಅಲ್ಲಿತ್ತು. ಇದನ್ನು ಆಧ್ಯಾತ್ಮಿಕ ಮತ್ತು ದೈವೀ ಜೀವನದ ನೈಜ ಮತ್ತು ಏಕಮಾತ್ರ ಅಭಿವ್ಯಕ್ತಿ ಎಂದು ಪರಿಗಣಿಸಲಾಗಿತ್ತು. ಅದನ್ನು ದೈವಾನುಗ್ರಹ, ದೈವೀ ಸಹಾಯ, ದೈವೀ ಹಸ್ತಕ್ಷೇಪವೆಂದೂ ಪರಿಗಣಿಸಲಾಗಿತ್ತು. ಈಗಲೂ, ಈ ದುಃಖದ, ಒತ್ತಡದ, ಅತಿ ಒತ್ತಡದ ಯುಗದಲ್ಲೂ ಈ ಸರ್ವೋಚ್ಚ ಶಾಂತಿಯು ಎಲ್ಲವುಗಳಲ್ಲಿ ಉತ್ತಮವಾಗಿ ಸ್ವೀಕರಿಸಿದ, ಸುಖಾಗಮನದ, ಜನರು ಕೇಳುವಂಥ ಮತ್ತು ಬಯಸುವಂಥ ಸಾಂತ್ವನದ ಸಹಾಯವಾಗಿದೆ. ಹಲವರಿಗೆ, ಇದು ಇನ್ನೂ ದೈವೀ ಹಸ್ತಕ್ಷೇಪದ, ದೈವೀ ಅನುಗ್ರಹದ ಒಂದು ನಿಜ ಸಂಕೇತವಾಗಿದೆ.

ವಾಸ್ತವದಲ್ಲಿ, ನಾವು ಅರಿತುಕೊಳ್ಳಬೇಕಾದುದನ್ನು ಲೆಕ್ಕಿಸದೆ, ಈ ಪರಿಪೂರ್ಣ ಮತ್ತು ನಿರ್ವಿಕಲ್ಪ ಶಾಂತಿಯನ್ನು ಸ್ಥಾಪಿಸಿಕೊಳ್ಳುವುದರಿಂದ ನಾವು ಪ್ರಾರಂಭ ಮಾಡಬೇಕು; ನಾವು ಕಾರ್ಯಪ್ರವೃತ್ತರಾಗಬೇಕಾಗಿರುವುದು ಈ ತಳದಿಂದ; ಆದರೆ ನಾವು ವಿಶೇಷವಾದ, ವೈಯಕ್ತಿಕ ಮತ್ತು ಅಹಂಕಾರವುಳ್ಳ ವಿಮೋಚನೆಯ ಕನಸು ಕಾಣದ ಹೊರತು ನಮಗಲ್ಲಿ ನಿಲುಗಡೆ ಇಲ್ಲ. ದೈವೀ ಅನುಗ್ರಹದ ಅಂಶವೊಂದಿದೆ– ಅದೇನೆಂದರೆ– ಎಲ್ಲ ಅಡಚಣೆಗಳನ್ನು ಜಯಿಸುವಂಥ ಪ್ರಗತಿಯ ಅಂಶ– ಮಾನವ ಕುಲವನ್ನು ಒಂದು ಹೊಸ ಸಾಕ್ಷಾತ್ಕಾರದೆಡೆಗೆ ನೂಕುವಂಥ ಅಂಶ– ಹೊಸ ಜಗತ್ತಿನ ಕದಗಳನ್ನು ತೆಗೆಯುವಂಥ ಅಂಶ....

**9:298**

ಆ ವಿಷಯಕ್ಕೆ ಅಥವಾ ಆ ಘಟನೆಗೆ ನಮ್ಮ ಪ್ರತಿಕ್ರಿಯೆ ಏನೇ ಆಗಿರಲಿ, ಅದು ಒಳ್ಳೆಯದಾಗಿ ತೋರುತ್ತದೆಯೋ ಅಥವಾ ಕೆಟ್ಟದ್ದಾಗಿ ತೋರುತ್ತದೆಯೋ, ಪ್ರಯೋಜನಕಾರಿಯೋ ಅಥವಾ ದುರಂತವೋ, ಎಲ್ಲದರ ಹಿಂದೆ ಮತ್ತು ಪ್ರತಿ ಘಟನೆಯ ಹಿಂದೆ ದೈವಾನುಗ್ರಹ ಯಾವಾಗಲೂ ಇದ್ದೇ ಇರುತ್ತದೆ.

**10:50–51** **– ಶ್ರೀಮಾತೆ**

## ಒಂದು ಮನೋಭಾವದ ವೃತ್ತಾಂತ

ಒಂದು ಪ್ರಾಮಾಣಿಕ ಅಭೀಪ್ಸೆಯೊಂದಿಗೆ ನೀವು ಆಧ್ಯಾತ್ಮ ಜೀವನಕ್ಕೆ ಬಂದರೆ, ಕೆಲವೊಮ್ಮೆ ಅಹಿತಕರ ವಿಷಯಗಳ ರಾಶಿಯೇ ನಿಮ್ಮ ಮೇಲೆ ಬೀಳುತ್ತದೆ: ನಿಮ್ಮ ಆಪ್ತ ಸ್ನೇಹಿತರೊಂದಿಗೆ ಜಗಳವಾಡುವಿರಿ, ನಿಮ್ಮ ಕುಟುಂಬದವರು ನಿಮ್ಮನ್ನು ಮನೆಯಿಂದ ಹೊರಗೆ ಓಡಿಸುತ್ತಾರೆ, ನೀವು ಪಡೆದುಕೊಂಡಿದ್ದನ್ನು (ಹಾಗೆ ಅಂದುಕೊಂಡಿದ್ದರೆ) ಕಳೆದುಕೊಳ್ಳುತ್ತೀರಿ... ಬಹಳ ಹಿಂದೆ ಒಂದು ಶ್ರೇಷ್ಠ ಅಭೀಪ್ಸೆಯೊಂದಿಗೆ ಮತ್ತು ಬಹಳ ದೀರ್ಘ ಪ್ರಯತ್ನದಿಂದ ಜ್ಞಾನದ ಕಡೆಗೆ ಮತ್ತು ಯೋಗದ ಕಡೆಗೆ ಕೂಡ ಅಭೀಪ್ಸೆಯೊಂದಿಗೆ ಭಾರತದಿಂದ ಬಂದವರೊಬ್ಬರನ್ನು ನಾನು ಬಲ್ಲೆ. ಅದು ಬಹಳ ಸಮಯದ ಹಿಂದಿನ ಮಾತು. ಆಗ ಜನರು ಗಡಿಯಾರದ ಸರವನ್ನು ಮತ್ತು ಆಭರಣಗಳನ್ನು ಧರಿಸುತ್ತಿದ್ದರು. ಈ ಸಭ್ಯಸ್ಥನ ಹತ್ತಿರ ಅವನು ಅಜ್ಜಿಯು ಕೊಟ್ಟಿದ್ದ ಒಂದು ಬಂಗಾರದ ಪೆನ್ಸಿಲ್ ಇತ್ತು ಮತ್ತು ಅವನು ಅದಕ್ಕೆ ಜಗತ್ತಿನ ಅತ್ಯಂತ ಅತ್ಯಮೂಲ್ಯವಾದ ವಸ್ತುವಿನ ಸ್ಥಾನವನ್ನು

ಕೊಟ್ಟಿದ್ದ. ಆ ಪೆನ್ಸಿಲ್ಲನ್ನು ಗಡಿಯಾರದ ಸರಕ್ಕೆ ಅವನು ಕಟ್ಟಿಕೊಂಡಿದ್ದ. ಅವನು ಪಾಂಡಿಚೇರಿಯ ಅಥವಾ ಬಹುಶಃ ಭಾರತದ ಬೇರೆ ಯಾವುದೋ ಅಥವಾ ಕೊಲೊಂಬೊದಲ್ಲಿನ (ಕೊಲೊಂಬೊ ಎಂದು ನಾನು ನಂಬಿದ್ದೇನೆ) ಬಂದರಿಗೆ (port) ಬಂದಿಳಿದರು. ಆಗ ಜನರು ದೊಡ್ಡ ಹಡಗಿನಿಂದ ಇಳಿದು ಒಂದು ಸಣ್ಣ ದೋಣಿಯ ಮುಖಾಂತರ ದಡಕ್ಕೆ ಬರುತ್ತಿದ್ದರು. ಈ ವ್ಯಕ್ತಿಯು ದೊಡ್ಡ ಹಡಗಿನ ಸೇತುವೆಯಿಂದ ಸಣ್ಣ ದೋಣಿಗೆ ಜಿಗಿಯಬೇಕಾಗಿತ್ತು, ಹಾಗೆ ಜಿಗಿಯುವಾಗ ಆಯ ತಪ್ಪಿದಂತಾದಾಗ ತಕ್ಷಣಕ್ಕೆ ಒಂದು ಕಡೆ ವಾಲಿದರು. ಆ ಸಮಯದಲ್ಲಿ ಆ ಬಂಗಾರದ ಪೆನ್ಸಿಲ್ ಸಮುದ್ರದಲ್ಲಿ ಬಿದ್ದು ಪಾತಾಳ ಸೇರಿತು. ಮೊದಲು ಅವನು ಬಹಳೇ ದುಃಖಿತನಾದ, ನಂತರ ತನ್ನಷ್ಟಕ್ಕೆ ತಾನು ಹೀಗೆ ಹೇಳಿಕೊಂಡ: "ಅದು ಭಾರತದ ಪ್ರಭಾವ: ನಾನು ಬಂಧನದಿಂದ ಮುಕ್ತನಾದೆ..." ಪ್ರತಿಯೊಬ್ಬ ಪ್ರಾಮಾಣಿಕ ಮನುಷ್ಯನಿಗೆ ವಿಷಯಗಳು ಈ ರೂಪವನ್ನು ಪಡೆದುಕೊಳ್ಳುತ್ತವೆ. ಮೂಲಭೂತವಾಗಿ, ತೊಂದರೆಗಳ ರಾಶಿಯು ಯಾವಾಗಲೂ ಪ್ರಾಮಾಣಿಕ ವ್ಯಕ್ತಿಗಳಿಗಾಗಿಯೇ ಇರುತ್ತವೆ. ಪ್ರಾಮಾಣಿಕರಲ್ಲದವರು ವಿಷಯಗಳನ್ನು ಅತ್ಯಂತ ಸುಂದರವಾದ ಬಣ್ಣಗಳಿಂದ ತಮ್ಮನ್ನು ತಾವು ಮೋಸಗೊಳಿಸಿಕೊಳ್ಳುವುದಕ್ಕಾಗಿ, ಮತ್ತು ಕೊನೆಯಲ್ಲಿ ತಾವು ತಪ್ಪು ತಿಳಿದಿದ್ದೇವೆ ಎಂದು ಸಮರ್ಥಿಸಿಕೊಳ್ಳಲು ಸ್ವೀಕರಿಸುತ್ತಾರೆ.

**5:157** **– ಶ್ರೀಮಾತೆ**

## ಕೃಪೆಯನ್ನು ಆಹ್ವಾನಿಸುವುದು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

*ಅನುಗ್ರಹದ(ಕೃಪೆಯ) ಮಧ್ಯ ಪ್ರವೇಶವು ಕರೆಯ ಮುಖಾಂತರ ಬರುತ್ತದೆಯೆ?*

ನಾವು ಯಾರಾದರು ಕರೆದರೆ? ಹಾಗೆಂದು ಭಾವಿಸುತ್ತೇನೆ. ಅದೇನೆ ಇರಲಿ, ಪ್ರತ್ಯೇಕವಾಗಿ ಮತ್ತು ಒಬ್ಬನಿಗೆ ಅಲ್ಲ. ನಮಗೆ ಅನುಗ್ರಹದಲ್ಲಿ ನಂಬಿಕೆ ಮತ್ತು ಆಕಾಂಕ್ಷೆ ಇದ್ದರೆ ಮತ್ತು ಒಂದು ಚಿಕ್ಕ ಮಗು ತನ್ನ ತಾಯಿಯ ಹತ್ತಿರ ಓಡಿ "ಅಮ್ಮಾ ಇದನ್ನು ನನಗೆ ಕೊಡು" ಎನ್ನುವ ರೀತಿಯಲ್ಲಿ ನಾವು ಮಾಡಿದರೆ ನಿಶ್ಚಯವಾಗಿಯೂ ಹೌದು. ಸರಳತೆಯಿಂದ ಕರೆದಾಗ ದೈವಾನುಗ್ರಹದ ಕಡೆಗೆ ತಿರುಗಿ "ಇದನ್ನು ನನಗೆ ಕೊಡು" ಎಂದು ಹೇಳಿದಾಗ ದೈವವು ಕೇಳಿಸಿಕೊಳ್ಳುತ್ತದೆ ಎಂದು ನನ್ನ ನಂಬಿಕೆ. ಒಳ್ಳೆಯದಲ್ಲದ್ದನ್ನು ನಮಗಾಗಿ ಏನನ್ನಾದರೂ ಕೇಳಿದರೆ, ದೈವವು ಆ ಕರೆಯನ್ನು

ಕೇಳಿಸಿಕೊಳ್ಳುವುದಿಲ್ಲ. ಅಪಾಯ ಮಾಡುವಂಥದ್ದನ್ನು ಅಥವಾ ಅನುಕೂಲವಾಗದ್ದನ್ನು ದೈವದಿಂದ ಬೇಡಿದಾಗ ಅದು ಕೇಳಿಸಿಕೊಳ್ಳುವುದಿಲ್ಲ.

*ಈ ಕರೆಯ ಪರಿಣಾಮದ ಕಾರಣವೇನು?*

ಬಹುಶಃ ನಾವು ಕರೆಯಬೇಕೆಂದು ವಿಧಿಲಿಖಿತ ಇರಬಹುದು. ಅದು ಹೇಗೆಂದರೆ: ಕೋಳಿಯು ಮೊಟ್ಟೆಯನ್ನು ಸೃಷ್ಟಿಸಿತೋ ಅಥವಾ ಮೊಟ್ಟೆ ಕೋಳಿಯನ್ನು ಸೃಷ್ಟಿಸಿತೋ ಎಂಬಂತೆ. ಅನುಗ್ರವು ನೀನು ಅನುಗ್ರವನ್ನು ಕರೆಯುವಂತೆ ಮಾಡುತ್ತದೆಯೋ ಅಥವಾ ಅನುಗ್ರಹವನ್ನು ಕರೆದಿದ್ದರಿಂದ ಅನುಗ್ರವು ಬರುತ್ತದೆಯೋ ಎಂಬುದು ನನಗೆ ತಿಳಿಯದು. ಅದನ್ನು ಹೇಳುವುದು ಕಷ್ಟ.

ಮೂಲಭೂತವಾಗಿ, ಅತಿ ಹೆಚ್ಚಾಗಿ ಕೊರತೆ ಇರುವ ಸಾಧ್ಯತೆ ಏನೆಂದರೆ, ನಂಬಿಕೆ. ಆಲೋಚನೆಯಲ್ಲಿ ಸಂಶಯಪಡುವಂಥ ಮತ್ತು ವಾಗ್ವಾದ ಮಾಡುವಂಥ ಒಂದು ಸಣ್ಣ ಅಂಶವು ಯಾವಾಗಲೂ ಇರುತ್ತದೆ. ಅದು ಎಲ್ಲವನ್ನೂ ಹಾಳು ಮಾಡುತ್ತದೆ. ನಾವು ಒಂದು ಸ್ಪಷ್ಟವಾದ ಆಪತ್ತಿನ ಪರಿಸ್ಥಿತಿಯಲ್ಲಿ ಇದ್ದಾಗ, ಮನಸ್ಸು ತಾನು ಏನನ್ನೂ ಮಾಡಲಾರೆ ಎಂದು ಅರಿತಾಗ, ಅದು ಮೂರ್ಖನಾಗಿ ಮತ್ತು ಅಸಮರ್ಥನಾಗಿ ನಿಂತಾಗ, ಆ ಕ್ಷಣದಲ್ಲಿ ನಾವು ಉನ್ನತ ಸಹಾಯಕ್ಕಾಗಿ ಹಂಬಲಿಸಿದರೆ, ಆ ಹಂಬಲವು ಹತಾಶೆಯಿಂದ ಬರುವ ಆ ರೀತಿಯ ತೀಕ್ಷ್ಣತೆಯನ್ನು ನಿಖರವಾಗಿ ಹೊಂದಿದೆ ಮತ್ತು ಅದು ಪರಿಣಾಮಗಳನ್ನು ಆಕ್ರಮಿಸುತ್ತದೆ. ಆದರೆ ನಿಮ್ಮ ಯೋಚನೆಯು ವಾದಿಸುತ್ತ ಹೋದರೆ ಮತ್ತು ಅದು ಹೀಗೆ ಹೇಳಿದರೆ: "ಹೌದು, ಹೌದು, ನಾನು ಅಭಿಪ್ಸೆ ಪಟ್ಟಿದ್ದೇನೆ, ಪ್ರಾರ್ಥಿಸಿದ್ದೇನೆ, ಆದರೆ ಈ ಕ್ಷಣವಿದ್ದರೆ, ಅದು ಬರುವುದೋ ಅಥವಾ ಅದು ಸಾಧ್ಯವಾಗುವುದೋ, ಎಂದು ದೇವರಿಗೆ ಗೊತ್ತು", ಆಗ ಅದು ಮುಗಿದಂತೆಯೇ, ಅದು ಕೆಲಸ ಮಾಡಲಾರದು. ಇದು ಅತ್ಯಂತ ಸಾಮಾನ್ಯವಾದ ಸಂಗತಿಗಳಲ್ಲಿ ಒಂದು....

**5:366–67**

...ದೈವಾನುಗ್ರಹದಲ್ಲಿ ನಮ್ಮ ವಿಶ್ವಾಸವಿದ್ದರೆ, ಜಗತ್ತಿನಲ್ಲಿ ದೈವಾನುಗ್ರಹ ಎಂಬುದೊಂದು ಏನೋ ಒಂದು ವಸ್ತುವಿದೆ ಎಂಬ ನಂಬಿಕೆ ಇದ್ದರೆ, ಮತ್ತು ಈ ಒಂದು ವಸ್ತುವು ಪ್ರಾರ್ಥನೆಗೆ, ಅಭಿಪ್ಸೆಗೆ, ಆಹ್ವಾನಕ್ಕೆ ಮರುತ್ತರ ನೀಡಬಹುದಾದರೆ..., ಆಗ ನಮ್ಮ ಮಾನಸಿಕ ಸ್ವರೂಪ ನಿರ್ಮಾಣ ಮಾಡಿಕೊಂಡ

ನಂತರ, ಅದನ್ನು ಅನುಗ್ರಹಕ್ಕೆ ಅರ್ಪಿಸಿ ಅದರಲ್ಲಿ ನಮ್ಮ ವಿಶ್ವಾಸವನ್ನಿಟ್ಟು ಅದರ ಮಧ್ಯ ಪ್ರವೇಶಕ್ಕೆ ಕೇಳಿಕೊಂಡರೆ ಮತ್ತು ಅದು ಮಧ್ಯ ಪ್ರವೇಶಿಸುವುದು ಎಂಬ ನಂಬಿಕೆ ಇದ್ದರೆ, ಆಗ ಸಫಲತೆಯ ಅವಕಾಶ ನಿಜಕ್ಕೂ ನಮ್ಮೊಂದಿಗಿರುತ್ತದೆ. ಪ್ರಯತ್ನ ಮಾಡಿ, ನೀವು ನಿಶ್ಚಯವಾಗಿಯೂ ಫಲಿತಾಂಶವನ್ನು ಕಾಣುವಿರಿ.

*ಆದರೆ, ಶ್ರೀಮಾತೆಯವರೆ, ನಾವು ಪ್ರಾಮಾಣಿಕವಾಗಿ ಅನುಗ್ರಹದ(ಕೃಪೆಯ) ಮಧ್ಯಸ್ಥಿಕೆಗೆ ಪ್ರಾರ್ಥಿಸಿದಾಗ, ನಾವು ಒಂದು ನಿರ್ದಿಷ್ಟ ಫಲಿತಾಂಶವನ್ನು ನಿರೀಕ್ಷಿಸಿರುವದಿಲ್ಲವೆ?*

ಕ್ಷಮಿಸಿ, ಅದು ನಮ್ಮ ಪ್ರಾರ್ಥನೆಯ ತೀವ್ರತೆ ಅಥವಾ ಅವಧಿಯ ಮೇಲೆ ಅವಲಂಬಿಸಿದೆ. ನಾವು ಬರೀ ಅನುಗ್ರಹವನ್ನು ಅಥವಾ ದೈವವನ್ನು ಆಹ್ವಾನಿಸಿ ನಮ್ಮನ್ನು ನಾವು ಅದರ ಕರದಲ್ಲಿರಿಸಿಕೊಂಡರೆ ನಾವು ಒಂದು ನಿರ್ದಿಷ್ಟ ಪರಿಣಾಮವನ್ನು ನಿರೀಕ್ಷಿಸುವಂತಿಲ್ಲ. ಒಂದು ನಿರ್ದಿಷ್ಟವಾದ ಫಲಿತಾಂಶವನ್ನು ನಿರೀಕ್ಷಿಸಲು ನಾವು ನಮ್ಮ ಪ್ರಾರ್ಥನೆಯನ್ನು ವ್ಯವಸ್ಥಿತವಾಗಿ ಸಿದ್ಧಪಡಿಸಿಕೊಳ್ಳಬೇಕು, ಮತ್ತು ಏನನ್ನು ಬೇಕೊ ಅದನ್ನು ಕೇಳಿಕೊಳ್ಳಬೇಕು. ದೈವಾನುಗ್ರಹಕ್ಕಾಗಿ ಮತ್ತು ಅದನ್ನು ಅಹ್ವಾನಿಸಲಿಕ್ಕಾಗಿ, ದೈನ್ಯದಿಂದ ಕೇಳಲು ನಿಮ್ಮಲ್ಲಿ ಬರೀ ಒಂದು ದೊಡ್ಡ ಹಂಬಲವಿದ್ದು, ಖಚಿತವಾಗಿ ಏನನ್ನೂ ಕೇಳದೆ ಹೋದರೆ, ಆಗ ನಿನಗೇನು ಬೇಕು ಎಂಬುದನ್ನು ಅನುಗ್ರಹವು ಆಯ್ಕೆ ಮಾಡುತ್ತದೆ, ನೀನಲ್ಲ.

*ಅದು ಉತ್ತಮವಾಗಿದೆ, ಹೌದಲ್ಲವೆ?*

ಆಹ್! ಅದೊಂದು ಬೇರೆಯದೆ ಪ್ರಶ್ನೆ.

ಯಾಕೆ, ಬಹುಶಃ ಅದು ಗುಣಮಟ್ಟದಲ್ಲಿ ಉತ್ತಮವಾಗಿದೆ. ಆದರೆ, ಯಾರಾದರು ಇನ್ನೂ ಖಚಿತವಾದದ್ದನ್ನು ಬೇಡಿದರೆ, ಅದನ್ನು ಸೂತ್ರೀಕರಿಸುವುದು ಉತ್ತಮ. ಅನುಗ್ರಹವನ್ನು ಆಹ್ವಾನಿಸಲಿಕ್ಕಾಗಿ ಒಂದು ವಿಶೇಷ ಕಾರಣವಿದ್ದರೆ, ಅದನ್ನು ನಿಖರವಾಗಿ ಮತು ಸ್ಪಷ್ಟವಾಗಿ ಸೂತ್ರಿಕರಿಸುವುದು ಉತ್ತಮ.

ಸಹಜವಾಗಿ, ನಾವು ಪೂರ್ಣ ಶರಣಾಗತಿಯ ಸ್ಥಿತಿಯಲ್ಲಿದ್ದರೆ ಮತ್ತು ನಮ್ಮನ್ನು ನಾವು ಸಂಪೂರ್ಣವಾಗಿ ಅರ್ಪಿಸಿಕೊಂಡರೆ, ನಮ್ಮನ್ನು ನಾವು ಅನುಗ್ರಹಕ್ಕೆ ಸಮರ್ಪಿಸಿಕೊಂಡರೆ, ಅದಕ್ಕೇನು ತೋಚುತ್ತದೆಯೋ ಅದನ್ನು ಮಾಡಲಿ, ಅದು ಬಹಳ ಉತ್ತಮ. ಆದರೆ ಅದರ ನಂತರ ಅದು ಏನು ಮಾಡಿತು

ಎನ್ನುವ ಬಗ್ಗೆ ಪ್ರಶ್ನೆಯನ್ನು ಎತ್ತಬಾರದು! “ಓಹ್! ಇದನ್ನು ಹೊಂದುವ ಯೋಚನೆಯಿಂದ ನಾನದನ್ನು ಮಾಡಿದೆ,” ಎಂದು ನಾವು ಹೇಳಬಾರದು. ನಮಗೆ ಏನನ್ನಾದರು ಪಡೆದುಕೊಳ್ಳುವ ಯೋಚನೆ ನಿಜವಾಗಿಯೂ ಇದ್ದರೆ, ಎಲ್ಲ ಪ್ರಾಮಾಣಿಕತೆಯಲ್ಲಿ, ಸರಳತೆಯಲ್ಲಿ ಎಲ್ಲರೂ ಕಾಣುವಂತೆ ಅದನ್ನು ಸೂತ್ರೀಕರಿಸುವುದು ಉತ್ತಮ. ನಂತರ, ಅದನ್ನು ಮಾಡಲು ಆಯ್ಕೆ ಮಾಡಿಕೊಳ್ಳಲು ಬಿಡುವುದು ಅನುಗ್ರಹಕ್ಕೆ ಬಿಟ್ಟ ವಿಷಯ: ಆದರೆ ಯಾವುದೇ ಸ್ಥಿತಿಯಲ್ಲಿ ನಮಗೇನು ಬೇಕೋ ಅದನ್ನು ಸೂತ್ರೀಕರಿಸಿಕೊಳ್ಳಬೇಕು. ಅದರಲ್ಲಿ ಯಾವುದೇ ಅಪಾಯವಿಲ್ಲ.

ನಮ್ಮ ಪ್ರಾರ್ಥನೆ ಸರಿ ಇಲ್ಲದಿದ್ದಾಗ ಮತ್ತು ಪ್ರತಿಭಟಿಸಿದಾಗ, ಅದು ಕೆಟ್ಟದಾಗಿ ಬರುತ್ತದೆ. ಆ ಕ್ಷಣದಲ್ಲಿ ನಮ್ಮಲ್ಲಿರುವ ಬಯಕೆ ಅಥವಾ ಅಭೀಪ್ಸೆ ಪ್ರಭುದ್ಧವಾಗಿರಲಿಕ್ಕಿಲ್ಲ ಹಾಗೂ ಬಹುಶಃ ನಮಗಾವುದೂ ಉತ್ತಮವೆಂದು ಅನಿಸದೇ ಇರುವ ಏನನ್ನೋ ಕೇಳಿರಬಹುದು ಎಂದು ನಾವು ತಿಳಿಯಬೇಕು. ಆ ಸಮಯದಲ್ಲಿ ನಾವು ಬುದ್ಧಿವಂತರಾಗಬೇಕು ಮತ್ತು ಹೀಗೆ ಹೇಳಬೇಕು: “ಒಳ್ಳೆಯದು, ನಿಮ್ಮಿಚ್ಛೆಯಂತಾಗಲಿ.” ನಮ್ಮಲ್ಲಿ ಆಂತರಿಕ ಅನುಭವ ಮತ್ತು ಆಂತರಿಕ ಆಯ್ಕೆ ಇರುವವರೆಗೆ ಅದನ್ನು (ಬೇಡಿಕೆ) ರೂಪಿಸುವುದರಲ್ಲಿ ಯಾವುದೇ ಅಪಾಯವಿಲ್ಲ. ಅದೊಂದು ಸ್ವಾಭಾವಿಕ ಪ್ರಕ್ರಿಯೆ.

ಉದಾಹರಣೆಗಾಗಿ, ನಾವು ಮೂರ್ಖರಿದ್ದಾಗ ಅಥವಾ ಏನೋ ಒಂದು ತಪ್ಪು ಮಾಡಿದಾಗ, ನಾವು ಅದನ್ನು ಮತ್ತೊಮ್ಮೆ ಎಂದಿಗೂ ಮಾಡುವುದಿಲ್ಲವೆಂದು ಸತ್ಯವಾಗಿ, ಪ್ರಾಮಾಣಿಕವಾಗಿ ಬಯಸಿದಾಗ, ಅದನ್ನು ಕೇಳುವುದರಲ್ಲಿ ಯಾವುದೇ ಅಪಾಯವಿಲ್ಲವೆಂದು ನನಗನಿಸುತ್ತದೆ. ಅದನ್ನು ನಾವು ಪ್ರಾಮಾಣಿಕತೆಯಿಂದ ಕೇಳಿಕೊಂಡರೆ (ಸತ್ಯವಾದ ಆಂತರಿಕ ಪ್ರಾಮಾಣಿಕತೆ) ಅದಕ್ಕೆ ದೈವವು ಸಮ್ಮತಿಸುವ ಅವಕಾಶ ಹೆಚ್ಚಾಗುತ್ತದೆ.

ದೈವವು ನಿಮಗೆ ವಿರುದ್ಧವಾಗಿದೆ ಎಂದು ನೀವು ಯೋಚಿಸಬಾರದು. ಹಾಗೆ ಮಾಡುವ ಉತ್ಸುಕತೆ ಆ ದೈವಕ್ಕಿಲ್ಲ! ನಿಮಗೆ ಯಾವುದು ಉತ್ತಮವಾಗಿದೆಯೋ, ನಿಮಗಿಂತ ಹೆಚ್ಚು ಆ ದೇವರಿಗೆ ಗೊತ್ತು; ಆದರೆ ಅದನ್ನು ಬಿಡಲಿಕ್ಕೆ ಬಾರದ ಸ್ಥಿತಿ ಇದ್ದಾಗ ಮಾತ್ರ ದೈವವು ನಿಮ್ಮ ಅಭಿಪ್ಸೆಯನ್ನು ವಿರೋಧಿಸುತ್ತದೆ. ಇಲ್ಲದಿದ್ದರೆ ನೀವೇನು ಕೇಳುತ್ತೀರೋ ಅದನ್ನು ಕೊಡಲು ಅವನು (ದೇವರು) ಯಾವಾಗಲೂ ಸಿದ್ಧನಿರುತ್ತಾನೆ.

**8:253–55** **– ಶ್ರೀಮಾತೆ**

# ನಮ್ರತೆ ಮತ್ತು ಕೃತಜ್ಞತೆ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

*ಕೃತಜ್ಞತೆಯಿಂದ ನಮ್ರತೆಯನ್ನು ಸ್ವೀಕರಿಸಲು ಇರುವ ಮಾರ್ಗ ಯಾವುದು?*

ಆಹ್! ಅದು ಅವಶ್ಯವಾಗಿ ಬೇಕೆಂಬ ಭಾವ ಮೊದಲು ನಿನ್ನಲ್ಲಿರಬೇಕು.

ಇದು ಅತ್ಯಂತ ಮಹತ್ವದ ಅಂಶ. ಅನುಗ್ರಹವಿಲ್ಲದೆ ನಿನ್ನ ಅಸಹಾಯಕತೆಯನ್ನು, ಅದಿಲ್ಲದಿದ್ದರೆ ನೀನು ಅಪೂರ್ಣ ಮತ್ತು ದುರ್ಬಲನೆಂದು ಅರಿವಾಗುವಂತೆ ಮಾಡುವ ಒಂದು ನಿಶ್ಚಿತ ಆಂತರಿಕ ನಮ್ರತೆಯನ್ನು ಹೊಂದಬಹುದಾಗಿದೆ. ಆರಂಭಿಸಬೇಕಾದರೆ ಮೊದಲು ಬೇಕಾದ ಅಂಶ ಇದಾಗಿದೆ...

ಇದು ಮೊದಲನೆಯ ಷರತ್ತು. ಆನಂತರ ಅನುಗ್ರಹವು ಮಾತ್ರ ಅದನ್ನು ಮಾಡಬಹುದು, ನೀನಿದ್ದ ಪರಿಸ್ಥಿತಿಯಿಂದ ನಿನ್ನನ್ನು ಹೊರಗೆಳೆಯುವುದೆಂಬ ಅರಿವು ನಿನಗೆ ಬಂದಾಗ ನಿನ್ನಲ್ಲಿ ಸಹಜವಾಗಿಯೇ ಒಂದು ತೀವ್ರತರವಾದ ಅಭೀಪ್ಸೆಯು (ತೆರೆದುಕೊಳ್ಳುವಿಕೆಯಲ್ಲಿ ರೂಪಾಂತರವಾಗುವಂಥ ಒಂದು ಪ್ರಜ್ಞೆ) ಜಾಗೃತವಾಗುತ್ತದೆ. ನೀನು ಕೂಗಿದರೆ, ಹಂಬಲಿಸಿದರೆ ಮತ್ತು ಉತ್ತರ ಪಡೆದುಕೊಳ್ಳುವೆನೆಂಬ ವಿಶ್ವಾಸವಿದ್ದರೆ, ಸಹಜವಾಗಿಯೇ ನೀನು ಅನುಗ್ರಹಕ್ಕೆ ತೆರೆದುಕೊಳ್ಳುವಿ.

ತರುವಾಯ, ಇದಕ್ಕೆ ನೀನು ಗಮನವನ್ನು ಕೊಡಲೇಬೇಕು (ಶ್ರೀಮಾತೆಯವರು ತಮ್ಮ ಬೆರಳನ್ನು ತಮ್ಮ ತುಟಿಯ ಮೇಲಿಟ್ಟುಕೊಳ್ಳುತ್ತಾರೆ) – ಅನುಗ್ರಹವು ನಿನಗೆ ಉತ್ತರಿಸುತ್ತದೆ, ಅನುಗ್ರಹವು ತೊಂದರೆಯಿಂದ ನಿನ್ನನ್ನು ಹೊರಗೆ ತರುತ್ತದೆ, ನಿನ್ನ ಕಠಿಣ ಪರಿಸ್ಥಿತಿಯಿಂದ ಹೊರಬರಲು ಸಹಾಯ ಮಾಡುತ್ತದೆ. ಒಂದೊಮ್ಮೆ ನೀನು ತೊಂದರೆಗಳಿಂದ, ಕಠಿಣತೆಗಳಿಂದ ಬಿಡುಗಡೆ ಹೊಂದಿದಾಗ, ಅನುಗ್ರಹವು ನಿನಗೆ ಸಹಾಯ ಮಾಡಿತ್ತೆಂಬುದನ್ನು ಮರೆಯಬಾರದು ಮತ್ತು ಅದು ನಿನ್ನಿಂದಾಯಿತೆಂದು ಭಾವಿಸಬೇಡ. ಸತ್ಯವಾಗಿಯೂ ಇದು ಒಂದು ಮಹತ್ವದ ಅಂಶವಾಗಿದೆ. ಬಹಳಷ್ಟು ಜನರು, ಒಮ್ಮೆ ತೊಂದರೆಯು ಹೋಯಿತೆಂದರೆ "ಆ ತೊಂದರೆಯಿಂದ ಸಲೀಸಾಗಿ ನಾನೇ ಹೊರಬಂದೆ" ಎಂದು ಹೇಳುತ್ತಾರೆ.

ನೀನು ಬಾಗಿಲನ್ನು ಮುಚ್ಚಿ ಚಿಲಕವನ್ನು ಹಾಕಿದಾಗ, ಇನ್ನೆಂದೂ ಏನನ್ನೂ ನೀವು ಸ್ವೀಕರಿಸಲಾಗುವುದಿಲ್ಲ. ಈ ರೀತಿಯ ಆಂತರಿಕ ಮೂರ್ಖತನವನ್ನು ಬಿಟ್ಟು ಬಿಡಲು ಮತ್ತು ನೀನು ಏನನ್ನೂ ಮಾಡಲಾರೆ ಎಂದು ಇನ್ನೊಮ್ಮೆ ಅರಿವಾಗಲು

ನಿನಗೆ ಮತ್ತೊಮ್ಮೆ ತೀವ್ರ ದುಃಖ, ಭಯಾನಕ ಕಷ್ಟ ಬೇಕಾಗುತ್ತದೆ. ನೀನು ದುರ್ಬಲನೆಂದು ನಿನಗೆ ಅರಿವಾದಾಗ ಮಾತ್ರ ನೀನು ಕೊಂಚ ತೆರೆದುಕೊಳ್ಳಲು ಮತ್ತು ಮೃದುವಾಗಲು ಆರಂಭಿಸುವಿ. ಎಲ್ಲಿಯವರೆಗೆ ನೀನು ಮಾಡುವುದಿಲ್ಲವೋ ನಿನ್ನ ಕೌಶಲ ಮತ್ತು ಸಾಮರ್ಥ್ಯದ ಮೇಲೆ ಅವಲಂಬಿಸಿದೆ ಎಂದು ನೀನು ಯೋಚಿಸುತ್ತೀಯೋ, ಆಗ ನೀನು ಒಂದು ಕದವನ್ನು ಮಾತ್ರ ಮುಚ್ಚುವುದಿಲ್ಲ. ಆದರೆ ನೀನು ಹಲವಾರು ಕದಗಳನ್ನು ಮುಚ್ಚುವಿ ಮತ್ತು ಅವುಗಳಿಗೆ ಚಿಲಕ ಹಾಕುವಿ. ಏನೂ ಪ್ರವೇಶ ಮಾಡಲಾರದ ಕೋಟೆಯಲ್ಲಿ ನಿನ್ನನ್ನು ನೀನು ಕೂಡಿ ಹಾಕಿಕೊಳ್ಳುವಿ. ಅದೊಂದು ದೊಡ್ಡ ನ್ಯೂನತೆ: ನಾವದನ್ನು ಬೇಗನೆ ಮರೆಯುತ್ತೇವೆ. ಸಹಜವಾಗಿಯೇ ನಾವು ನಮ್ಮ ಸ್ವ–ಸಾಮರ್ಥ್ಯದೊಂದಿಗೆ ತೃಪ್ತರಾಗುತ್ತೇವೆ...

ಆಹ್, ಪ್ರಾಮಾಣಿಕರಾಗಿರುವುದು ತುಂಬಾ ಕಷ್ಟ... ಅದರಿಂದಲೇ ಹೊಡೆತಗಳು ಹೆಚ್ಚುತ್ತವೆ ಮತ್ತು ಕೆಲವೊಮ್ಮೆ ಭಯಂಕರವಾಗಿರುತ್ತವೆ. ಇದೊಂದು ಮಾತ್ರ ನಿಮ್ಮ ಮೂರ್ಖತನವನ್ನು ತಡೆಯಬಹುದು. ಅನಾಹುತಗಳಿಗೆ ಇದು ಸಮರ್ಥನೆ–ಯಾಗಿರುತ್ತದೆ. ಯಾವಾಗ ನೀವು ತೀವ್ರವಾದ ನೋವಿನ ಸ್ಥಿತಿಯಲ್ಲಿರುತ್ತೀರೋ ಮತ್ತು ಏನೋ ಒಂದು ನಿಮ್ಮನ್ನು ಆಳವಾಗಿ ಪರಿಣಾಮ ಮಾಡಿದಾಗ ನಿಮ್ಮ ಮೂರ್ಖತನವು ಕೊಂಚ ಕರಗಿ ಹೋಗುವಂತೆ ಮಾಡುತ್ತದೆ. ನೀವು ಹೇಳಿದಂತೆ, ಕರಗಿ ಹೋಗುವಂಥಾದ್ದು ಇದ್ದಾಗಲೂ ಒಳಗಡೆ ಏನೋ ಒಂಚೂರು ಇನ್ನೂ ಉಳಿಯುತ್ತದೆ. ಆದುದರಿಂದಲೇ ಅದು ದೀರ್ಘಕಾಲದವರೆಗೆ ಇರುತ್ತದೆ.

ನಾವು ಏನೂ ಅಲ್ಲ, ಅತೀ ದುರ್ಬಲರು, ನಾವೇನೂ ಮಾಡಲಾರೆವು, ನಮ್ಮ ಅಸ್ತಿತ್ವವೇದ ಇಲ್ಲ, ದೈವ ಪ್ರಜ್ಞೆ ಮತ್ತು ದೈವಾನುಗ್ರಹವಿಲ್ಲದ ವಸ್ತುವೇ ಇಲ್ಲ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದರೆ ಎಷ್ಟು ಹೊಡೆತಗಳು ಬೇಕಾಗಬಹುದು. ಅದನ್ನು ತಿಳಿದುಕೊಂಡ ಕ್ಷಣದಿಂದ ಎಲ್ಲ ತೊಂದರೆಗಳು ಹೋಗಿ ಬಿಡುತ್ತವೆ. ಅದನ್ನು ನಾವು ಸಮಗ್ರವಾಗಿ ತಿಳಿದಾಗ ಮತ್ತು ವಿರೋಧಿಸುವಂಥದ್ದು ಏನೂ ಇಲ್ಲದಿದ್ದಾಗ... ಆದರೆ ಆ ಕ್ಷಣದವರೆಗೆ... ಅದು ಬಹಳ ಸಮಯ ತೆಗೆದುಕೊಳ್ಳುತ್ತದೆ.

**6:322–24** **– ಶ್ರೀಮಾತೆ**

ಮನುಷ್ಯ ಜೀವಿಗೆ ಏನನ್ನು ಸ್ವೀಕರಿಸಲು ಸಾಧ್ಯವಿದೆಯೋ,
ದೈವೀ ಸಹಾಯವು ಅದಕ್ಕಿಂತ ಹೆಚ್ಚು ವಿಶಾಲವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/89** **– ಶ್ರೀಮಾತೆ**

# ಕಷ್ಟಗಳು ಮತ್ತು ಅನುಗ್ರಹ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ತೊಂದರೆಗಳು ನಿಮ್ಮನ್ನು ಪೀಡಿಸಿದಾಗ (ಘೇರಾಯಿಸಿದಾಗ) ದೈವಾನುಗ್ರಹವು ನಿಮ್ಮ ಜೊತೆಗಿದೆ ಎಂದು ತಿಳಿಯಿರಿ.

**14:**

ಜೀವನದ ಎಲ್ಲ ಸನ್ನಿವೇಶಗಳು ಮನದಾಚೆಯ, ದೈವಾನುಗ್ರಹದಲ್ಲಿನ ನಮ್ಮ ನಂಬಿಕೆಯು ಎಲ್ಲ ಪೀಡೆಗಳನ್ನು ಎದುರಿಸಲು, ಎಲ್ಲ ದೌರ್ಬಲ್ಯಗಳನ್ನು ಜಯಿಸಲು ಮತ್ತು ನಮಗೆ ಶಾಂತಿ ಹಾಗೂ ಆನಂದವನ್ನು ಮಾತ್ರವಲ್ಲದೆ ಭೌತಿಕ ಸಮತೋಲನ ಹಾಗೂ ಉತ್ತಮ ಆರೋಗ್ಯವನ್ನು ಕೊಡುವಂಥ ದೈವೀ ಪ್ರಜ್ಞೆಯ ಜೊತೆಗೆ ಸಂಪರ್ಕವನ್ನು ಕಂಡುಕೊಳ್ಳಲು ನಮಗೆ ಬಲವನ್ನು ಕೊಡುತ್ತವೆ ಎಂದು ಪಾಠ ಕಲಿಸಲು ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ.

**10:320**

ನಮ್ಮ ಆಂತರ್ಯದಲ್ಲಿ ದೈವಾನುಗ್ರಹದ ಮೇಲೆ ನಂಬಿಕೆ ಇದ್ದರೆ, ದೈವಾನುಗ್ರಹವು ನಮ್ಮನ್ನು ಗಮನಿಸುತ್ತಿರುತ್ತದೆ, ಏನೇ ಸಂಭವಿಸಿದರೂ ದೈವಾನುಗ್ರಹವು ಅಲ್ಲಿರುತ್ತದೆ, ಈ ನಂಬಿಕೆಯನ್ನು ಯಾವಾಗಲೂ ನಮ್ಮ ಜೀವನದಲ್ಲಿ ಇಟ್ಟುಕೊಳ್ಳಬೇಕು; ಮತ್ತು ಈ ನಂಬಿಕೆಯಿಂದ ಎಲ್ಲ ಅಪಾಯಗಳಿಂದ ಪಾರಾಗಬಹುದು, ಎಲ್ಲ ತೊಂದರೆಗಳನ್ನು ಎದುರಿಸಬಹುದು, ಯಾವುದೂ ನಮ್ಮನ್ನು ಅಲುಗಿಸಲಾರದು. ನಿಮ್ಮ ದೈಹಿಕ ಸ್ಥಿತಿಗತಿಗಳ ಮೇಲೆ ಅವಲಂಬಿಸಿರದ ದೈವಾನುಗ್ರಹವನ್ನು ಬಿಟ್ಟು ಬೇರೆ ಯಾವುದರ ಮೇಲೂ ಅವಲಂಬಿಸಿರದ ನಿಮ್ಮ ನಂಬಿಕೆಯು ಅಪಾರ ಬಲಿಷ್ಠವಾಗಿದೆ, ಹೆಚ್ಚು ಅರಿವುಳ್ಳದ್ದಾಗಿದೆ, ಶಾಶ್ವತವಾಗಿರುವಂಥದ್ದಾಗಿದೆ. ಆದ್ದರಿಂದ ಅದು ಸತ್ಯದ ಮೇಲೆ ಆಶ್ರಯಿಸಿದೆ ಮತ್ತು ಅದನ್ನು ಯಾವುದೂ ಅಲುಗಾಡಿಸಲಾರದು.

**5:297**

...ದುರ್ಬಲತೆಯ ಚರ್ಚೆಯು ಅನ್ವಯಿಸುವುದಿಲ್ಲ. ತಮ್ಮನ್ನು ತಾವು ತಿದ್ದಿಕೊಳ್ಳಲು ನಿರ್ಧರಿಸಿದವರಿಗೆ ದೈವಾನುಗ್ರಹವು ಯಾವಾಗಲೂ ಸಹಾಯ ಮಾಡುತ್ತದೆ. "ನನ್ನಷ್ಟಕ್ಕೆ ನಾನು ತಿದ್ದಿಕೊಳ್ಳುವಷ್ಟು ದುರ್ಬಲ" ಎಂದು ಅವರು ಹೇಳುವಂತಿಲ್ಲ. ತಮ್ಮನ್ನು ತಾವು ಸರಿಪಡಿಸಿಕೊಳ್ಳುವ ನಿರ್ಧಾರವನ್ನು ಇನ್ನೂ ತೆಗೆದುಕೊಂಡಿಲ್ಲವೆಂದು, ಎಲ್ಲಿಯೋ ಪ್ರಾರಂಭದಲ್ಲಿ ಅದನ್ನು ಮಾಡಬೇಕೆಂದು ನಿರ್ಧರಿಸಲಾಗದ ಏನೋ

ಒಂದು ಇದೆ ಎಂದು ಅವರು ಹೇಳಬಹುದು ಮತ್ತು ಅದು ಕಳವಳಕಾರಿಯಾದ ವಿಷಯವಾಗಿರುತ್ತದೆ.

ದುರ್ಬಲತೆಯ ಚರ್ಚೆಯು ಒಂದು ಸಬೂಬು. ಸಂಕಲ್ಪ ಮಾಡುವವರೆಲ್ಲರಿಗೂ ದೈವಾನುಗ್ರಹವು ಅವರಿಗೆ ಪರಮಶಕ್ತಿಯನ್ನು ನೀಡುತ್ತದೆ. ಅಪ್ರಾಮಾಣಿಕತೆಯು ದುರ್ಬಲತೆ ಎಂದು ಅರ್ಥವಲ್ಲ. ಅಪ್ರಾಮಾಣಿಕತೆಯು ವಿರೋಧಿಗಳಿಗೆ ಯಾವಾಗಲೂ ಒಂದು ತೆರೆದ ದ್ವಾರವಾಗಿದೆ.

ವಿಕೃತವಿರುವಂಥ ಸ್ವಲ್ಪ ಗುಪ್ತ ಸಹಾನುಭೂತಿ ಅಲ್ಲಿದೆ ಎಂದು ಅರ್ಥ. ಅದು ಕಳವಳಕಾರಿಯಾದ ವಿಷಯವಾಗಿದೆ.

**9:306–07**

ನಿನಗೇನು ಬೇಕು ಎಂಬುದರ ಮೇಲೆ ಎಲ್ಲವೂ ಅವಲಂಬಿತವಾಗಿದೆ. ನಿನಗೆ ಯೋಗವು ಬೇಕಾಗಿದ್ದರೆ, ನಿನ್ನ ಗುರಿಯ ಕಡೆಗೆ ಮುನ್ನಡೆಸುಂಥ ದೈವಾನುಗ್ರಹದ ಭಾವವಾಗಿ ಸಂಭವಿಸುವ ಎಲ್ಲವನ್ನೂ ತೆಗೆದುಕೊ ಮತ್ತು ಸನ್ನಿವೇಶಗಳು ಕೊಡಮಾಡುವ ಪಾಠಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸು.

**14:96**

ದೈವಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡವರಿಗೆ, ಅವರಿಗೆ ಎದುರಾಗುವ ಪ್ರತಿ ತೊಂದರೆಯು ಹೊಸ ಪ್ರಗತಿಯ ಭರವಸೆಯಾಗಿದೆ ಮತ್ತು ಅದನ್ನು ಅನುಗ್ರಹದ ಕಾಣಿಕೆಯಾಗಿ ಸ್ವೀಕರಿಸಬೇಕು.

**14:96**

ದೇವರೆಡೆಗೆ ಹಂಬಲವಿದ್ದವರಿಗೆ ಯಾವಾಗಲೂ ಅವರ ಮುಂದಿರುವ ತೊಂದರೆಯು ತನ್ನ ವೈಯಕ್ತಿಕ ರೀತಿಯಲ್ಲಿ ದೇವರನ್ನು ಪಡೆದುಕೊಳ್ಳುವಂಥ ದ್ವಾರವಾಗಿದೆ: ದೇವರ ಸಾಕ್ಷಾತ್ಕಾರ ಮಾಡಿಕೊಳ್ಳುವ ಕಡೆಗೆ ಇದು ಅವನ ವಿಶೇಷ ಮಾರ್ಗವಾಗಿದೆ.

ನಮ್ಮಲ್ಲಿ ಯಾರಿಗಾದರೂ ನೂರಾರು ತೊಂದರೆಗಳಿದ್ದರೆ ಅವನು ದಿವ್ಯವಾದ ಸಾಕ್ಷಾತ್ಕಾರ ಹೊಂದುವನು ಎನ್ನುವ ಸತ್ಯಾಂಶವೂ ಇದೆ – ಅವನಲ್ಲಿ ತಾಳ್ಮೆ ಮತ್ತು ಸಹನೆಗಳಿದ್ದರೆ ಮತ್ತು ಆ ತೊಂದರೆಗಳ ವಿರುದ್ಧ ಅಗ್ನಿಯು ದಹಿಸುವಂಥ ತೀವ್ರವಾದ ಹಂಬಲವನ್ನು ಇಟ್ಟುಕೊಂಡಿದ್ದರೆ ಮಾತ್ರ ಸಾಧ್ಯ.

ಸಾಮಾನ್ಯವಾಗಿ ದೈವಾನುಗ್ರಹವು ನಿಮ್ಮ ತೊಂದರೆಗಳ ಅನುಗುಣವಾಗಿ (ಅನುಪಾತದಲ್ಲಿ) ಇರುತ್ತದೆ ಎಂಬುದು ನೆನಪಿರಲಿ.

**3:143** **– ಶ್ರೀಮಾತೆ**

ಜಡವಸ್ತುವಿನಲ್ಲಿನ ದೊಡ್ಡ ತೊಂದರೆ ಏನೆಂದರೆ ಲೌಕಿಕ ಪ್ರಜ್ಞೆಯು (ಭೌತ ವಸ್ತುವಿನಲ್ಲಿ ಮನಸ್ಸು) ತೊಂದರೆಗಳ (ತೊಂದರೆಗಳು, ಅಡೆತಡೆಗಳು, ಯಾತನೆಗಳು, ಹೋರಾಟಗಳು) ಒತ್ತಡದಲ್ಲಿ ರೂಪಿತವಾಗಿದೆ. ಈ ವಿಷಯಗಳಿಂದ ಅದನ್ನು ವ್ಯವಸ್ಥಿತವಾಗಿ ನಿರೂಪಿಸಲಾಗಿದೆ ಮತ್ತು ಅದು ಅದರ ಮೇಲೆ ಹತಾಶೆಯ, ಅಪಜಯ ಭಾವದ ಮೊಹರನ್ನು ಹಾಕಿದೆ – ನಿಶ್ಚಿತವಾಗಿಯೂ ಅದೊಂದು ದೊಡ್ಡ ವಿಘ್ನವಾಗಿದೆ. ನನ್ನ ಸ್ವ–ಕಾರ್ಯದಲ್ಲಿ ಇದರ ಬಗ್ಗೆ ನಾನು ಅರಿವುಳ್ಳವಳಾಗಿದ್ದೇನೆ.

ಅತ್ಯಂತ ಲೌಕಿಕವಾದ ಅರಿವು, ಅತ್ಯಂತ ಲೌಕಿಕವಾದ ಮನಸ್ಸು ಕೆಲಸ ಮಾಡಲು, ಪ್ರಯತ್ನ ಮಾಡಲು, ಹೊಡೆತಗಳ ಮುಖಾಂತರ ಮುಂದುವರೆಯಲು ಒಗ್ಗಿಕೊಂಡಿದೆ; ಇಲ್ಲದಿದ್ದರೆ ಅದು ತಮಸ್ಸು. ಇಲ್ಲಿಯವರೆಗೆ ಅದು ಕಲ್ಪನೆ ಮಡಿಕೊಂಡಂತೆ, ಅದು ಯಾವಾಗಲೂ ತೊಂದರೆಯನ್ನು ಕಲ್ಪನೆ ಮಾಡುತ್ತದೆ, ಯಾವಾಗಲೂ ಅಡ್ಡಿಯನ್ನು ಅಥವಾ ಯಾವಾಗಲೂ ವಿರೋಧವನ್ನು ಕಲ್ಪನೆ ಮಾಡುತ್ತದೆ ಮತ್ತು ಅದು ಚಲನೆಯನ್ನು ಭಯಾನಕವಾಗಿ ಕುಂಠಿತಗೊಳಿಸುತ್ತದೆ. ಇದೆಲ್ಲದರ ಹಿಂದೆ ಒಂದು ಅನುಗ್ರಹವಿದೆ, ಈ ಎಲ್ಲ ವಿಫಲತೆಗಳ ಹಿಂದೆ ಜಯವಿದೆ, ಎಲ್ಲ ನೋವುಗಳ, ಅದರ ಯಾತನೆಗಳ, ಅದರ ನಿರಾಕರಣೆಗಳ ಹಿಂದೆ ಆನಂದವಿದೆ ಎಂದು ಅದಕ್ಕೆ ಮನವರಿಕೆ ಮಾಡಲು ಅತ್ಯಂತ ಗಟ್ಟಿಯಾದ, ಅತ್ಯಂತ ವಾಸ್ತವಿಕವಾದ ಪುನರಾವರ್ತಿತ ಅನುಭವಗಳು ಬೇಕಾಗುತ್ತವೆ.

**11:2**

ನಮ್ಮ ಪ್ರಜ್ಞೆಯಿಂದ ಎಲ್ಲ ಅಪಜಯ ಭಾವವನ್ನು ಹೊರಗೆ ತಳ್ಳಿದ ನಂತರ ನಾವು ಸಾಕ್ಷಾತ್ಕಾರದೆಡೆಗೆ ಒಂದು ದೊಡ್ಡ ನೆಗೆತವನ್ನು ಮಾಡಬೇಕಾಗುತ್ತದೆ. ದೈವ ಕೃಪೆಯಲ್ಲಿನ ನಮ್ಮ ನಂಬಿಕೆಯನ್ನು ನಿಷ್ಕಳಂಕವನ್ನಾಗಿಸುವುದರಿಂದ ಅವಚೇತನದ ಅಪಜಯವನ್ನು ನಮಗೆ ಜಯಿಸಲು ಸಾಧ್ಯವಾಗುತ್ತದೆ.

**4:427** **– ಶ್ರೀಮಾತೆ**

# ಅನಾರೋಗ್ಯ ಮತ್ತು ಅನುಗ್ರಹ

**– ಅನುವಾದ: ಡಾ॥ ಬಿ.ಆರ್.ಭೀಡ್, ರಾಯಚೂರು**

ಅನುಗ್ರಹ ಅಥವಾ ಕೃಪೆ ಸದಾ ಇರುತ್ತದೆ, ಕಾರ್ಯ ಮಾಡಲು ಸದಾ ಸಿದ್ಧವಾಗಿಯೇ ಇರುತ್ತದೆ. ಆದರೆ ಅದು ಕಾರ್ಯ ಮಾಡಲು ನೀವು ಆಸ್ಪದ ನೀಡಬೇಕು; ನೀವದನ್ನು ಪ್ರತಿರೋಧಿಸಬಾರದು. ಒಂದೇ ಒಂದು ನಿಯಮ, ಷರತ್ತು, ಅದು ನಂಬಿಕೆ; ಅದು ಮಾತ್ರ ನೀವು ಸಹಾಯಕ್ಕಾಗಿ ನನ್ನನ್ನಾಗಲಿ, ಶ್ರೀ ಅರವಿಂದರನ್ನಾಗಲಿ ಕರೆಯಿರಿ. ನಿಮ್ಮ ಕರೆ ಶ್ರದ್ಧೆಯಿಂದ ಕೂಡಿದ್ದರೆ, (ಅಂದರೆ ನೀವು ಗುಣಮುಖರಾಗಬೇಕೆಂದು ನಿಜವಾಗಿಯೂ ಬಯಸುತ್ತಿದ್ದರೆ) ನಿಮ್ಮ ಕರೆಗೆ ಉತ್ತರ ದೊರತೇತೀರುವುದು. ನೀವು ಖಂಡಿತ ಗುಣಮುಖರಾಗುವಿರಿ.

*

*ವ್ಯಾಧಿ ಪೀಡಿತನಾದ ಸಂದರ್ಭದಲ್ಲಿ ಶ್ರೀಮಾತೆಗೆ ಪ್ರಾರ್ಥನೆ ಹೇಗೆ ಸಲ್ಲಿಸುವುದು? ಏನು ಬೇಡುವುದು?*

ಇಷ್ಟೇ, ಓ ತಾಯಿ, ನನ್ನನ್ನು ಗುಣಪಡಿಸು. ಇಷ್ಟೇ!

*

...ಆ ರೀತಿಯ ಪವಾಡವು ಜರುಗುವುದು ಸಾಧ್ಯ; ಪರಮಾತ್ಮನಿಗೆ ನೀವು ನಿವೇದನೆ ಮಾಡಿಕೊಂಡಿರುವುದು ಶ್ರದ್ಧಾ ಭಕ್ತಿಯಿಂದ ಕೂಡಿದ್ದರೆ, ಪರಮಾತ್ಮನಲ್ಲಿ ನಿಮಗೆ ಸಂಪೂರ್ಣ ಅವಿಚಲ ನಂಬಿಕೆ ಇದ್ದುದೇ ಆದರೆ, ಪವಾಡದಂಥ ಘಟನೆ ಅಸಂಭವೇನಲ್ಲ. ಆದರೆ ಆಕೆಯ ಕಥೆ ಬೇರೆ; ಆಕೆಗೆ ಅತೀವ ಭಯವಿತ್ತು, ಬಯಕೆಗಳು, ಬೇಡಿಕೆಗಳು, ಆಕೆಯ ಬಾಹ್ಯ ಸತ್ತೆಯ ಮೇಲೆ ಎಲ್ಲವೂ ಕೇಂದ್ರಿತಕೃತವಾಗಿದ್ದವು. ಅವುಗಳನ್ನೇ ಆಕೆ ಅವಶ್ಯಕತೆ ಎಂದು ಭಾವಿಸಿದ್ದಳು. ಇದು ವಾಸ್ತವಾಗಿದ್ದು ನಿಷ್ಠಾವಂತ ನಿವೇದನೆಗೆ ವಿರುದ್ಧವಾಗುವುದು.

*

ಕೆಲವರಲ್ಲಿ ಇಂಥ ಪ್ರವೃತ್ತಿಯೂ ಇರುತ್ತದೆ, ತೊಂದರೆಯನ್ನು ನೇರವಾಗಿ ಎದುರಿಸುವುದೇ ಇಲ್ಲ. ಆಗ ಪಲಾಯನ ಮಾಡುವ ಪ್ರವೃತ್ತಿ ಬೆಳೆಯುತ್ತದೆ. ನೋವು, ದುಃಖ ಬಂದಾಗ, ಅದನ್ನು ಜೀರ್ಣಿಸಿಕೊಳ್ಳುವ ಬದಲಾಯಿಸಿ ಪಲಾಯನ ಮಾಡಿಬಿಡುವುದು; ಗಟ್ಟಿಯಾಗಿ ನಿಲ್ಲುವ ಬದಲು, ಅಂದರೆ ಅಂತರಂಗದಲ್ಲಿ ವಿಚಲಿತವಾಗದೇ, ಸೋಲದೆ, “ನನಗಿನ್ನು ಸಹಿಸಲು ಸಾಧ್ಯವಾಗದು” ಎಂದು

ಅನಿಸಿದಾಗಲೂ ಸಹ ಬಿಟ್ಟುಕೊಡದೇ ಗಟ್ಟಿಯಾಗಿ ನಿಲ್ಲುವುದು. ತಲೆಯನ್ನು ಶಾಂತವಾಗಿ ಇಟ್ಟುಕೊಳ್ಳಿ, ನೋವಿನ ಚಲನೆಯ ಜೊತೆ ಒಂದಾಗಬೇಡಿ, ಅದರ ಕಂಪನವನ್ನನುಸರಿಸಬೇಡಿ.

ಮುಖ್ಯವಾಗಿ ಇದು ಬೇಕು, ಇದೇ ಬೇಕು, ಕೃಪೆ.. ಭಗವತ್ ಕೃಪೆಯಲ್ಲಿ ನಂಬಿಕೆ, ಕೃಪೆಯನ್ನು ಕಾಣಬೇಕು, ಅನುಭವಿಸಬೇಕು, ಅಥವಾ ಕರೆಯ ತೀವ್ರತೆ, ಅದಕ್ಕಿಂತ ಹೆಚ್ಚಾಗಿ ಅದರಿಂದುಂಟಾಗುವ ಪ್ರತಿಕ್ರಿಯೆ, ಗಂಟು ಕರಗಿ ಹೋಗುವುದು, ಬಿಚ್ಚಿಕೊಳ್ಳುವುದು, ಕೃಪೆಯ ಅದ್ಭುತ ಪ್ರೇಮಕ್ಕೆ ಪ್ರತಿಸ್ಪಂದಿಸುವುದು..

ವಿಶೇಷವಾಗಿ ಭಯಾನಕ ಸ್ಥಿತಿ ಯಾವುದೆಂದರೆ, ನಿಮ್ಮಲ್ಲಿ ಶಕ್ತಿ ಇಲ್ಲದಿದ್ದಾಗ, ಧೈರ್ಯ ಇಲ್ಲದಿರುವಾಗ, ಅನೇಕರು ಬಂದು ನನಗೆ ಹೇಳುವುದುಂಟು, “ನನಗೆ ಸತ್ತೇ ಹೋಗಿಬಿಡಬೇಕೆನಿಸುತ್ತದೆ, ನಾನು ಓಡಿಹೋಗಬೇಕೆಂದು ಮಾಡಿದ್ದೇನೆ, ನಾನು ಸಾಯಿಲಿಚ್ಚಿಸುತ್ತೇನೆ” ನಾನು ನೇರವಾಗಿ ಹೇಳುತ್ತೇನೆ, “ಆಯಿತು, ಹಾಗೇ ಮಾಡಿ, ನಿಮಗೆ ಸಾಯಬೇಕೆನಿಸಿದೆಯಲ್ಲ, ನಿಮ್ಮಗಾಗಿ ನೀವು ಸತ್ತುಹೋಗಿ, ಧೈರ್ಯ ಬೇಕು, ನಿಮ್ಮ ಅಹಂಕಾರಕ್ಕೆ ಸತ್ತು ಹೋಗುವ ಧೈರ್ಯಬೇಕು.”

*

.. ಭೌತಿಕವಾಗಿ ಅಸಮತೋಲನ, ಅನಾರೋಗ್ಯ ಕಾಡುತ್ತದೆ ಅನಿಸಿದಾಗ, ತಕ್ಷಣ ಮಾಡಬೇಕಾದುದೇನೆಂದರೆ, ಅಂತರಂಗದ ಶಾಂತಿಯಲ್ಲಿ ಏಕಾಗ್ರಚಿತ್ತನಾಗಬೇಕು, ದೈವೀ ಕೃಪೆಯಲ್ಲಿ ವಿಶ್ವಾಸವಿರಬೇಕು, ಭೌತಿಕ ಸಮತೋಲನ ಕಾಯ್ದುಕೊಳ್ಳುವ ಭರವಸೆ ಇರಬೇಕು, ಸ್ವಾಸ್ಥ್ಯ ಕಾಪಾಡಿಕೊಳ್ಳುವ ನಂಬಿಕೆ ಇರಬೇಕು, ಇದು ನಿಜವಾದ ಮನಃಸ್ಥಿತಿ.

**6:340** **– ಶ್ರೀಮಾತೆ**

(ರಾಜನೂ) ಬೇರೆ ಯಾರೂ, ಆಜ್ಞೆ ಮಾಡಲಾರದ, ಆಳಲಾರದ ಶಕ್ತಿ ಯಾವ ಭೌತಿಕ ಗೆಲವೂ ತೆರಲಾರದ ಸಂತೋಷ ಯಾವ ಬುದ್ಧಿಗೂ ನಿಲುಕದ ಪ್ರಕಾಶ; ಯಾವ ದಿವ್ಯ ಜ್ಞಾನ; ಯಾವ ಕಾಮನೆ, ಇಚ್ಛೆ, ಭೋಗ ಭಾಗ್ಯಗಳೂ ನೀಡದ ಆನಂದ ಇದೆ; ಯಾವ ಮಾನವೀಯ ಸಂಬಂಧವೂ ನೀಡಲಾಗದ ಪ್ರೇಮ ಇದೆ; ಎಲ್ಲೆಲ್ಲೂ ಸಿಕ್ಕದ, ಸಾವಿನಲ್ಲೂ ಸಿಕ್ಕದ ಶಾಂತಿ ಇದೆ; ಅದು ಸಂತೋಷದ ಶಕ್ತಿ, ಬೆಳಕಿನ ಜ್ಞಾನದ, ಆನಂದದ, ಪ್ರೇಮದ, ಶಾಂತಿಯ ಶಕ್ತಿ, ಅದು ಭಗವಂತನ ಕೃಪೆಯಿಂದ ಬರುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/380** **– ಶ್ರೀಮಾತೆ**

# ಕರ್ಮ ಮತ್ತು ಕೃಪೆ

**– ಅನುವಾದ: ಡಾ|| ಬಿ.ಆರ್.ಭೀಡ್, ರಾಯಚೂರು**

ಒಂದು ರೀತಿಯ ಮಾರಣಾಂತಿಕ ಭಯಾನಕತೆ ಕೆಲಸಲ ಕೆಲವರ ಜೀವನದಲ್ಲಿ ಕಾಡುವುದುಂಟು, ಅದನ್ನು ಭಾರತದಲ್ಲಿ ಕರ್ಮ ಎಂದು ಕರೆಯುತ್ತಾರೆ. ಅದು ಸಾಮಾನ್ಯವಾಗಿ ಹಿಂದಿನ ಜನ್ಮಗಳ ಕರ್ಮಗಳಿಂದ ಬಂದಿರುತ್ತದೆ, ಅದನ್ನು ಅನುಭವಿಸಿಯೇ ಕಳೆದುಕೊಳ್ಳಬೇಕು. ಪ್ರಜ್ಞೆಯ ಮೇಲೆ ಅಂಥ ಭಾರ ಇರುವಾಗ ಅನುಭವಿಸಿಯೇ ಕಳೆದುಕೊಳ್ಳಬೇಕು...

ಅದು ನಿಮ್ಮದೇ ಕರ್ಮವಾಗಿರುವುದರಿಂದ, ನೀವೇ ಪರಿಹಾರ ಕಂಡುಕೊಳ್ಳಬೇಕು. ಕರ್ಮವು ಅಹಂನ ಸೃಷ್ಟಿ, ನಿಮ್ಮ ಅಹಂ ಅದೇ ಪರಿಹಾರ ಕಂಡುಕೊಳ್ಳಬೇಕು, ಅಹಂಗಾಗಿ ಎಲ್ಲವನ್ನೂ (ಪರಿಹಾರ) ಮಾಡಲು ಸಾಧ್ಯವಾಗುವುದಿಲ್ಲ. ಸತ್ಯವೇನೆಂದರೆ, ಕರ್ಮವು ಅಹಂ ಮಾಡುವ ಕೆಲಸಗಳ ಪರಿಣಾಮ ಆದ್ದರಿಂದ ಅಹಂ ನಾಶವಾದಲ್ಲದೇ ಕರ್ಮ ನಾಶವಾಗದು.

ಸಾಮಾನ್ಯವಾಗಿ ಕರ್ಮವನ್ನು ಜಯಿಸುವ ಹಾಗೂ ಕೃಪೆಯ ಮೂಲಕ ಅರಗಿಸಿಕೊಳ್ಳುವ ಸಮಯ ಬಂದಾಗ, ನಿಜವಾಗಿ ವಸ್ತು ಸ್ಥಿತಿ ಏನಾಗಿತ್ತು ಅನ್ನುವ ಕಲ್ಪನೆ, ಜ್ಞಾನ ಬರುತ್ತದೆ, ಯಾವುದರಿಂದ, ಯಾವ ಕರ್ಮದಿಂದ ಸದ್ಯದ ಸ್ಥಿತಿ ಬಂದಿದೆ ಎಂಬುದರ ಸಂಪೂರ್ಣ ಅರಿವಾಗುತ್ತದೆ; ನೀವಾಗ ಶುದ್ಧೀಕರಿಸುವ ಕ್ರಿಯೆ ಆರಂಭಿಸಬೇಕು.

ಅಂಥ ಸಮಯ ಬಂದೇ ಬರುವುದು, ನೀವಾಗ ಇದನ್ನೆಲ್ಲ ಮಾಡಬೇಕಾಗುವುದು, ಸಂಪೂರ್ಣವಾಗಿ ಮುಕ್ತಗೊಳಿಸುವಂಥ ನಿಜವಾದ ಆಂತರಿಕ ದೃಷ್ಟಿಯನ್ನಾಗ ಬೆಳೆಸಿಕೊಳ್ಳಲೇಬೇಕಾಗುವುದು. ನಿಜ ಹೇಳಬೇಕೆಂದು ಸಾವಿರಾರು ವರ್ಷಗಳ ಈಗ ಭೂಮಿಯ ಮೇಲೆ ಅಂಥ ಸುಸಮಯ ಮೂಡಿ ಬಂದಿದೆ, ಅವಶ್ಯಕವಾಗಿ ಶಕ್ತಿಯೊಂದಿಗೆ ಪ್ರಜ್ಞಪೂರ್ವಕವಾಗಿ ಅದನ್ನು ಮಾಡಲೇಬೇಕಾದ ಸಮಯ ಬಂದಿದೆ. ಹಿಂದೊಮ್ಮೆ, ಕರ್ಮದ ಫಲಗಳನ್ನು, ಪರಿಣಾಮಗಳನ್ನು ಆಳಿಸಿಹಾಕುವುದರ ಯಾವ ಶಕ್ತಿಗಳಿಗೂ ಸಾಧ್ಯವಿಲ್ಲ ಎಂದೇ ನಂಬಲಾಗಿತ್ತು. ಅದನ್ನು ಶುದ್ಧೀಕರಿಸುವ ದೃಷ್ಟಿಯಿಂದ ಅನುಭವಿಸಿಯೇ ತೀರಬೇಕೆಂಬ, ಆ ಮೂಲಕ ಕರ್ಮಫಲಗಳನ್ನು ಬದಲಾಯಿಸಬಹುದೆಂಬ, ಅಳಿಸಿಹಾಕಬಹುದೆಂಬ ಭಾವನೆ ಇತ್ತು. ಆದರೆ, ಅತಿಮಾನಸ ಶಕ್ತಿಯ ಮೂಲಕ

ಇದನ್ನು ಸಾಧಿಸಬಹುದು, ಈ ಎಲ್ಲಾ ಪ್ರಕ್ರಿಯೆ ಹಂತಗಳ ಮೂಲಕವೇ ಸಾಗಬೇಕೆಂಬ ಅಗತ್ಯವಿಲ್ಲದೇ ಅದನ್ನು ಸಾಧಿಸಬಹುದು.

*

ಅಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಕ್ಷೇತ್ರವಿದೆ. ಸಾಕಷ್ಟು ಶ್ರದ್ಧೆಯಿಂದ ಕೂಡಿದೆ ಅಭೀಪ್ಸೆ, ಸಾಕಷ್ಟು ತೀವ್ರತರವಾದ ಪ್ರಾರ್ಥನೆಯು ಬದಲಾವಣೆಯ, ಪರಿವರ್ತನೆಯ ದಾರಿಯನ್ನು ತೋರಿಸಲಾರದೆಂದು ಯಾರು ಹೇಳುತ್ತಾರೆ?

ಅಂದರೆ, ಇದರರ್ಥ ಎಲ್ಲವೂ ಸಾಧ್ಯವಿದೆ ಅಂತಲೇ!

ಆದರೆ ಇಷ್ಟೇ, ಅಭೀಪ್ಸೆ ಮಾತ್ರ ಪ್ರಬಲವಾಗಿರಬೇಕು, ಪ್ರಾರ್ಥನೆ ಕೂಡ ತೀವ್ರತೆಯಿಂದ ಕೂಡಿರಬೇಕು. ಅದು ಮಾನವನ ಸ್ವಭಾವಕ್ಕೆ ಸಹಜವಾಗಿಯೇ ಬಂದಿದೆ. ಮಾನವನ ಪ್ರಕೃತಿಗೆ ಅದೊಂದು ನಿಜವಾಗಿ ಮಹಾವರದಾನವೇ ಸರಿ. ಆದರೆ ಅದನ್ನು ಹೇಗೆ ಉಪಯೋಗಿಸಬೇಕು, ಹೇಗೆ ಮಾಡಬೇಕೆಂಬುದು ಗೊತ್ತಿಲ್ಲ, ಅಷ್ಟೇ. ಇದೆಲ್ಲದರ ಅರ್ಥವೇನೆಂದರೆ, ಈ ಎಲ್ಲ ಪ್ರಾಪಂಚಿಕ ಅಡಚಣೆಗಳನ್ನು ದಾಟಿ, ಪ್ರಜ್ಞೆಯ ಉನ್ನತ ಅತ್ಯುಚ್ಚ ಬಿಂದುವನ್ನು ತಲುಪಲು ಸಾಧ್ಯವಾದರೆ, ಎಲ್ಲವನ್ನೂ ಬದಲಾವಣೆ ಮಾಡುವುದು ಸಾಧಕನಿಗೆ ಸಾಧ್ಯವಾಗುವುದು.

*'ನಾವು ಕರ್ಮದ ಸರಪಣಿಯಿಂದ ಬಂಧಿತರಾಗಿದ್ದೇನೆ' ಎಂದು ನೀವು ಹೇಳಿದ್ದೀರಿ. ಆದರೆ ದೈವೀ ಕಾರ್ಯೋನ್ಮುಖವಾದಾಗ..*

ಸಂಪೂರ್ಣತಃ ದೈವೀ ಕೃಪೆಯು ಕರ್ಮವನ್ನು ಸಂಪೂರ್ಣವಾಗಿ ವಿರೋಧಿಸುವುದೂ ಬಿಸಿಲಿನಲ್ಲಿ ಬೆಣ್ಣೆ ಇಟ್ಟರೆ ಕರುಗುವಂತೆ, ಕರ್ಮಗಳೆಲ್ಲ ಆಗ ಕರಗಿ ಹೋಗಿ ಬಿಡುವುವು. ನಾನೀಗ ಅದನ್ನೆ ಹೇಳುತ್ತಿದ್ದೆ. ನೀನೀಗ ಹೇಳಿರುವುದು ಅದನ್ನೇ, ಆದರೆ ತುಸು ಬೇರೆ ರೀತಿಯಲ್ಲಿ, ಅದೇ. ನಾನೇ ನಿನ್ನ ಸ್ಥಾನದಲ್ಲಿ ನಿಂತು ಪ್ರಶ್ನೆ ಮಾಡುತ್ತಿದ್ದೆ; ನಿನ್ನಲ್ಲಿ ಸಾಕಷ್ಟು ಪ್ರಬಲವಾದ, ಶ್ರದ್ಧಾಪೂರ್ಣವಾದ ಅಭೀಪ್ಸೆ ಇದ್ದರೆ, ಅತಿ ತೀವ್ರವಾದ ಪ್ರಾರ್ಥನೆ ಇದ್ದರೆ, ಎಲ್ಲವನ್ನೂ ಸಂಪೂರ್ಣವಾಗಿ ಬದಲಾಯಿಸಿಬಿಡುವ ಶಕ್ತಿಯನ್ನು ನಿನ್ನಲ್ಲಿ ನೀನು ಇಳಿಸಿ ತರಬಹುದು, ಅದು ಎಲ್ಲವನ್ನೂ ಸಂಪೂರ್ಣವಾಗಿ ಬದಲಾಯಿಸಿ ಬಿಡಬಲ್ಲದು – ನಿಜವಾಗಿ ಅದು ಎಲ್ಲವನ್ನೂ ಬದಲಾಯಿಸಬಲ್ಲದು. ಒಂದು ಸಣ್ಣ ಉದಾಹರಣೆ ಕೊಡಬಹುದು, ಸಣ್ಣ ಉದಾಹರಣೆ, ಆದರೆ ಅದು ನಿಮಗೆ ಸರಿಯಾದ ಕಲ್ಪನೆ ಕೊಡಬಲ್ಲುದು. ಒಂದು ಇಟ್ಟಿಗೆ ಬೀಳುತ್ತದೆ, ಟೈಲ್ಸ್ ಸಡಿಲಾಗಿ ಬೀಳುತ್ತಿದೆ ಅನ್ನಿ. ಬೀಳುವುದು

ಸಹಜ. ಆದರೆ ಅದೇ ಸಮಯದಲ್ಲಿ ಅಲ್ಲಿ ಓರ್ವ ಪ್ರಾಣಿಕ ಹಾಗೂ ಮಾನಸಿಕ ನಿರ್ಧಾರದ ಸಮರ್ಥ ವ್ಯಕ್ತಿ ಹಾದುಹೋಗುತ್ತದೆ, ಅವವೇನು ಮಾಡುತ್ತಾನೆ, ಕೈ ಚಾಚುತ್ತಾನೆ, ತಡೆಯಲೆತ್ನಿಸುತ್ತಾನೆ, ಆ ಟೈಲ್ಸ್ ಅವನ ಕೈ ಮೇಲೆ ಬೀಳಬಹುದೇ ವಿನಹ ನೆಲದ ಮೇಲೆ ಬೀಳುವದಿಲ್ಲ. ಅಲ್ಲವೇ? ಅಂದರೆ ಅವನು ಆ ಟಲ್ಸ್‌ನ ವಿಧಿಯನ್ನು ಬಲಾಯಿಸಿದನೆಂದು ಅರ್ಥವಲ್ಲವೇ? ಇನ್ನೊಂದು ವಿಧ –

ಮುಖ್ಯ, ಬೀಗದ ಕೈ ಏನೆಂದರೆ, ನಾನು ಆಗಲೇ ಹೇಳಿದಂತೆ, ಅತ್ಯಂತ ಶ್ರದ್ಧಾನ್ವಿತ, ಪ್ರಾಮಾಣಿಕ ಅಭೀಪ್ಸೆ ಹಾಗೂ ತೀವ್ರತರವಾದ ಪ್ರಾರ್ಥನೆ ಎರಡೂ ಬೇಕೇ ಬೇಕು. ತೀರ ನಮ್ರತೆ, ಕರ್ಮವನ್ನು ಬದಲಾಯಿಸಬೇಕೆಂಬ ತೀವ್ರ ಸಂಕಲ್ಪ ಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9** **– ಶ್ರೀಮಾತೆ**

ಎಲ್ಲಿಯವರೆಗೆ, ಯಾರೇ ಆಗಲಿ ಮಾಡಿದ ತಪ್ಪುಗಳನ್ನೇ ಪುನಃ ಪುನಃ ಮಾಡುತ್ತ ಹೋದರೆ, ಅದನ್ನು ಅಳಿಸಲಾಗುವುದಿಲ್ಲ. ಏಕೆಂದರೆ ಅವನು ಪ್ರತಿ ಕ್ಷಣ ಅದನ್ನೂ ಸೃಷ್ಟಿಸುತ್ತಲೇ ಹೋಗುತ್ತಿರುತ್ತಾನೆ. ತಪ್ಪು ಮಾಡಿದಾಗ ಅದು ಗಂಭೀರ ಸ್ವರೂಪದ್ದಾಗಿರಲಿ, ಅಥವಾ ಸಾಮಾನ್ಯನಾಗಿರಲಿ, ಅದು ಅವನ ಜೀವನದಲ್ಲಿ ಪರಿಣಾಮವನ್ನುಂಟು ಮಾಡಿಯೇ ಮಾಡುತ್ತದೆ.

ಕರ್ಮವನ್ನು ಅನುಭವಿಸಿಯೇ ತೀರಿಸಬೇಕು, ನಿಜ, ಆದರೆ ದೈವೀ ಕೃಪೆಯು ಅದರ ಪರಿಣಾಮಗಳನ್ನು ನಾಶಪಡಿಸುವ ಶಕ್ತಿ ಹೊಂದಿದೆ. ಆದರೆ ಇದಾಗಬೇಕೆಂದರೆ, ಮಾಡಿದ ತಪ್ಪುಗಳನ್ನೇ ಮತ್ತೆ ಮತ್ತೆ ಮಡುತ್ತ ಹೋಗಬಾರದು. ತಾನು ಅನಂತ ತಪ್ಪುಗಳನ್ನೇ ಮಾಡುತ್ತ ಹೋದರೂ ದೈವೀ ಕೃಪೆ ಕರ್ಮ ಫಲಗಳನ್ನೆ ನಾಶಪಡಿಸುವುದೆಂಬ ಭ್ರಮೆಯಲ್ಲಿ ಸಾಧಕನಿರಬಹುದು – ಹಾಗಾಗಲು ಸಾಧ್ಯವೇ ಇಲ್ಲ. ಭೂತಕಾಲವನ್ನು ಸಂಪೂರ್ಣವಾಗಿ ಶುದ್ಧೀಕರಿಸಬೇಕು. ಶೋಧಿಸಬೇಕು, ಅದರ ಪರಿಣಾಮ ಭವಿಷ್ಯದ ಮೇಲೆ ಆಗಲಾರದು ಅನ್ನುವ ಮಟ್ಟಿಗೆ ಅದನ್ನು ಶುದ್ಧೀಕರಿಸಬೇಕು ಆದರೆ ವರ್ತಮಾನದಲ್ಲಿ ಅದನ್ನು ಮೇಲಿಂದ ಮೇಲೆ ಬದಲಾಯಿಸುತ್ತ ಹೋಗಲಾರದು. ನಿಮ್ಮೊಳಗಿನ ಕೆಟ್ಟ ತರಂಗಗಳನ್ನು ನೀವೇ ನಿಲ್ಲಿಸಬೇಕು, ಅದೇ ಕೆಟ್ಟ ತರಂಗಗಳನ್ನೇ ಮೇಲಿಂದ ಮೇಲೆ ಹುಟ್ಟಿಸುತ್ತ ಹೋಗಬಾರದು.

**9:58** **– ಶ್ರೀಮಾತೆ**

# ಕೃಪೆಯ ಪರಮ ಸತ್ಯ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

ಪ್ರತಿಯೊಂದು ಮನಸ್ಸು ತನ್ನದೇ ಆದ ಹಾದಿಯಲ್ಲಿ ಪರಮ ಸತ್ಯವನ್ನು ಸಮೀಪಿಸಬಹುದು. ಅದರೆಡೆಗಿನ ಪಯಣಕ್ಕೆ ಸಾವಿರಾರು ಮಾರ್ಗಗಳು ಮತ್ತು ಎಲ್ಲವುಕ್ಕೂ ಅವುಗಳದೇ ಆದ ಪ್ರವೇಶಗಳು ಉಂಟು. ಕೃಪೆಯನ್ನು ನಂಬಲೇಬೇಕೆಂದು ಇಲ್ಲ ಅಥವಾ ತನ್ನದೆ ಆದ ಉನ್ನತ ಆತ್ಮಕ್ಕಿಂತ ಭಿನ್ನವಾದ ಯಾವುದೇ ದೇವತೆಯನ್ನು ಗುರುತಿಸುವುದಿಲ್ಲ – ಯೋಗದ ಹಲವು ಮಾರ್ಗಗಳಲ್ಲಿ ಈ ವಿಷಯಗಳನ್ನು ಒಪ್ಪಿಕೊಳ್ಳುವುದಿಲ್ಲ.....

ಅದಕ್ಕಾಗಿ ಈ ಕೃಪೆಯನ್ನು ನಾವು ಯಾವ ರೀತಿ ವಿವರಿಸುತ್ತೇವೆ ಎಂದರೆ, ಅನಂತ ಚೈತನ್ಯ ಅಥವಾ ಪರಮಾತ್ಮನ ಅಸ್ತಿತ್ವ, ಒಂದು ಸಾನಿಧ್ಯ ಅಥವಾ ಒಂದು ಸತ್, ಒಂದು ಪ್ರಜ್ಞೆ ಅದನ್ನು ಸಾಧ್ಯಗೊಳಿಸುತ್ತದೆ – ಅದನ್ನೇ ನಾವು ದೇವರು ಎಂದು ಕರೆಯುವುದು – ಭಿನ್ನವಾದ ವ್ಯಕ್ತಿಯಲ್ಲ, ಆದರೆ ಆ ಒಂದು ಸತ್‌ನ ಒಂದು ಅಂಶವೇ ನಮ್ಮ ಪ್ರತ್ಯೇಕ ಆತ್ಮ ಅಥವಾ ಒಂದು ಪಾತ್ರೆ. ಆದರೆ ಅದೊಂದು ಎಲ್ಲರಲ್ಲಿರುವ ನಿರಾಕಾರ ಪರಮಾತ್ಮ ಎಂದು ಕಲ್ಪಿಸಿದರೆ, ಆದಾಗ್ಯೂ ಉಪನಿಷತ್‌ನ ಆತ್ಮ ಮತ್ತು ಅದರ ಸಾಕ್ಷಾತ್ಕಾರದ ಬಗ್ಗೆ ಹೀಗೆ ಹೇಳುತ್ತದೆ "ಅದನ್ನು (ಆತ್ಮವನ್ನು) ತರ್ಕದಿಂದ ಅಥವಾ ತಪಸ್ಸಿನಿಂದ ಅಥವಾ ಯಾವುದೇ ತಿಳುವಳಿಕೆಯಿಂದ ತಿಳಿದುಕೊಳ್ಳುವದಾಗುವುದಿಲ್ಲ, ಆದರೆ ಯಾರನ್ನು ಈ ಆತ್ಮ (ಪರಮಾತ್ಮ) ಆಯ್ಕೆ ಮಾಡಿಕೊಳ್ಳುತ್ತಾನೋ ಅವನಿಗೆ ತನ್ನ ದೇಹವನ್ನು ಪರಿಚಯಿಸುತ್ತಾನೆ." ಒಳ್ಳೆಯದು, ಅದನ್ನೇ ನಾವು ದೈವೀ ಕೃಪೆ ಎಂದು ಕರೆಯುವುದು – ಅದು ಮೇಲಿನ ಕ್ರಿಯೆ ಅಥವಾ ಮನಸ್ಸಿನ ಕಾರಣದಿಂದಲ್ಲದ ಅಂತರಂಗದಿಂದ ಬಂದ, ಸ್ವತಂತ್ರವಾಗಿ ತನ್ನ ಚಲನೆಗಳನ್ನು ನಿರ್ಧರಿಸುತ್ತದೆ. ನಾವದನ್ನು ದೈವೀ ಕೃಪೆಯೆಂದು ಕರೆಯಬಹುದು; ಅಂತರಂಗದಲ್ಲಿರುವ ಆತ್ಮ ತನ್ನ ಘಳಿಗೆಯನ್ನು ತಾನೇ ನಿರ್ಧರಿಸಿ ಬಾಹ್ಯದಲ್ಲಿರುವ ಮನಸ್ಸಿನ ಉಪಕರಣದ ಮೂಲಕ ತನ್ನನ್ನು ಪ್ರಕಟಿಸುವುದು; ನಾವದನ್ನು ಅಂತರಂಗದ ಸತ್ ಅರಳುವುದೆಂದು ಕರೆಯಬಹುದು ಅಥವಾ ಅಂತರಂಗದ ಪ್ರಕೃತಿಯ ಸ್ವಯಂ ಸಾಕ್ಷಾತ್ಕಾರ ಮತ್ತು ಸ್ವಯಂ ಜ್ಞಾನವಾಗುವುದೆನ್ನಬಹುದು. ನಮ್ಮಲ್ಲಿರುವ ಏನೋ ಒಂದು ಅದನ್ನು ತಲುಪುತ್ತದೆ ಅಥವಾ ನಮಗೆ ತನ್ನನ್ನು ಅದೇ ರೀತಿ ವ್ಯಕ್ತಪಡಿಸುತ್ತದೆ, ಹೀಗಾಗಿ ಮನಸ್ಸು ಅದನ್ನು ಕಾಣುತ್ತದೆ. ಆದರೆ

ನಿಜವಾಗಿ, ಅದೇ ರೀತಿಯಾಗಿ ಮತ್ತು ಪ್ರಕೃತಿಯಲ್ಲಿರುವ ಸತ್ ಕೂಡ ಹೀಗೆ ಕ್ರಿಯೆ ನಡೆಸುತ್ತದೆ.

*

ನಾನು ದೈವೀ ಕೃಪೆ ಬಗ್ಗೆ ಹೇಳಲೇ ಬೇಕಿದೆ – ನಿಮಗೆ ಅದು ಮಾನವನ ಬುದ್ಧಿವಂತಿಕೆಯ ತರಹನೇ ದೈವೀ ತರ್ಕ ಕಾರ್ಯ ನಿರ್ವಹಿಸುತ್ತದೆ ಎಂದು. ಆದರೆ ಅದು ಹಾಗಲ್ಲ. ಮತ್ತು ದೈವೀ ಸಹಾನುಭೂತಿ ಕೂಡ ಅಲ್ಲ, ಯಾರೆಲ್ಲಾ ಅದನ್ನು ಸಮೀಪಿಸುತ್ತಾರೋ ಅವರ ಮೇಲೆಲ್ಲ ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತದೆ ಮತ್ತು ಎಲ್ಲರ ಪ್ರಾರ್ಥನೆಗೆ ಒಲಿಯುತ್ತದೆ. ಅದು ಧರ್ಮನಿಷ್ಠರನ್ನು ಆಯ್ಕೆ ಮಾಡಿ ಪಾಪಿಗಳನ್ನು ತಿರಸ್ಕಾರ ಮಾಡುವುದಿಲ್ಲ. ಪೀಡಕ "ತರ್ಸಸ್‌ನ ಸಾಲ್" ಎಂಬಾತನ ಸಹಾಯಕ್ಕೆ ಬಂದಿತು, ಭ್ರಷ್ಟ ಸಂತ ಆಗಸ್ಟಿನ್ ನೆರವಿಗೆ ಬಂತು, ಕುಖ್ಯಾತರ ಮಧ್ಯೆ ನೆರವಿಗೆ ಬಂದಿತು. ಬಲ್ವಾ ಮಂಗಲ್ ಮತ್ತು ಬಹಳ ಇತರರಿಗೆ ಕೂಡ. ಇವರೆಲ್ಲರ ಪರಿವರ್ತನೆ ಮಾನವನ ನೈತಿಕ ಬುದ್ಧಿವಂತಿಕೆಯ ಮಡಿವಂತಿಕೆಯ ಹೆಸರು ಕೆಡಿಸುತ್ತದೆ; ಆದರೆ ಅದು ಧರ್ಮನಿಷ್ಠರಿಗೂ ಬರಬಹುದು – ಅವರನ್ನು ಅವರ ಸ್ವಯಂ–ಧರ್ಮನಿಷ್ಠೆಯಿಂದ ಶಮನ ಮಾಡಬಹುದು ಮತ್ತು ಇವೆಲ್ಲವುಗಳಿಂದ ಅವನನ್ನು ಶುದ್ಧ ಪ್ರಜ್ಞೆಗೆ ನಿರ್ದೇಶಿಸುತ್ತದೆ. ಅದರ ಶಕ್ತಿ ಯಾವುದೇ ನಿಯಮಗಳಿಗಿಂತ ಉನ್ನತವಾಗಿದೆ, ವಿಶ್ವಾತ್ಮಕ ನಿಯಮಕ್ಕಿಂತ–ಆಧ್ಯಾತ್ಮಿಕ ಋಷಿಗಳೆಲ್ಲಾ ನಿಯಮ ಮತ್ತು ಕೃಪೆಯ ಮಧ್ಯೆ ವ್ಯತ್ಯಾಸ ಗುರುತಿಸಿದ್ದರು. ಆದಾಗ್ಯೂ ಅದು ತಾರತಮ್ಯ ಮಾಡುವುದಿಲ್ಲ. ಸಾಮಾನ್ಯ ಶಕ್ತಿ ಮತ್ತು ಇತರೆ ಮನಸ್ಸಿನ ದೃಷ್ಟಿಕೋನಕ್ಕಿಂತ ಭಿನ್ನವಾದ ದೃಷ್ಟಿಕೋನವನ್ನು ಅದು ಹೊಂದಿದೆ. ಅದು ತಾರತಮ್ಯವನ್ನು ಹೇಗೆ ಮಾಡುತ್ತದೆ ಎಂದರೆ, ಯಾವ ವಸ್ತುಗಳು, ವ್ಯಕ್ತಿಗಳು ಮತ್ತು ಸರಿಯಾದ ಸಮಯ ಮತ್ತು ಋತುವಿಗೆ ತಕ್ಕಂತೆ ಕೆಲಸ ಮಾಡುತ್ತದೆ. ವೈಯಕ್ತಿಕ ಮನಸ್ಸಿನ ಲೆಕ್ಕಾಚಾರಕ್ಕೆ ಬಾರದಂತೆ ಕೃಪೆಯು ಸ್ಥಿತಿಯನ್ನು ದಪ್ಪನಾದ–ಪರದೆಯ ಹಿಂದೆ ಸಿದ್ಧ ಮಾಡಿಕೊಳ್ಳುತ್ತದೆ ಮತ್ತು ಯಾವಾಗ ಕೃಪೆ ಬರುತ್ತದೆಯೋ ಅದು ನೇರವಾಗಿ ತಾನೇ ಕಾರ್ಯಮಾಡುತ್ತದೆ. ಅಲ್ಲಿ ಈ ಮೂರು ಶಕ್ತಿಗಳಿವೆ: (1) ವಿಶ್ವಾತ್ಮಕ ನಿಯಮ, ಕರ್ಮದ್ದು ಅಥವಾ ಮತ್ತೇನು; (2) ದೈವೀ ಸಹಾನುಭೂತಿ ನಿಯಮದ ಜಾಲದಲ್ಲಿ ಎಷ್ಟು ಜನರ ಮೇಲೆ ಕಾರ್ಯ ನಿರ್ವಹಿಸಲಾಗುತ್ತದೆಯೋ ಮತ್ತು ಅವರಿಗೆ ಒಂದು ಅವಕಾಶ ಕೊಡುತ್ತದೆ; ಮತ್ತು (3) ದೈವೀ ಕೃಪೆ ಬೇರೆ ಶಕ್ತಿಗಳಿಗಿಂತ ಅತ್ಯಾಕರ್ಷಕವಾಗಿ ಕಾರ್ಯ ನಿರ್ವಹಿಸುತ್ತದೆ.

ಒಂದೇ ಪ್ರಶ್ನೆ ಏನೆಂದರೆ, ಎಲ್ಲಾ ವೈಪರೀತ್ಯಗಳ ಜೀವನದ ಹಿಂದೆ ಇರುವ ಏನೋ ಒಂದು, ಕರೆಗೆ ಓ ಗೊಟ್ಟು, ಏನೇ ಕಷ್ಟ ಇದ್ದರೂ ತನ್ನನ್ನು ತಾನು ದೈವೀ ಕೃಪೆಯಿಂದ ಪ್ರಕಾಶಿಸಲು ತೆರೆದಿಟ್ಟುಕೊಳ್ಳುವುದು – ಅದು ಏನೋ ಒಂದು ಮಾನಸಿಕ ಅಥವಾ ಪ್ರಾಣಿಕ ಅಂಶದ ಚಲನೆಯಾಗಿರದೆ ಅಂತರಂಗದ ಕಣ್ಣಿಗೆ ಕಾಣುವ ಅಂತರಂಗದ್ದಾಗಿರಬೇಕು. ಅದು ಅಲ್ಲಿ ಇದ್ದು ಮತ್ತು ಮುಂಚೂಣಿಯಲ್ಲಿ ಚಲನಶೀಲವಾದರೆ, ಆಗ ಸಹಾನುಭೂತಿ ಕಾರ್ಯ ಮಾಡಬಹುದು, ಆದಾಗ್ಯೂ ಕೃಪೆಯು ಪೂರ್ಣ ಕಾರ್ಯದ ನಿರ್ಧಾರಕ ನಿರ್ಧಾರ ಅಥವಾ ಬದಲಾವಣೆಗಾಗಿ ಇನ್ನೂ ಕಾಯಬಹುದು, ಅದು ಭವಿಷ್ಯತ್ತಿನ ಘಳಿಗೆಗಾಗಿ ಮುಂದೂಡಲ್ಪಟ್ಟಿರಬಹುದು, ಏಕೆಂದರೆ ಯಾವುದೋ ಭಾಗ ಅಥವಾ ಅಂಶ ಇನ್ನೂ ಮಧ್ಯ ಬರಬಹುದು, ಏನೋ ಒಂದು ಸ್ವೀಕರಿಸಲು ತಯಾರ ಇಲ್ಲದಿರಬಹುದು.

ಆದರೆ ಆ ಏನೋ ಒಂದು ನಿಮ್ಮ ಮತ್ತು ದೈವದ ಮಧ್ಯೆ ಬರಲು ಏಕೆ ಬಿಡಬೇಕು, ಯಾವುದೋ ಕಲ್ಪನೆ, ಯಾವುದೋ ಘಟನೆ; ನೀವು ಯಾವಾಗ ಪೂರ್ಣ ಅಭೀಪ್ಸೆ ಮತ್ತು ಆನಂದದಿಂದ ಇರುವಿರೋ, ಆಗ ಇವು ಯಾವುವು ಎಣಿಕೆಗೆ ಬರಬಾರದು, ನಿಮ್ಮ ಅಭಿಪ್ಸೆ ಮತ್ತು ದೈವವನ್ನು ಬಿಟ್ಟು ಬೇರೇನೂ ಮಹತ್ವದ್ದಾಗಿರಬಾರದು. ಯಾರು ದೈವವನ್ನು ವೇಗವಾಗಿ, ಸಮಗ್ರವಾಗಿ ಇರಬೇಕೆನ್ನುವುದು ಈ ಮಾರ್ಗದ ಮನೋಭಾವವಾಗಿರಬೇಕು ಕೇವಲ ಎಲ್ಲವನ್ನೂ – ಒಳಗೊಳ್ಳುವ, ಆ ಒಂದು ವಿಚಾರದಲ್ಲಿ ಯಾವುದೂ ಮಧ್ಯೆ ಪ್ರವೇಶಿಸಬಾರದು.

ದೈವದ ಬಗ್ಗೆ ಮನಸ್ಸಿನ ಕಲ್ಪನೆಯಲ್ಲಿ ಯಾವ ಮೌಲ್ಯವಿದೆ, ಕಲ್ಪನೆಯಲ್ಲಿ ಅವನೇನಿರಬೇಕು, ಯಾವ ರೀತಿ ಕೆಲಸ ಮಾಡಬೇಕು, ಯಾವ ರೀತಿ ಕೆಲಸ ಮಾಡಬಾರದು – ಇವೆಲ್ಲ ಈ ಮಾರ್ಗದಲ್ಲಿ ಅಡ್ಡ ಬರಬಹದು. ದೈವ ಒಂದೇ ಪ್ರಾಮುಖ್ಯವಾದದ್ದು. ಯಾವಾಗ ನಿಮ್ಮ ಪ್ರಜ್ಞೆ ದೈವವನ್ನು ಆವರಿಸುವುದೋ, ಆವಾಗ ದೈವ ಏನೆಂದು ನಿಮಗೆ ತಿಳಿಯುತ್ತದೆ, ಅದಕ್ಕಿಂತ ಮುಂಚೆ ಅಲ್ಲ. ಕೃಷ್ಣನು ಕೃಷ್ಣನೇ. ಯಾರು ಆತ, ಏನು ಮಾಡಿದನು, ಏನು ಮಾಡಿಲ್ಲವೆಂದು ಲಕ್ಷ ಕೊಡುವುದಿಲ್ಲ; ಅವನನ್ನು ನೋಡುವುದು ಒಂದೇ, ಭೇಟಿಯಾಗುವುದು, ಅವನ ಪ್ರಕಾಶವನ್ನು ಸಂವೇದಿಸುವುದು, ಅವನ ಸಾನಿಧ್ಯ, ಅವನ ಪ್ರೇಮ, ಆನಂದ ಒಂದೇ ಪ್ರಮುಖವಾದದ್ದು. ಆದುದರಿಂದ ಯಾವಾಗಲೂ ಆಧ್ಯಾತ್ಮಿಕ ಅಭೀಪ್ಸೆ–ಆಧ್ಯಾತ್ಮಿಕ ಜೀವನದ ನಿಯಮ.

**– ಶ್ರೀ ಅರವಿಂದರು**

ಮನುಷ್ಯನ ಮನಸ್ಸು ತಿಳಿದುಕೊಳ್ಳುವ ಹಾಗೆ ಕೃಪೆ ಕೆಲಸ ಮಾಡಬೇಕೆಂಬುದು ಅವಶ್ಯಕವೇನಲ್ಲ, ಅದು ಸಾಮಾನ್ಯವಾಗಿ ಮಾಡುವುದಿಲ್ಲ. ಅದು ತನ್ನದೇ "ನಿಗೂಢತೆಯ" ರೀತಿಯಲ್ಲಿ ಕೆಲಸ ಮಾಡುತ್ತದೆ. ಮೊದಲನೆಯದಾಗಿ ಅದು ಸಾಮಾನ್ಯವಾಗಿ ಪರದೆಯ ಹಿಂದೆ ಕಾರ್ಯ ನಿರ್ವಹಿಸುತ್ತದೆ, ವಿಷಯಗಳನ್ನು ತಯಾರು ಮಾಡಿಕೊಳ್ಳುತ್ತದೆ, ಪ್ರಕಟಪಡಿಸಿಕೊಳ್ಳುವುದಿಲ್ಲ. ನಂತರದಲ್ಲಿ ಅದು ಪ್ರಕಟವಾಗಬಹುದು, ಆದರೆ ಸಾಧಕನಿಗೆ ಏನಾಗುತ್ತದೆ ಎಂದು ತಿಳಿಯುವುದಿಲ್ಲ. ಅಂತಿಮವಾಗಿ, ಯಾವಾಗ ಅವನು ಸಮರ್ಥನಾಗುತ್ತಾನೋ ಆಗ ಸಂವೇದಿಸುತ್ತಾನೆ ಮತ್ತು ತಿಳಿಯಲಾರಂಭಿಸುತ್ತಾನೆ ಅಥವಾ ಹಾಗೆ ಮಾಡಲು ಪ್ರಾರಂಭಿಸುತ್ತಾನೆ.

**– ಶ್ರೀ ಅರವಿಂದರು**

## ಕೃಪೆ ಮತ್ತು ತಪಸ್ಸು

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

ದೈವೀ ಕೃಪೆ ಇಲ್ಲದೆ ಏನನ್ನೂ ಮಾಡಲಾಗುವುದಿಲ್ಲ, ಆದರೆ ಪೂರ್ಣ ಕೃಪೆ ಪ್ರಕಟವಾಗಲು ಸಾಧಕ ತನ್ನನ್ನು ತಾನು ಅಣಿಗೊಳಿಸಬೇಕು. ಎಲ್ಲವೂ ದೈವೀ ಮಧ್ಯೆ ಪ್ರವೇಶದ ಮೇಲೆ ಅವಲಂಬಿಸಿದ್ದರೆ ಮಾನವ ಆಗ ಒಂದು ಕೈಗೊಂಬೆ ಮಾತ್ರ ಆಗಿರುತ್ತಿದ್ದ ಮತ್ತು ಸಾಧನೆಯ ಉಪಯೋಗ ಇರುತ್ತಿರಲಿಲ್ಲ, ಮತ್ತು ಯಾವುದೇ ಷರತ್ತು ಇರುತ್ತಿರಲಿಲ್ಲ, ಯಾವುದೇ ವಿಷಯದ ನಿಯಮಗಳು ಇರುತ್ತಿರಲಿಲ್ಲ – ಆದುದರಿಂದ ಪ್ರಪಂಚವೇ ಇರುತ್ತಿರಲಿಲ್ಲ, ಅಂದರೆ ದೇವರು ತನ್ನ ಆನಂದಕ್ಕೆ ತಕ್ಕಂತೆ ಜಗತ್ತನ್ನು ನಡೆಸುತ್ತಾನೆ ಎಂದರ್ಥ. ಯಾವುದೇ ಶಂಕೆಯಿಲ್ಲದೆ ಕೊನೆಗೆ ಅದು ದೈವೀ ವಿಶ್ವಾತ್ಮಕ ಕೆಲಸವೇ ಸರಿ, ಆದರೆ ವ್ಯಕ್ತಿಗಳ ಮೂಲಕ, ಕೆಲಸ ಮಾಡುವ ಶಕ್ತಿಗಳ ಮೂಲಕ ಮಾಡುತ್ತಾನೆ – ಪ್ರಕೃತಿಯ ನಿಯಮಗಳ ಅಡಿಯಲ್ಲಿ, ವಿಶೇಷ ಮಧ್ಯ ಪ್ರವೇಶಿಕೆ ಇರಬಹುದು ಮತ್ತು ಆದರೆ ಎಲ್ಲವೂ ವಿಶೇಷ ಮಧ್ಯೆ ಪ್ರವೇಶಿಕೆಯಲ್ಲ.

*

**'ಕ'** ತಪಸ್ಸಿನ ಕುರಿತು ಏನು ಹೇಳುತ್ತಿರುವರೋ ಅದು ನಿಜ. ಯಾರು ತಪಸ್ಸು ಮತ್ತು ಪ್ರಯತ್ನಕ್ಕೆ ಸಿದ್ಧತೆ ಮಾಡಿಕೊಂಡಿಲ್ಲವೋ, ಸಿದ್ಧರಿಲ್ಲವೋ, ಮನಸ್ಸು ಮತ್ತು

ಪ್ರಾಣದ ಮೇಲೆ ಹಿಡಿತ ಸಾಧಿಸಿಲ್ಲವೋ, ಉನ್ನತವಾದ ಆಧ್ಯಾತ್ಮಿಕ ಲಾಭವನ್ನು ಬಯಸಬಾರದು – ಮನಸ್ಸು ಮತ್ತು ಪ್ರಾಣ ತಮ್ಮ ಆಳ್ವಿಕೆಯನ್ನು ಮುಂದುವರಿಸಲು ಚಮತ್ಕಾರ ಮತ್ತು ನೆಪಗಳನ್ನು ಕೊಡುತ್ತವೆ, ತಮ್ಮ ರಾಗ ಮತ್ತು ದ್ವೇಷಗಳನ್ನು ಹೇರುತ್ತವೆ ಮತ್ತು ಯಾವಾಗ ಅವು ಆತ್ಮ ಮತ್ತು ಚೈತನ್ಯದ ಉಪಕರಣಗಳಾಗ ಬೇಕಾಗಬಹುದು ಆ ಸಮಯದಲ್ಲಿ ತಪ್ಪಿಸಿಕೊಳ್ಳುತ್ತವೆ. ಕೃಪೆಯು ಕೆಲವು ಸಲ ಬಯಸದ ಅಥವಾ ತೋರಿಕೆಯಲ್ಲಿ ಬಯಸದ ಫಲವನ್ನು ತರಬಹುದು, ಆದರೆ ಯಾರು ಕೃಪೆ ಒಂದು ಹಕ್ಕು ಮತ್ತು ವಿಶೇಷ ಸವಲತ್ತು ಎಂದು ಬಯಸಬಾರದು – ಹಾಗಾದಾಗ ಅದು ಕೃಪೆ ಯಾಗುವುದಿಲ್ಲ. ನೀವು ನೋಡಿದ ಹಾಗೆ ಕೂಗಿದ ತಕ್ಷಣ ಉತ್ತರ ಬರಬೇಕೆಂಬ ಹಕ್ಕೊತ್ತಾಯ ಸಲ್ಲದು. ನಾನು ಯಾವಾಗಲೂ ನೋಡಿದ ಹಾಗೆ ಕೃಪೆ ಮಧ್ಯೆ ಪ್ರವೇಶಿಸುವ ಮುಂಚೆ ಕಾಣದಂತೆ ಸಿದ್ಧತೆ ಮಾಡಿಕೊಂಡಿರುತ್ತದೆ ಮತ್ತು ಅದು ಮಧ್ಯೆ ಪ್ರವೇಶಿಸಿದ ಮೇಲೆ ಸ್ವೀಕರಿಸಿದ್ದು ಇರಲು ಮತ್ತು ಬೆಳೆಯಲು ಸಾಕಷ್ಟು ಸಾಧನೆ ಮಾಡಬೇಕಿರುವುದು –ಬೇರೆ ಎಲ್ಲಾ ವಿಷಯಗಳಲ್ಲಿ ಇದ್ದಂತೆ – ಸಂಪೂರ್ಣ ಸಿದ್ಧಿ ಆಗುವತನಕ. ಆಗ ಸಹಜವಾಗಿ ಪ್ರಯತ್ನ ಮುಗಿಯುತ್ತದೆ ಮತ್ತು ಸ್ವಾಮ್ಯವಾದದ್ದು ಖಚಿತವಾಗುತ್ತದೆ. ಕಾರಣ ತಪಸ್ಸು ಒಂದು ರೀತಿಯದ್ದೋ ಅಥವಾ ಮತ್ತೊಂದು ರೀತಿಯದ್ದೋ ತಪ್ಪಿಸಿಕೊಳ್ಳಲಾಗುವುದಿಲ್ಲ.

*

ನಂತರ ಮತ್ತೆ ನೀವು ಕೇಳಬಹುದು, "ಹೌದು ನಾನು ಪ್ರೀತಿ ಮಾಡುತ್ತೇನೋ ಅಥವಾ ಇಲ್ಲವೋ, ನನಗೆ ಬೇಕು, ನಾನು ಯಾವಾಗಲೂ ಬಯಸಿದ್ದೆ ಮತ್ತು ಈಗ ನನಗೆ ಹೆಚ್ಚು ಹೆಚ್ಚು ಬೇಕು, ನನಗೆ ಏನೂ ಸಿಗುವುದಿಲ್ಲ." ಆದರೆ ಬಯಸುವುದು ಒಂದೇ ಎಲ್ಲಾ ಅಲ್ಲ. ಈಗ ನೀವು ಕಾಣಲಾರಂಭಿಸುವಿರಿ, ಅಲ್ಲಿ ಕರಾರುಗಳು ಅವುಗಳನ್ನು ಪಾಲಿಸಬೇಕು– ಹೃದಯವನ್ನು ಪರಿಶುದ್ಧಗೊಳಿಸುವ ರೀತಿ. ನಿನ್ನ ಪ್ರಬಂಧ ಏನಿತ್ತು, "ಒಂದು ಸಲ ನಾನು ದೇವರನ್ನು ಬಯಸಿದರೆ, ದೇವರು ನನಗೆ ಪ್ರಕಟವಾಗಲೇಬೇಕು, ನನ್ನ ಹತ್ತಿರ ಬರಬೇಕು, ಸ್ವಲ್ಪವಾದರೂ ಆತನ ಸುಳಿವು ನನಗೆ ಕೊಡಬೇಕು, ನಿಜವಾದ ಸದೃಢ ಮೂರ್ತ ಅನುಭವ ಆಗಬೇಕು, ನಾನು ತಿಳಿದುಕೊಳ್ಳಲು ಆಗದ ಅಥವಾ ಮೌಲ್ಯಕೊಡದ ಖಚಿತವಲ್ಲದ ವಿಷಯಗಳ ಮೂಲಕ ಅಲ್ಲ. ದೇವರ ಕೃಪೆ ನನ್ನ ಕರೆಗೆ ಓಗೊಡಬೇಕು, ನಾನು ಇನ್ನೂ ಅದಕ್ಕೆ ಯೋಗ್ಯನೋ ಅಥವಾ ಅಲ್ಲವೋ – ಅಥವಾ ಆಗಿಲ್ಲವೆಂದರೆ ಕೃಪೆಯೇ ಇಲ್ಲ."

ದೇವರ ಕೃಪೆ ಕೆಲವೊಂದು ಸಂದರ್ಭದಲ್ಲಿ ಅದನ್ನು ಮಾಡಬಹುದು, ಆದರೆ "ಮಾಡಲೇ"ಬೇಕೆಂದು ಎಲ್ಲಿಂದ ಬಂದಿತು? ದೇವರು ಅದನ್ನು ಮಾಡಲೇಬೇಕೆಂದರೆ, ಅಲ್ಲಿಗೆ ಅದು ದೇವರ ಕೃಪೆಯಾಗಿ ಉಳಿಯುವುದಿಲ್ಲ, ಆದರೆ ದೇವರ ಕರ್ತವ್ಯ ಅಥವಾ ಒಂದು ಬಾಧ್ಯತೆಯಾಗಿ ಆಗುತ್ತದೆ ಅಥವಾ ಒಂದು ಗುತ್ತಿಗೆ ಅಥವಾ ಒಂದು ಒಡಂಬಡಿಕೆ ಆಗುತ್ತದೆ. ದೈವವು ಹೃದಯದೊಳಕ್ಕೆ ಇಣಕುತ್ತದೆ ಮತ್ತು ಆ ಕ್ಷಣದಲ್ಲಿ ಪರದೆಯನ್ನು ತೆಗೆಯುತ್ತದೆ ಮತ್ತು ಯಾವ ಕ್ಷಣದಲ್ಲಿ ಅದನ್ನು ಮಾಡಬೇಕೆಂಬುದು ಅವನಿಗೆ ಗೊತ್ತು.

**– ಶ್ರೀ ಅರವಿಂದರು**

ದೈವೀ ಕೃಪೆ ಮತ್ತು ಶಕ್ತಿ ಎಲ್ಲವನ್ನೂ ಮಾಡಬಹುದು, ಆದರೆ ಅದು ಸಾಧಕನ ಒಪ್ಪಿಗೆಯೊಂದಿಗೆ. ಪೂರ್ಣ ಒಪ್ಪಿಗೆಯನ್ನು ಕೊಡುವುದನ್ನು ಕಲಿಯುವುದೇ ಸಾಧನೆಯ ಸಂಪೂರ್ಣ ಅರ್ಥ.

**– ಶ್ರೀ ಅರವಿಂದರು**



ಎಲ್ಲಾ ಕೃಪೆ ಮತ್ತು ವೈಭವ ಮತ್ತು ಎಲ್ಲಾ ದೈವತ್ವ
ಒಂದೇ ಆಕಾರದಲ್ಲಿ ಒಟ್ಟಾಗಿ ಇಲ್ಲಿವೆ.

**ಸಾವಿತ್ರಿ: 680 – ಶ್ರೀ ಅರವಿಂದರು**

# ಆಧ್ಯಾತ್ಮದ ಪಥದಲ್ಲಿ ಪ್ರವೇಶಿಸಿದಾಗ...

**– ಅನುವಾದ: ಪುಟ್ಟು ಕುಲಕರ್ಣಿ**

ಗುರಿ ಅಥವಾ ಗಮ್ಯ ಎನ್ನುವದು ಸಂಕೀರ್ಣಮಯವಾಗಿರುವ ಸಂಗತಿಯಲ್ಲಿ, ಅದು ಬಹುತೇಕವಾಗಿ ಬಾಹ್ಯ–ಜೀವನದ ಸಂದರ್ಭಗಳಲ್ಲಿ, ಅದರಲ್ಲೂ ಅಜ್ಞಾನದ ವಲಯದಲ್ಲಿಯೇ ಜೀವಿಸುವ ಸಂದರ್ಭವಿರುವಲ್ಲಿ ಮಾತ್ರ ಈ ರೀತಿ ಸಂಕೀರ್ಣಮಯ ಸ್ಥಿತಿಯಲ್ಲಿ ಇರುತ್ತದೆ. ನಾವು ಯಾವುದನ್ನು ಗುರಿ ಅಥವಾ ಗಮ್ಯವೆಂದು ಕರೆಯುತ್ತಿದ್ದೇವೆಯೋ, ಅದು ಜೀವಿಯ ಪ್ರಚಲಿತ ಸ್ಥಿತಿಯ ಸಂಗತಿಗಳ ಪರಿಣಾಮವೆಂದು ಮತ್ತು ಸ್ವಭಾವವೆಂದು ಜೊತೆಗೆ ಗತಕಾಲದಲ್ಲಿ ಅದು ಸಾರಗೊಂಡಿರುವ ಶಕ್ತಿಗಳ– ಅದೂ ಪರಸ್ಪರ ಗತದ– ಕ್ರಿಯೆಗಳ ಜೊತೆಗೆ ಮತ್ತು ಇತರ ಅಂಶಗಳ ಜೊತೆಗೆ ಸಂಪರ್ಕ ಹೊಂದುವದರ ಮೂಲಕ ಹಾಗೂ ವರ್ತಮಾನದ ಪ್ರಯತ್ನಗಳ ನಿರ್ಧರಣೆಗಳ ಮೂಲಕ, ಭವಿಷ್ಯದಲ್ಲಿ ಅವುಗಳ ಫಲಿತಾಂಶದ ಸ್ವರೂಪದಲ್ಲಿ ನಿರ್ಧರಿತಗೊಳ್ಳುತ್ತದೆ.

ಆದರೆ ಯಾವಾಗ ಓರ್ವ ವ್ಯಕ್ತಿಯು ಈ ಆಧ್ಯಾತ್ಮದ ಪಥದಲ್ಲಿ ಪ್ರವೇಶ ಪಡೆದುಕೊಳ್ಳುತ್ತಾನೆಯೋ, ಆಗ ಈ ಪೂರ್ವದಲ್ಲಿಯೇ ನಿರ್ಧರಿತಗೊಂಡಿದ್ದ ಗಮ್ಯವು ಹಿಮ್ಮೆಟ್ಟಲು ಪ್ರಾರಂಭಿಸುತ್ತದೆ. ಅಲ್ಲಿ ನೂತನವಾದ ತತ್ತ್ವ(ಉಪಾದಾನ)ವೊಂದು ರೂಪಿತಗೊಳ್ಳುತ್ತದೆ. ದೈವೀ ಕೃಪೆ, ಊರ್ಧ್ವದಲ್ಲಿರುವ ದೈವೀ ಶಕ್ತಿಯ ಸಹಾಯವು ಲಭ್ಯವಾಗುತ್ತದೆ. ಇದು ಆಯಾ ಸಾಧಕನ ಸ್ವಭಾವಕ್ಕನುಗುಣವಾಗಿ(ಪ್ರಯತ್ನಕ್ಕನುಗುಣವಾಗಿ) ಇರುವ ಕರ್ಮಗಳ ಫಲಿತಕ್ಕಿಂತಲೂ ಬೇರೆಯ ಸ್ವರೂಪದಲ್ಲಿಯೇ ಇರುತ್ತದೆ. ಇಲ್ಲಿಂದ ಅಂದರೆ ಈ ಹಂತದಿಂದ ಅವನ ಆಧ್ಯಾತ್ಮದ ಗುರಿ ಎನ್ನುವದು ದೈವೀ ಆಯ್ಕೆಯಾಗಿರುತ್ತದೆ. ಅದು ಭವಿಷ್ಯವನ್ನೂ ಸಹಿತ ಖಾತ್ರಿಗೊಳಿಸುತ್ತದೆ. ಆದರೆ ಇಲ್ಲಿ ಈ ಪಥದಲ್ಲಿನ ಉತ್ಥಾನ–ಪತನದ ಕುರಿತು ಮತ್ತು ಈ ಪಥದಲ್ಲಿನ ಯಾನದ ಸಮಯದ ಕುರಿತು ಒಂದು ಸಂದೇಹ ತಲೆದೋರುತ್ತದೆ. ಏಕೆಂದರೆ, ಇಲ್ಲಿಯೇ ಆ ಪ್ರತಿಕೂಲ ಶಕ್ತಿಗಳು, ಗತದ ಸ್ವಭಾವಗಳಲ್ಲಿ ರೂಪಿತಗೊಂಡ ಪ್ರಯತ್ನದ ವೇಗವನ್ನು ಕುಂಠಿತಗೊಳಿಸಲು ಯತ್ನಿಸುತ್ತವೆ. ಇದು ಪ್ರಗತಿಯನ್ನೂ ಕುಂಠಿತಗೊಳಿಸುವುದರ ಜೊತೆಗೆ ಸಾಫಲ್ಯತೆಯನ್ನೂ ಸಹಿತ ಮುಂದೂಡಿಬಿಡುತ್ತದೆ. ಇಲ್ಲಿ ಪತನಗೊಂಡವರು, ಅವರ ಮೇಲೆ ನಡೆದ ಪ್ರತಿಕೂಲ ಶಕ್ತಿಗಳ ದಾಳಿಯಿಂದಲಂತೂ ಪತನಗೊಂಡಿರುವದಿಲ್ಲ.

ಏಕೆಂದರೆ ಸಾಮಾನ್ಯವಾಗಿ ಅವರು ತಮ್ಮನ್ನು(ಸಹಿತ) ಈ ಪ್ರತಿಕೂಲ ಶಕ್ತಿಗಳೊಂದಿಗೆ ಗುರುತಿಸಿಕೊಂಡಿರುತ್ತಾರೆ. ಜೊತೆಜೊತೆಗೆ ಆಧ್ಯಾತ್ಮಿಕ ಸ್ಥಿತಿಯ ಸಲುವಾಗಿ ತಮ್ಮದೇ ಆದ ಸ್ವರೂಪದಲ್ಲಿರುವ ಮಹತ್ವಾಕಾಂಕ್ಷೆ, ಅಹಂಕಾರ ಮತ್ತು ವಾಂಛೆಯನ್ನು ಹೊಂದಿರುತ್ತಾರೆ.

*

ಈ ಪರಮೋಚ್ಚ ಕೃಪೆಯು ಕೇವಲ ಪ್ರಕಾಶ ಮತ್ತು ಋತದೊಡನೆ ಮಾತ್ರ ಕ್ರಿಯಾಶೀಲವಾಗಿರುತ್ತದೆ; ಅದು ಎಂದಿಗೂ ಅಜ್ಞಾನ ಮತ್ತು ಮಿಥ್ಯತ್ವಗಳಿಂದ ನಿರೂಪಿತಗೊಂಡಿರುವ ನಿರ್ಧರಣೆ ಅಥವಾ ನಿಬಂಧನೆಯಾಗಿ ಕಾರ್ಯಪ್ರವೃತ್ತವಾಗಿರುವದಿಲ್ಲ. ಒಂದು ವೇಳೆ ಈ ಮಿಥ್ಯತ್ವವು ತನ್ನ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಉದ್ಯುಕ್ತವಾದರೆ, ಆಗ ಅದು ತನ್ನದೇ ಉದ್ದೇಶದಲ್ಲಿಯೇ ಸೋಲನ್ನು ಅನುಭವಿಸುತ್ತದೆ. ಏಕೆಂದರೆ ಪ್ರಕಾಶ ಮತ್ತು ಸತ್ಯದ ನಿಬಂಧನೆಗಳೇ ಈ ರೀತಿಯಲ್ಲಿವೆ. ಈ ರೀತಿಯಲ್ಲಿಯೇ ಇರುವ ಸ್ಥಿತಿಯಲ್ಲಿ ಆ ಉಚ್ಚತಮ ಶಕ್ತಿಯು ಅವತರಣಗೊಳ್ಳುತ್ತದೆ. ಹೀಗೆ ಅವತರಣಗೊಳ್ಳುವ ಈ ಉಚ್ಚತಮ ಮಾನಸಿಕ ಅತಿಮಾನಸಿಕ ಶಕ್ತಿಯು ಇದಾಗಿದ್ದು, ಜೊತೆಗೆ ಭೂಸ್ತರದಲ್ಲಿ ಅಂದರೆ ಭೌತಿಕ ಸ್ತರದಲ್ಲಿ ವಿಜಯದ ಸ್ವರೂಪದಲ್ಲಿಯೇ ಸಂಭಾವ್ಯತೆಯನ್ನು ಸಹಿತ ಪಡೆದುಕೊಳ್ಳುತ್ತದೆ. ಜೊತೆಗೆ ಈ ಆಧಾರದಿಂದಲೇ ಅಂದರೆ (ಮೃಣ್ಮಯದಿಂದಲೇ) ಈ ಭೌತಿಕವನ್ನು ಯಶಸ್ವಿಯಾಗಿ ಮುಕ್ತಗೊಳಿಸಿಕೊಳ್ಳುವ ಮೂಲಕ ಜೊತೆಗೆ ಪ್ರಕೃತಿ ಮತ್ತು ಅದು ಎದುರಿಸಬಹುದಾದ ತೊಂದರೆಗಳನ್ನು ನಿಯಂತ್ರಿಸುತ್ತದೆ(ನಾಶ ಪಡಿಸುತ್ತದೆ). ಆದರೆ ಇಲ್ಲಿ ಸಂಪೂರ್ಣವಾಗಿ ಪ್ರಾಮಾಣಿಕವಾಗಿರುವ ಆತ್ಮಸಮರ್ಪಣೆ ಇರಬೇಕು. ಆ ದಿವ್ಯ–ಶಕ್ತಿಯ ಕೃಪೆಯನ್ನು ಪಡೆದುಕೊಳ್ಳುವ ಸಲುವಾಗಿ ಸಂಪೂರ್ಣವಾಗಿಯೇ ಸದಾ ಮುಕ್ತನಾಗಿಯೇ ಇರಬೇಕಾಗುತ್ತದೆ. ಅಲ್ಲಿ ಅವತರಣಗೊಳ್ಳುವ ಆ ಸತ್ಯದ ಅವಿಚಲವಾದ, ಖಚಿತವಾದ ಸಮಗ್ರ ಆಯ್ಕೆಯು ಇರಬೇಕು. ಜೊತೆಜೊತೆಗೆ ಮಾನಸಿಕ, ಪ್ರಾಣಿಕ ಮತ್ತು ಲೌಕಿಕ ಶಕ್ತಿಗಳ ಮಿಥ್ಯಾತ್ಮಕತೆಯನ್ನು ಸಮಗ್ರವಾಗಿಯೇ ತಿರಸ್ಕರಿಸುವ ಅಂಶವೂ ಸಹಿತ ಸಮಗ್ರವಾಗಿಯೇ ಅವಿಚಲವಾಗಿಯೇ ಇರಬೇಕು. ಏಕೆಂದರೆ ಈಗಲೂ ಇವುಗಳೇ ಈ ಭೂ–ಬದುಕನ್ನು ಆಳುತ್ತಿವೆ.

ಒಂದು ವೇಳೆ ನಿಮ್ಮ ಭಕ್ತಿ ಮತ್ತು ಸಮರ್ಪಣೆಯ ಹಿಂದೆ ನಿಮ್ಮ ಬಯಕೆಗಳನ್ನು ಅಡಗಿಸಿಕೊಂಡಿದ್ದಲ್ಲಿ, ಅಹಂಕಾರಯುಕ್ತವಾಗಿರುವ ಬೇಡಿಕೆಗಳನ್ನು

ಮತ್ತು ಮಹತ್ವಪೂರ್ಣ ಆಗ್ರಹಗಳನ್ನೂ ಹೊಂದಿದ್ದಲ್ಲಿ, ಮತ್ತು ಈ ಎಲ್ಲ ಅಂಶಗಳಲ್ಲಿ ನಿಮ್ಮ ಆಭೀಪ್ಸೆಯನ್ನು ರೂಪಿಸಿಕೊಂಡಿದ್ದಲ್ಲಿ ಅಥವಾ ಅವುಗಳೊಡನೆ ಸಂಯೋಗಗೊಳಿಸಿಕೊಂಡಿದ್ದಲ್ಲಿ, ಅಂತಹ ಸಮಯದಲ್ಲೂ ಅವೆಲ್ಲವನ್ನೂ ಈ ದೈವೀ ಶಕ್ತಿಯ ಮೇಲೆ ವಹಿಸಿಬಿಡಿ. ಆಗ, ಈ ದೈವೀ ಕೃಪೆಯು ನಿಮ್ಮನ್ನು ಪರಿವರ್ತಿಸಲು ಆಗಮಿಸುತ್ತಿರುವಾಗ, ಇವೆಲ್ಲ ಅಡೆತಡೆಗಳು ನಿವಾರಿಸಲ್ಪಡುತ್ತವೆ. ನಿಮ್ಮನ್ನು ನೀವೇ ಒಂದು ವೇಳೆ ಮುಕ್ತಗೊಳಿಸಿಕೊಂಡಿದ್ದಲ್ಲಿ, ಅಥವಾ ಆ ಸತ್ಯದ ಒಂದು ಆಯಾಮದ ಅಂಶದಲ್ಲಿ ಮುಕ್ತಗೊಳಿಸಿಕೊಂಡಾಗ, ಮತ್ತೆ ಇನ್ನೊಂದು ಆಯಾಮವು ಸದಾಕಾಲವೂ ತನ್ನ ದ್ವಾರಗಳನ್ನು ತೆರೆದುಕೊಂಡೇ ಇದ್ದು ಪ್ರತಿಕೂಲ ಶಕ್ತಿಗಳಿಗೆ ತೆರೆತೆರೆದುಕೊಂಡೇ ಇರುತ್ತದೆ. ಅಂತಹ ಸಂದರ್ಭದಲ್ಲಿ, ಈ ದೈವೀ ಕೃಪೆಯು ನಿಮಗೆ ದೈವೀ ಕೃಪೆಯು ಲಭ್ಯವಾಗುತ್ತದೆ ಎಂದು ಆಶಿಸುವದು ನಿರರ್ಥಕವಾಗುತ್ತದೆ. ನಿಮ್ಮಲ್ಲಿ ಜೀವದುಂಬಿದ ಸಾಕ್ಷಾತ್ಕಾರವನ್ನು, ಅದರ ಅಸ್ತಿತ್ವವನ್ನು ಬಯಸುವದಾದಲ್ಲಿ, ನೀವು ನಿಮ್ಮ ದೇವಸ್ಥಾನವನ್ನು(ಹೃದಯವನ್ನು) ಸದಾ ಪರಿಶುದ್ಧವಾಗಿರಿಸಿಕೊಂಡೇ ತೆರೆದಿಟ್ಟುಕೊಳ್ಳಬೇಕಾಗುತ್ತದೆ.

ಆ ಶಕ್ತಿಯು ಪ್ರತಿಹಂತದಲ್ಲೂ ಸಹಕಾರಿಯಾಗಿಯೇ ಹಸ್ತಕ್ಷೇಪ ಮಾಡುತ್ತ ಜೊತೆಗೆ ಆ ಸತ್ಯವನ್ನು ರೂಪಿಸುತ್ತಿದ್ದಲ್ಲಿ, ನೀವು ಮಾತ್ರ ಅದದರೆಡೆಗೆ ಬೆನ್ನು ತಿರುಗಿಸಿ ನಿಲ್ಲುತ್ತೀರಿ. ಮತ್ತೆ ಅದೇ ಮಿಥ್ಯಾತ್ಮಕತೆಯನ್ನೇ ಆಹ್ವಾನಿಸುತ್ತೀರಿ. ಅದು ಈಗಾಗಲೇ ನಿಮ್ಮಿಂದ ದೂರವಾಗುವ ಸ್ಥಿತಿಯಲ್ಲಿ ಇದ್ದಾಗಲೂ ನೀವೇ ಅದನ್ನು ಮತ್ತೆ ನಿಮ್ಮಡೆಗೇ ಆಹ್ವಾನಿಸುತ್ತೀರಿ. ಇಂತಹ ಸಂದರ್ಭದಲ್ಲಿಯೇ, ನಿಮ್ಮ ಮೇಲೆ ಧಾರೆಧಾರೆಯಾಗಿಯೇ ಸುರಿಯಲು ಸಿದ್ಧವಿರುವ ಆ ದೈವೀ ಕೃಪೆಯ ಮೇಲೆ ನೀವು ಯಾವುದೇ ಆಪಾದನೆಯನ್ನು ಮಾಡುವಂತಿಲ್ಲ; ಇಲ್ಲಿ ನಿಮ್ಮದೇ ಆದ ಇಚ್ಛೆಯ ತಪ್ಪು ಗ್ರಹಿಕೆಗಳು ಮತ್ತು ಸಮರ್ಪಣೆಗೊಳ್ಳುವಲ್ಲಿ ನಿಮ್ಮದೇ ಅಪರಿಪೂರ್ಣತೆಯು ಕಾರಣವಾಗಿರುತ್ತದೆ.

**– ಶ್ರೀ ಅರವಿಂದರು**

ಎಲ್ಲರೂ ವಿಶ್ವಾಸವಿಟ್ಟಿರುವದೆಂದರೆ "ಈ ಕೃಪೆಯು" ಸದಾ ಕಾಲವೂ ಸರ್ವಸ್ವವನ್ನೂ ಸುಸೂತ್ರಗೊಳಿಸಿ, ಜೀವನದಾದ್ಯಂತವನ್ನೂ ಸರಳಗೊಳಿಸುತ್ತದೆ ಎಂದೇ ಆಗಿದೆ. ಆದರೆ ಇದು ಸತ್ಯದ ಸಂಗತಿಯಲ್ಲ.

ಯಾವಾಗ ಕೃಪೆಯು ಕ್ರಿಯೆಗೆ ತೊಡಗಿಕೊಳ್ಳುವದೋ, ಅಲ್ಲಿ ಸಂಭವಿಸಲಿರುವ ಫಲಿತಾಂಶವು ಸುಖದಿಂದಲೂ ಕೂಡಿರಬಹುದು ಅಥವಾ ದುಃಖಾರ್ತವು ಆಗಿರಬಹುದು. ಹಾಗಿದ್ದರೂ– ಅದು ಯಾವುದೇ ಕಾರಣಕ್ಕೂ ಈ ಮಾನವ(ನಿರ್ಮಿತ)–ಮೌಲ್ಯಗಳನ್ನು ಪರಿಗಣಿಸುವದಿಲ್ಲ. ಮೇಲ್ನೋಟಕ್ಕೆ ಅಥವಾ ಸಾಮಾನ್ಯ ದೃಷ್ಟಿಕೋನಕ್ಕೆ ಇದೊಂದು ಆಪತ್ತು ತುಂಬಿರುವ ಘಟನೆಯಂತೆ ತೋರಬಹುದು. ಆದರೆ ಇದು ವೈಯಕ್ತಿಕವಾಗಿ ಅತ್ಯುತ್ತಮವಾಗಿದೆ. ಅದೂ ವೈಯಕ್ತಿಕ ನೆಲೆಯಲ್ಲಿ ಆ ದಿವ್ಯ ಶಕ್ತಿಯು ಉತ್ತೇಜಿಸಿರುವ ಮೂಲಕವಾಗಿ ನಿರೂಪಿತಗೊಳ್ಳುವ ಪ್ರಗತಿಯು ಸದಾ ಸೀಮಾತೀತವಾಗಿಯೇ ಚಿಮ್ಮುವಿಕೆಯನ್ನು ರೂಪಿಸುತ್ತದೆ. ಈ ಮೂಲಕ ಕೃಪೆಯು, ನಿಮ್ಮನ್ನು ಸಾಕ್ಷಾತ್ಕಾರದ ನೆಲೆಗೆ ಸಾಗಲು ಕ್ಷಿಪ್ರವೇಗವನ್ನೂ ಒದಗಿಸಿ ಕೊಡುತ್ತದೆ.

**14:96–97** **–ಶ್ರೀಮಾತೆ**

## ಪರಮಾತ್ಮನ ಆಶ್ವಾಸನೆ

**– ಅನುವಾದ: ಪುಟ್ಟು ಕುಲಕರ್ಣಿ**

ಯಾವುದೇ ರೀತಿಯ ಅಧೈರ್ಯವು ನಿಮ್ಮನ್ನು ಆವರಿಸಿಕೊಳ್ಳಲು ಅನುವು ಮಾಡಿಕೊಡಬೇಡಿ. ಅದೇ ಸಮಯಕ್ಕೆ ಯಾವುದೇ ಕಾರಣಕ್ಕೂ ಈ ದೈವೀ ಕೃಪೆಯ ಬಗೆಗೂ ಅವಿಶ್ವಾಸವನ್ನು ರೂಪಿಸಿಕೊಳ್ಳಬೇಡಿ. ನಿಮ್ಮ ಸುತ್ತಲೂ – ಬಾಹ್ಯ ವಾತಾವರಣದಲ್ಲಿ – ಯಾವುದೇ ರೀತಿಯ ತೊಂದರೆಗಳು ಇದ್ದರೂ ಹಾಗೂ ನಿಮ್ಮ ಅಂತರಂಗದಲ್ಲಿಯೂ ಯಾವುದೇ ಹಂತದ ದೌರ್ಬಲ್ಯಗಳಿದ್ದರೂ, ನೀವು ಅವುಗಳನ್ನು ನಿಮ್ಮ ವಿಶ್ವಾಸದಲ್ಲಿಯೇ, ಅಭೀಪ್ಸೆಯ ಹಂತದ ಮೂಲಕವೇ ಎದುರಿಸುತ್ತಿದ್ದಲ್ಲಿ, ಆಗ ಈ ಗೂಢ(ರಹಸ್ಯ) ಶಕ್ತಿಯು ನಿಮ್ಮನ್ನು ಆ ಅವಸ್ಥೆಯಿಂದ ಮುಕ್ತಗೊಳಿಸುತ್ತ, ನಿಮ್ಮನ್ನು ದಿವ್ಯ ಕೃಪೆಯ ಹಂತಕ್ಕೆ ತರುತ್ತದೆ. ಒಂದು ವೇಳೆ ನೀವು ಅಂತಹ ವಿರೋಧಗಳಿಂದಾಗಿಯೇ ತೊಂದರೆಗಳಿಂದ ಜರ್ಝರಿತರಾಗುತ್ತಿರುವ ಸಂದರ್ಭವಿರುವಲ್ಲಿ, ಹಾಗೂ ನೀವು ಎಡವುತ್ತ ಎಡವುತ್ತ ಸಾಗುತ್ತಿರುವ ಸಂದರ್ಭವಿರುವಲ್ಲಿ, ನಿಮಗೆ ಯಾವುದೇ ದಾರಿಯೂ ತೋಚದೆ ಎಲ್ಲವೂ ಮುಚ್ಚಿಕೊಂಡಿರುವಂತಹ ಸಂದರ್ಭವಿದ್ದಾಗಲೂ ಸಹಿತ, ನೀವು ನಿಮ್ಮ ಅಭೀಪ್ಸೆಯನ್ನು ಮಾತ್ರ ಬಿಟ್ಟುಕೊಡಬಾರದು. ಒಂದು ವೇಳೆ ವಿಶ್ವಾಸವೇನಾದರೂ

ಮೋಡಗಳಿಂದ ಆವೃತವಗಿದ್ದರೂ, ಆಗ ನಿಮ್ಮ ಮನಸ್ಸಿನಲ್ಲಿಯೇ ನಿಮ್ಮನ್ನು ಅರಸಿಕೊಂಡು, ಹೃದಯದಲ್ಲಿಯೇ ಅನುಸ್ಪಂದಿಸಿಕೊಂಡು ಮುಂದುವರೆಯಿರಿ. ಆಗ ಈ ಎಲ್ಲ ಅಡೆ–ತಡೆಗಳೂ ಕಣ್ಮರೆಯಾಗಿ ಬಿಡುತ್ತವೆ.

*

ನಿಮ್ಮ ಸಾಮರ್ಥ್ಯವು ಆಧ್ಯಾತ್ಮಿಕತೆಯಿಂದಲೇ ರೂಪಿತವಾಗಿದ್ದರೆ, ಅದು ಆಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆ ಶಕ್ತಿಯಾಗುತ್ತದೆ; ಇಲ್ಲಿ ಪ್ರಾಮಾಣಿಕತೆಯು ಅತ್ಯಂತ ಮಹತ್ವದ ಮಹಾನ್–ಶಕ್ತಿಯಾಗಿದೆ; ಇದಕ್ಕಿಂತಲೂ ಮಹತಿಯಾಗಿರುವ ಶಕ್ತಿ ಎಂದರೆ ಅದು 'ಕೃಪೆ' ಯಾಗಿದೆ. ನಾನು ಈ ವಿಷಯವನ್ನು ಹಲವಾರು ಬಾರಿ ತಿಳಿಸಿದ್ದೇನೆ. ಒಂದು ವೇಳೆ ಓರ್ವನು ಪ್ರಾಮಾಣಿಕನೇ ಆಗಿರುವಲ್ಲಿ, ಆಗ ಅವನು ದೀರ್ಘಾಂತರ ಸಮಯದವರೆಗೂ ಸಾಧನೆಗಾಗಿ ಗಮಿಸುವ, ಅಗಾಧ ತೊಂದರೆಗಳ ಮಧ್ಯದಲ್ಲಿಯೂ ಸಾಗಬೇಕಾದ ಪ್ರಸಂಗ ಬರುವದಿಲ್ಲ. ನಾನು ಈಗಾಗಲೇ 'ದೈವೀ ಕೃಪೆಯ' ಕುರಿತು ತಿಳಿಸಿದ್ದೇನೆ. ಅದಕ್ಕಾಗಿ ಹಲವು ಬಾರಿ ಭಗವದ್ಗೀತೆಯ ಉಲ್ಲೇಖಗಳನ್ನೂ ಹೇಳಿದ್ದೇನೆ. ಭಗವದ್ಗೀತೆ ಹೇಳುತ್ತಿರುವದೇನೆಂದರೆ, "ನಾನು ನಿನ್ನನ್ನು ಸರ್ವ ಪಾಪಗಳಿಂದ ಮತ್ತು ದುಷ್ಟತನದಿಂದ ಮುಕ್ತಗೊಳಿಸುತ್ತೇನೆ, ದುಃಖಿಸಬೇಡ."

**– ಶ್ರೀ ಅರವಿಂದರು**

## ಸರ್ವೋಚ್ಚ ಪ್ರಜ್ಞೆ

**– ಅನುವಾದ: ಪುಟ್ಟು ಕುಲಕರ್ಣಿ**

ಕೃಪೆಯ ವಿಷಯದಲ್ಲಿ ಪರಿಪೂರ್ಣವಾದ ವಿಶ್ವಾಸ ಮತ್ತು ನಂಬಿಕೆಗಳು, ಈ ಸರ್ವೋಚ್ಚ ಪ್ರಜ್ಞೆಯ ಸಂದರ್ಭದಲ್ಲಿ, ಅಂತಿಮ ಫಲಿತಾಂಶದ ವಿಶ್ಲೇಷಣೆಗಳಾಗಿವೆ.

*

ಈ ಕೃಪೆಯು ಸದಾ ನಿಮ್ಮೊಡನೆ ಇರುತ್ತದೆ; ಅದಕ್ಕಾಗಿ ನಿಮ್ಮ ಹೃದಯಲ್ಲಿಯೇ ಮೌನವಾಗಿ, ಪ್ರಶಾಂತ ಮನಸ್ಸಿನಿಂದ ಕೇಂದ್ರೀಕರಿಸಿಕೊಳ್ಳಿರಿ. ಜೊತೆಗೆ ನೀವು ನಿಮಗೆ ಲಭ್ಯವಾಗುತ್ತಿರುವ ಮಾರ್ಗದರ್ಶನವನ್ನು ಮತ್ತು ಸಹಾಯವನ್ನು ಸ್ವೀಕರಿಸುವ ಸಲುವಾಗಿ ನಿಮ್ಮನ್ನು ನೀವು ದೃಢಪಡಿಸಿಕೊಳ್ಳಿರಿ.

*

ಈ ದೈವೀ ಕೃಪೆಯನ್ನು ಪಡೆದುಕೊಳ್ಳುವ ಸಲುವಾಗಿ ಯಾರೇ ಆಗಲಿ ಕೇವಲ ಅಭೀಪ್ಸೆಯನ್ನು ಮಾತ್ರ ಹೊಂದಿರದೇ, ಅದಕ್ಕಾಗಿ ಪ್ರಾಮಾಣಿಕವಾಗಿರುವ ನಮ್ರತಾ ಭಾವವನ್ನೂ ಮತ್ತು ಪರಿಪೂರ್ಣವಾದ ವಿಶ್ವಾಸವನ್ನೂ ಹೊಂದಿರಬೇಕು.

*

... ಒಂದೊಮ್ಮೆ ಅದನ್ನು ಅರಿತುಕೊಂಡಿರುವದಷ್ಟೇ ಅಲ್ಲದೇ ಮತ್ತು ಅದನ್ನು ಅನುಭಾವಿಸಿರುವದಷ್ಟೇ ಅಲ್ಲದೇ, ಈ ಪರಮಾತ್ಮನೇ ಈ ಎಲ್ಲದಕ್ಕೂ ಮೂಲ, ಕಾರಣಕರ್ತನು ಮತ್ತು ಅವನೇ ಚಿರಂತನವಾಗಿಯೇ ತನ್ನ ಸಂಗಡ ಸಂಪರ್ಕವನ್ನು ಮುಂದುವರೆಸಿಕೊಂಡಿರುವನು, ಹೀಗಾಗಿ ಎಲ್ಲ ಕ್ರಿಯೆಗಳೂ ಅವನ ಕೃಪೆಯಿಂದಲೇ ರೂಪಿತಗೊಂಡು, ಮತ್ತೆ ಪ್ರಶಾಂತ ಹಾಗೂ ಪ್ರಕಾಶಮಯ ತೋಷದಿಂದ ಕೂಡಿರುವ ಘಟನೆಗಳಾಗಿರುತ್ತವೆ.

*

ಶಾಂತಿ, ಸಂತೋಷ, ಶಕ್ತಿ, ಪ್ರಕಾಶ, ಜ್ಞಾನ, ಪರಮಾನಂದ ಮತ್ತು ಪ್ರೇಮಗಳೆಲ್ಲವೂ ಸಾರಗೊಂಡಿರುವ ಮತ್ತು ಸತ್ಯಸ್ವರೂಪದಲ್ಲಿಯೇ ಲಭ್ಯವಾಗುವದು ಈ ದಿವ್ಯ ಕೃಪೆಯಿಂದ ಮಾತ್ರ.

ದೈವೀ ಕೃಪೆಯು, ಅದು ನಿನ್ನದೇ ಅನಂತಾನಂತ ಕರುಣೆಯಾಗಿದೆ.

ನಾವು ಕೃತಜ್ಞತೆಯಿಮದ ನಿನಗೆ ಶರಣಾಗುತ್ತೇವೆ.

**– ಶ್ರೀಮಾತೆ**

## ನವೆಂಬರ 24, 1931

ಓ ನನ್ನ ಪರಮದಯಾಳು ಪ್ರಭುವೇ, ನೀನೇ ನಮ್ಮ ಪ್ರೇಮಮಯ ಒಡೆಯನೂ ಹೌದು, ನಿನ್ನದೇ ಕಾರ್ಯಗಳಿಗಾಗಿ ನಾನು ಈ ಭೌತಿಕದ ಪರಿಮಾಣಗೊಳ್ಳದ ಆಳಗಳಲ್ಲಿ ಅಗ್ರಾಹ್ಯವಾಗಿ ಮುಳುಗಿದ್ದೇನೆ. ನನಗರಿಯದಂತೆಯೇ ಮಿಥ್ಯತ್ವಗಳನ್ನೇ ನನ್ನ ಕರಗಳಿಂದ ಸ್ಪರ್ಶಿಸಿದ್ದೇನೆ ಜೊತೆಗೆ ಅಚೇತನದಲ್ಲಿಯೂ ಮುಳುಗಿದ್ದೇನೆ. ನಾನೀಗ ವಿಸ್ಮರಣೆ ಮತ್ತು ಅಸ್ಪಷ್ಟತೆಯ ಪರಮೋಚ್ಚ ಸ್ಥಾನವನ್ನು ತಲುಪಿದ್ದೇನೆ. ಆದರೂ ನನ್ನ ಹೃದಯದಲ್ಲಿ ಮಾತ್ರ, ಸದಾ ಸ್ಮರಣೆಯೇ ತುಂಬಿಕೊಂಡಿದೆ, ನನ್ನ

ಹೃದಯದೆಡೆ ಅವತರಣಗೊಳುವ ಆ ನಿನ್ನೆಡೆಗೆ ಸಾಗಿ ಬರುವ ಕರೆಯನ್ನೇ ದೂರಗೊಳಿಸುವ ಹಾಗೆ ಇರುವದು. ಓ ದೇವರೇ, ಓ ಪ್ರಭುವೇ, ಎಲ್ಲೆಡೆಗೂ ನಿನ್ನ ಶತ್ರುಗಳೇ ವಿಜಯಿಗಳಾದಂತೆ ಕಾಣುತ್ತಾರೆ; ಮಿಥ್ಯತ್ವವೇ ಈ ಜಗತ್ತಿನ ಚಕ್ರವರ್ತಿಯಾಗಿದೆ; ನೀನಿಲ್ಲದೇ ಇರುವ ಜೀವನವೇ ಸಾವು; ಅದೊಂದು ಶಾಶ್ವತವಾದ ನರಕ; ವಿಶ್ವಾದ ಬದಲು ಬರೀ ಅಪನಂಬಿಕೆಗಳೇ ಆಕ್ರಮಿಸಿಕೊಂಡಿವೆ. ನಮ್ಮ ಸಮರ್ಪಣೆಯನ್ನು ಈ ದಂಗಾ ಸ್ವರೂಪವು ನುಂಗಿದೆ; ವಿಶ್ವಾಸವು ಕುಂದಿದೆ; ಕೃತಜ್ಞತೆಯೂ ಇನ್ನೂ ಉದಿಸಲೇ ಇಲ್ಲ; ಕುರುಡು ಭಾವೋದ್ರೇಕಗಳು ಮತ್ತು ಪ್ರಾಣಹರಣ ಪ್ರವೃತ್ತಿಗಳು ಹೆಚ್ಚುತ್ತಲೇ, ಅಪರಾಧ ಮನೋಭಾವದ ದೌರ್ಬಲ್ಯವು ನಿನ್ನ ಸುರಕ್ಷಾತ್ಮಕ ಪ್ರೇಮಮಯ ನಿಯಮವನ್ನು ಮರೆಸಿಬಿಟ್ಟಿದೆ. ಓ ಸೃಷ್ಟಿಕರ್ತನೇ, ನಿನ್ನ ಶತ್ರುಗಳು ಮೇಲುಗೈ ಸಾಧಿಸಲು ನೀನೇ ಅನುಮತಿಸಿರುವೆಯಾ? ಓ ದೇವರೇ, ವಿಜಯವನ್ನು ಸಾಧಿಸುವ ಸಲುವಾಗಿ ನಮಗೆ ಆಜ್ಞೆಯನ್ನು ಕೊಡು, ಆಗ ವಿಜಯ ಖಂಡಿತವಾಗಿಯು ಲಭ್ಯವಾಗುವದು. ನಾವೆಲ್ಲ ವಿಶ್ವಾಸಕ್ಕೆ ಪಾತ್ರರಾದವರಲ್ಲ ಎನ್ನವುದು ನನಗರಿವಿದೆ. ಈ ಜಗತ್ತೂ ಸಹಿತ ಇನ್ನೂ ಸಿದ್ಧಗೊಂಡಿಲ್ಲ ಎನ್ನುವದೂ ಅರಿವಿದೆ. ಆದರೂ ನಿನ್ನ ಮೇಲೆ ಸಂಪೂರ್ಣ ಭರವಸೆ ಇಟ್ಟು ಆಕ್ರಂದ ಮಾಡುತ್ತಿರುವೆ, "ನಿನ್ನ ಕೃಪೆಗಾಗಿ ಬೇಡುತ್ತಿರುವೆ. ಏಕೆಂದರೆ ನಿನ್ನ ಕೃಪೆಯೊಂದೇ ನಮ್ಮೆಲ್ಲರನ್ನೂ ರಕ್ಷಿಸುತ್ತದೆ." ಈ ರೀತಿಯ ನನ್ನ ಪ್ರಾರ್ಥನೆಯು, ಅದೂ ನಾನಿರುವ ಈ ಗಭೀರದ ಆಳದಿಂದಲೇ ಇದ್ದರೂ, ಅದು ನೀನಿರುವ ಆ ತದುತ್ತರದ ನೆಲೆಗೆ ತಲುಪಲಿ; ನಾನು ದೀಪ್ತಿಮಾನ ಜ್ಯೋತಿಯಾಗಿರುವ ನಿನ್ನನ್ನು ಕಾಣುವಂತಾಗಲಿ, ನೀನು ಇಲ್ಲಿ ದರ್ಶನ ಕೊಡುವಂತಾಗಲಿ ಜೊತೆಗೆ ನನಗೆ "ದುಃಖಿತನಾಗಬೇಡ, ಧೈರ್ಯ ಕಳೆದುಕೊಳ್ಳಬೇಡ, ನಿಶ್ಚಿಂತನಾಗಿರು ಹಾಗೂ ಆತ್ಮವಿಶ್ವಾಸದಿಂದ ತುಂಬಿರು; ಅದಕ್ಕಾಗಿ ನಾನು ಬಂದೇ ಬರುತ್ತೇನೆ" ಎಂದು ಆಶೀರ್ವದಿಸುವಂತಾಗಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/381** **– ಶ್ರೀಮಾತೆ**

## ಶ್ರೀ ಅರವಿಂದರ

# "ಋಗ್ವೇದದ ಪ್ರಥಮ ಋಕ್" – ಒಂದು ಆಧುನಿಕ ವಿಶ್ಲೇಷಣೆ

**– ಅನುವಾದ: ಪುಟ್ಟು ಕುಲಕರ್ಣಿ**

[ಶ್ರೀ ಅರವಿಂದರ ಭಾಷಾ ಗಾಂಭೀರ್ಯ, ಭೂಬದುಕಿನ ಕವಚದಂತೆ ಕಂಡರೂ ಅದರಲ್ಲಿ ಅಡಗಿರುವ ವೈಶ್ವಿಕ ಹಾಗೂ ಋತದ ಅಂತರಂಗ ಮತ್ತು ವೈಶ್ವಿಕ ನಾದದ ಅನುರಣನದಲ್ಲಿ ಮಂತ್ರ ಸ್ವರೂಪವನ್ನು ಪಡೆದುಕೊಳ್ಳುವ ಹಂತದಲ್ಲಿ, ಅವರ ಭಾಷೆಯೊಡನೆ ಸ್ಪಂದಿಸುವದು ಒಂದು ಸವಾಲಿನ ವಿಷಯವೇ ಆಗಿದೆ. ಅದರಲ್ಲೂ ವೇದದ ಹಿನ್ನೆಲೆಯಲ್ಲಿ ಮತ್ತು ಮಾನವನ ಅಭಿವ್ಯಕ್ತಿಯ ಈ ಭಾಷೆಯ ಉಗಮದ ಕುರಿತು ಶ್ರೀ ಅರವಿಂದರು ಅತ್ಯಪೂರ್ವವಾದ ವಿವರಗಳನ್ನು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಮೊದಲು ವೇದದಲ್ಲಿ – ಅದರಲ್ಲೂ ಋಗ್ವೇದದಲ್ಲಿ – ಪ್ರತಿಪಾದಿತವಾಗಿರುವ ಶಬ್ದಗಳಿಂದಲೇ ಪ್ರಾರಂಭಿಸಿ, ನಂತರ ಈ ಭಾಷೆಯು ಉಪನಿಷತ್ ಕಾಲದಲ್ಲಿ ಹಾಗೂ ಕವಿ ಕಾಳಿದಾಸ ಕಾಲದಲ್ಲಿ ಹೇಗೆ ಪ್ರಕೃತಿಯೊಡನೆ ತಾದಾತ್ಮ್ಯತೆಯನ್ನು ಹೊಂದಿತ್ತು ಎನ್ನುವದರ ವಿವರಗಳನ್ನು ಒದಗಿಸಿದ್ದಾರೆ. ಇದೇ ಹಿನ್ನೆಲೆಯಲ್ಲಿಯೇ ಶ್ರೀ ಅರವಿಂದರ 'ಸಾವಿತ್ರಿ' ಮತ್ತು 'ದಿವ್ಯ ಜೀವನ'ದ ಭಾಷಾ ವ್ಯವಸ್ಥೆಯೂ ಇದೆ. ಏಕೆಂದರೆ ಶ್ರೀ ಅರವಿಂದರೇ ತಿಳಿಸಿರುವ ಹಾಗೆ 'ದಿವ್ಯ ಜೀವನ'ವನ್ನು ಅಧಿಮಾನಸದ ಹಂತದಲ್ಲಿ ಅಭಿವ್ಯಕ್ತಗೊಳಿಸಿದ್ದರೆ, 'ಸಾವಿತ್ರಿ'ಯನ್ನು ಅತಿಮಾನಸದ ಹಂತದಲ್ಲಿ ದೃಷ್ಟಿಸಿದ್ದೇನೆ ಎಂದಿದ್ದಾರೆ.

ಹೀಗಾಗಿ ಶ್ರೀ ಅರವಿಂದರ ಭಾಷಾ ಗಾಂಭೀರ್ಯತೆಯನ್ನು ಅರಿತುಕೊಳ್ಳುವಲ್ಲಿ ಇಲ್ಲಿ ಒಂದು ಕಿರು ಪ್ರಯತ್ನವಿದೆ. "ಶ್ರೀ ಅರವಿಂದರು–150" ವರ್ಷದ ಸ್ಮರಣೆಯಲ್ಲಿ, ಈ ಪ್ರಯತ್ನವನ್ನು ಅಂಕಣದಲ್ಲಿ "ಶ್ರೀ ಅರವಿಂದರು; ಭಾಷೆ ಮತ್ತು ಕಾಳಿದಾಸ" ಎನ್ನುವ ಶೀರ್ಷಿಕೆಯಲ್ಲಿ ಲೇಖನ ಸರಣಿ ಪ್ರಾರಂಭಿಸುತ್ತಿದ್ದೇವೆ. ಇದರಲ್ಲಿ ಪ್ರಪ್ರಥಮವಾಗಿ ಶ್ರೀ ಅರವಿಂದರ "ಋಗ್ವೇದದ ಮೊದಲ ಋಕ್" ಇರುತ್ತದೆ.

ಇಲ್ಲಿ "ಅಗ್ನಿ"ಯನ್ನು ನಾನಾ ಅರ್ಥಗಳಲ್ಲಿ ಅರ್ಥೈಸಿಕೊಂಡಿದ್ದರೂ ಸಹಿತ, ಸಾಯಣಾಚಾರ್ಯರ ಭಾಷ್ಯದ ಹಿನ್ನೆಲೆಯಲ್ಲಿ – ಕರ್ಮಕಾಂಡದ ರೀತಿಯಲ್ಲಿಯೇ ವಿಶ್ಲೇಷಿಸಲಾಗುತ್ತಿತ್ತು. ಆದರೆ ಸಾಯಣಾಚಾರ್ಯರೂ ಒಪ್ಪಿಕೊಂಡಿರುವಂತೆ –

ಋಗ್ವೇದದ ಜ್ಞಾನಕಾಂಡದ ವಿಶ್ಲೇಷಣೆಗಳು ಕಾರಣಾಂತರದಿಂದಾಗಿ ನಡೆಯಲೇ ಇಲ್ಲ. ಆದರೆ ಇತ್ತೀಚೆಗೆ ಅಂದರೆ 19–20ನೇ ಶತಮಾನದಲ್ಲಿ, ಋಗ್ವೇದದ ಬಗೆಗೆ ಜ್ಞಾನಕಾಂಡದ ಹಿನ್ನೆಲೆಯಲ್ಲಿ ಅಭೂತಪೂರ್ವವಾಗಿ, ಸಾಕ್ಷಾತ್ಕಾರದ ಹಂತದಲ್ಲಿ – ವಿಶ್ಲೇಷಣೆ ಒದಗಿಸಿದ ಶ್ರೀ ಅರವಿಂದರ "ವೇದ ರಹಸ್ಯ"ದ ಬಗೆಗೆ ಪ್ರಪಂಚದಾದ್ಯಂತ ಮನ್ನಣೆ ದೊರೆತಿದೆ. ಆದರೆ ಇವೆಲ್ಲವೂ ಆಂಗ್ಲ ಭಾಷೆಯಲ್ಲಿಯೇ ಇರುವದರಿಂದ, ಆ ವಿಷಯದ ಜ್ಞಾನ ಸ್ಥಳೀಯ ಭಾಷೆಗೆ ಲಭ್ಯವಾಗದೇ ಉಳಿದಿದೆ. ಈ ದಿಸೆಯಲ್ಲಿ "ಅಗ್ನಿ ಸೂಕ್ತ"ಕ್ಕೆ ಬರೆದ ಭಾಷ್ಯದಲ್ಲಿ ಶ್ರೀ ಅರವಿಂದರು, ಋಗ್ವೇದದ ಜ್ಞಾನಕಾಂಡದ ವಿವರಗಳನ್ನು ಅರ್ಥೈಸಿಕೊಳ್ಳಲು ಪಥ ನಿರ್ಮಿಸಿದ್ದಾರೆ. ತೀರ ಇತ್ತೀಚಿನವರೆಗೂ ಹಸ್ತಪ್ರತಿಗಳಲ್ಲಿ ಇದ್ದ ವಿಷಯಗಳನ್ನು ಅವರ Hymns to the Mystic Fire ಪುಸ್ತಕದಲ್ಲಿ ನೀಡಲಾಗಿದೆ. ಅದರ ಒಂದು ಲೇಖನದ ವಿವರಗಳು ಈ ಅನುವಾದಿತ ಲೇಖನದಲ್ಲಿವೆ. – ಅನುವಾದಕರು]

---

**ಶ್ರೀ ಅರವಿಂದರ**

## "ಋಗ್ವೇದದ ಪ್ರಥಮ ಋಕ್" – ಒಂದು ಆಧುನಿಕ ವಿಶ್ಲೇಷಣೆ

**– ಅನುವಾದ: ಪುಟ್ಟು ಕುಲಕರ್ಣಿ**

**1**

ಮಧುಚ್ಛಂದ ವಿಶ್ವಾಮಿತ್ರನ ಸೂಕ್ತವೊಂದು ಅಗ್ನಿಸೂಕ್ತದ ಪ್ರಾರಂಭದಲ್ಲಿಯೇ ಇದ್ದು, ಇದು ಗಾಯತ್ರೀ ಛಂದಸ್ಸಿನಲ್ಲಿ ಇದೆ. ಋಗ್ವೇದದ ಭಾಷೆ ದೇವಭಾಷೆ.[1]

**ಅಗ್ನಿಮೀಳೆ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮ್ ।**
**ಹೋತಾರಂ ರತ್ನಧಾತಮಮಂ ॥1॥**

– ನಾನು ಅಗ್ನಿಯನ್ನು ಆರಾಧಿಸುತ್ತೇನೆ, ದೇವಸಾಕ್ಷಾತ್ಕಾರಕ್ಕಾಗಿ ಅವನೆದುರು ನಿಂತ ಈ ಅಗ್ನಿ ಋತವನ್ನೂ ದರ್ಶಿಸಿದವನು, ಪ್ರಚಂಡ ಪರಾಕ್ರಮಿ ಮತ್ತು ಸಾನಂಧಘನದ ತುರೀಯನೂ ಆಗಿದ್ದಾನೆ.

ಇಲ್ಲಿ ಅಗ್ನಿಗೆ ಆಹ್ವಾನವನ್ನು ಕೊಡುವ ಮೂಲಕವೇ ಋಗ್ವೇದವು ತನ್ನನ್ನು ತಾನು ಅಭಿವ್ಯಕ್ತಗೊಳಿಸಿಕೊಳ್ಳುತ್ತಿದೆ. ಪರಮಾತಿ ಪರಮ ಪರಾಕ್ರಮಿ ಮತ್ತು ತೇಜೋಮಯ ದೇವತೆಯನ್ನು ಆಹ್ವಾನಿಸುವ ಮೂಲಕ ಈ ಋಕ್

ಪ್ರಾರಂಭಗೊಳ್ಳುತ್ತದೆ. ಹೀಗಾಗಿ ಅಗ್ನಿಯನ್ನು ದರ್ಶಿಸಿದ ಋಷಿಯು, **“**ಓ ಅಗ್ನಿ (ಅಗ್ನಿ ಎಂದರೆ ಪರಾಕ್ರಮಿ ಮತ್ತು ವ್ಯಾಪ್ತಿಯುಳ್ಳವನು ಎಂದರ್ಥ) ನಾನು ನಿನ್ನನ್ನು ಆರಾಧಿಸುತ್ತೇನೆ**”** ಎಂದು ಉದ್ಗಾರ ತೆಗೆಯುತ್ತಾನೆ.

ಹಾಗಾದರೆ ಉಳಿದೆಲ್ಲ ದೇವತೆಗಳಿಗಿಂತ **ಈ ಅಗ್ನಿಗೇ ಏಕೆ ಪ್ರಾಮುಖ್ಯತೆ ದೊರೆಯಿತು?** ಏಕೆಂದರೆ ಯಜ್ಞದಲ್ಲಿ ಪ್ರಪ್ರಥಮವಾಗಿ ದರ್ಶನಕ್ಕೆ ದೊರೆಯುವವನೇ ಈ ಅಗ್ನಿಯಾಗಿದ್ದಾನೆ. ಈ ಅಗ್ನಿಯು ದಿವ್ಯತ್ವದ ಪರಮ ದೇವತೆಯೂ ಹೌದು. ಏಕೆಂದರೆ ಇವನ ಪ್ರಜ್ವಲನಶೀಲ ಕಣ್ಣುಗಳು ನೇರಾನೇರವಾಗಿ ಋತವನ್ನು ದೃಷ್ಟಿಸುತ್ತವೆ. ಸತ್ಯವನ್ನು ಕಾಣುತ್ತವೆ. ವಿಜ್ಞಾನವನ್ನೂ ನೋಡುತ್ತವೆ. ಇವೆಲ್ಲವೂ ದೃಷ್ಟಾರನೋರ್ವನ ಆತ್ಮಾಭಿಲಾಷೆಯೂ ಆಗಿವೆ. ಇದನ್ನು ಸಾಕ್ಷಾತ್ಕರಿಸಿಕೊಳ್ಳುವದೇ ಅವನ ಗುರಿಯಾಗಿರುತ್ತದೆ. ಇಂತಹ ಅತ್ಮಾಭಿಲಾಷೆಯ ಅಭಿವ್ಯಕ್ತಿಗಳು ಋಕ್ ಮೂಲಕ ಪ್ರಕಟಗೊಂಡಿವೆ. ಇವೇ ವೇದಕ್ಕೆ ಆಧಾರವಾಗಿವೆ.

ಈ ಅಗ್ನಿಯೇ ಪ್ರಚಂಡ ಪರಾಕ್ರಮಿಯಾಗಿದ್ದು, ಅಜ್ಞಾನದ ಮೂಲಕ ಆವರಿಸಲ್ಪಡುವ ಲೌಕಿಕದ ಎಲ್ಲ ಆಕರ್ಷಣೆಗಳನ್ನು ಮತ್ತು ಸಾಧಕನೋರ್ವನಿಗೆ ಅಡೆತಡೆ ಒಡ್ಡಬಹುದಾದ ಎಲ್ಲ ಸೀಮಿತತನವನ್ನು (ಅಸ್ಮಾಜ್ಜುಹುರಾಣಮ್ ಏನ..) ನಿವಾರಿಸುವ ಶಕ್ತಿಯಾಗಿದ್ದಾನೆ. ಈ ಅಗ್ನಿಯು ತಪಸ್ಸಿನ ವಾಹಕನೂ ಹೌದು; ಊರ್ಧ್ವಾತಿಊರ್ಧ್ವದಲ್ಲಿರುವ **(ಅವ್ಯಕ್ತ ಪರಾರ್ಧದಲ್ಲಿರುವ)** ಪರಿಶುದ್ಧವಾದ ದೈವೀ ಪ್ರಜ್ಞೆಯ ಸಾಕ್ಷಾತ್ಕಾರವಾಗುತ್ತದೆ; ಇವನು ಸದಾ ವಹನದಲ್ಲಿರುವ ಶಕ್ತಿಯೂ ಆಗಿದ್ದಾನೆ. ಇವನೇ ತುರೀಯಾತೀತದೆಡೆಗೆ , **ಖೇಖ ಮಧ್ಯದೆಡೆಗೆ (ಕಾಸ್ಮೋಕಾಸ್ಮಿಕ್ ಝೆನಿತ್** ನೆಲೆಗೆ) ಒಯ್ಯುವ ಮತ್ತು ಸಚ್ಚಿದಾನಂದವನ್ನು ತೋರುವ ದಿವ್ಯಜ್ಯೋತಿ ಸ್ವರೂಪನಾಗಿದ್ದಾನೆ. ಇದು ಪ್ರಥಮ ಋಕ್ಕಿನ ಆಂತರ್ಯವಾಗಿದೆ.

ಹಾಗಾದರೆ ಇಲ್ಲಿ ಯಜ್ಞ ಎಂದರೆ ಏನು ಹಾಗೂ ಈ ಅಗ್ನಿ ಯಾರು ಎನ್ನುವ ಪ್ರಶ್ನೆಗಳು ಉದ್ಭವಿಸುತ್ತವೆ. ಯಜ್ಞ ಬ್ರಹ್ಮಾಂಡದ ಒಡೆಯನಾಗಿದ್ದಾನೆ. ಇದು ಲೌಕಿಕ ಬದುಕಿನ ಪ್ರಜ್ಞೆಯಾಗಿದ್ದರೂ, ಇದೆಲ್ಲವನ್ನೂ ಹೊಂದಿ ವಿಶ್ವನಿಯಂತೃ ಆಗಿದ್ದಾನೆ. ಯಜ್ಞ ಎಂದರೆ ದೇವತೆ ಎಂದರ್ಥ. ಅಗ್ನಿಯೂ ಸಹಿತ ಬದುಕಿನ ಪ್ರಜ್ಞೆ (ಚೇತನ/ ಚಿತ್ತು) ಆಗಿದ್ದು, ಸದಾ ವಿಕಸನಗೊಳ್ಳುತ್ತಲೇ ಇರುತ್ತದೆ. ಹೀಗಾಗಿ ಇದು **“ಸೃಷ್ಟಾರ”**[2]ನಾಗಿದ್ದು, ಸೃಷ್ಟಿಯ ಕಾರ್ಯವನ್ನು ಮಾಡುವದರ ಜೊತೆಗೆ ತನ್ನ ಬಲವನ್ನೂ ಪ್ರತಿನಿಧಿಸುತ್ತಾನೆ. ಹೀಗಾಗಿ ಅಗ್ನಿಯೂ ಸಹಿತ ದೇವತೆಯಾಗಿದ್ದಾನೆ.

ಆದರೆ ಲೌಕಿಕ ಪ್ರಪಂಚದ ಬುದ್ಧಿಯು, ದೇವರೂ ಇಲ್ಲ ದೈವವೂ ಇಲ್ಲ ಎನ್ನುವ ಭಾವದಲ್ಲಿ ನಿಂತಿರುತ್ತದೆ. ಹೀಗಾಗಿ ಯಜ್ಞವೂ ಇಲ್ಲ, ಅಗ್ನಿಯೂ ಇಲ್ಲ ಎನ್ನುವ ಧೋರಣೆಯಲ್ಲಿಯೇ ಮುಂದುವರೆಯಲು ಬಯಸುತ್ತದೆ. ಈ ಲೌಕಿಕ ಪ್ರಪಂಚವು ಕಾಣುತ್ತಿರುವದು ದರ್ಶನಕ್ಕೆ ಸುಲಭವಾಗಿ ಲಭ್ಯವಾಗುತ್ತಿರುವ ಪಂಚ ಭೂತಗಳನ್ನು ಮಾತ್ರ. ಅದರಲ್ಲೂ ಅವುಗಳ ಅಸ್ತಿತ್ವದ ಸಂಗತಿಗಳನ್ನು ಮಾತ್ರ ಒಪ್ಪಿಕೊಳ್ಳುತ್ತದೆ. ಪಂಚ ಭೂತಗಳ ನಿರ್ಮಾಣವನ್ನು ಮಾತ್ರ ಸಮ್ಮತಿಸುತ್ತದೆ. ಅದರಲ್ಲೂ ಅವುಗಳ ಭೌತಿಕ ಅಸ್ತಿತ್ವವನ್ನು ಮತ್ತು ಚಲನವಲನಗಳನ್ನು ಗಮನದಲ್ಲಿಟ್ಟುಕೊಳ್ಳುತ್ತದೆ. ಹೀಗಾಗಿ ಈ ದೃಷ್ಟಿಕೋನಕ್ಕೆ ಅಗ್ನಿಯು ಕಾಣುವದಿಲ್ಲ, ಬದಲಾಗಿ ಬೆಂಕಿ ಮಾತ್ರ ಕಾಣುತ್ತದೆ. ಇಲ್ಲಿ ದೈವತ್ವವನ್ನು ಕಾಣುವದಕ್ಕಿಂತ ಭೂಮಿಯ ಹಸಿರು ವರ್ಣ, ಆಕಾಶದಲ್ಲಿ ಹೊಳೆಯುತ್ತಿರುವ ಸೂರ್ಯ, ಸಿಗುವ ವಾಯುವಿನ ಸ್ಪರ್ಶ ಮತ್ತು ನೀರಿನ ಪ್ರವಾಹವನ್ನು ಮಾತ್ರ ಗ್ರಹಿಸಿಕೊಳ್ಳುತ್ತದೆ.

ಹೀಗಾಗಿ ದೇಹಭಾವದೊಂದಿಗೆ ಇರುವ ವಿಷಯವನ್ನು ಮಾತ್ರ ದೇಹಭಾವದೊಂದಿಗೆ ಅಸ್ತಿತ್ವದಲ್ಲಿರುವ ಇರುವ ಮನುಷ್ಯನು ದೇಹಭಾವದಲ್ಲಿಯೇ ಗಮನಿಸುತ್ತಾನೆ. ಆದರೆ ಅರಿತುಕೊಳ್ಳುವ ನಿಜವಾದ "ಸಂಗತಿ"ಯೊಂದು ದೇಹದೊಳಗೆ ಇದೆ ಎನ್ನುವದನ್ನು ಗಮನಿಸುವದಿಲ್ಲ. ದೇಹದ ಆಂಗಿಕಾಭಿನಯಗಳು ಕಂಡರೂ ಅದಕ್ಕೆ ಪ್ರಚೋದನೆಯನ್ನು ನೀಡಿದ ಅಂತರಂಗದ ಶಕ್ತಿಯೊಂದು ಹಾಗೂ ಶಬ್ದದ ಮೂಲಕ ಕೇಳುವದರ ಹಿಂದೆ ಇರುವ ವಿಚಾರಗಳಂತೆಯೇ ಅಗ್ನಿಯೂ ಬೆಂಕಿಯಲ್ಲಿ ಇರುತ್ತಾನೆ. ಮತ್ತು ದೇವರೂ ಸಹಿತ ಈ ಲೋಕದಲ್ಲಿ ಇರುವನು. ಇವರು ನಮಗೆ ಕಾಣುತ್ತಿರುವ ಲೋಕಗಳಲ್ಲಿಯೂ ಇರುವರು ಮತ್ತು ಹೊರಗಡೆಯೂ ಇರುತ್ತಾರೆ.

ಹಾಗಾದರೆ ಈ ಶಕ್ತಿಗಳು ಬೆಂಕಿಯಲ್ಲಿ ಹೇಗೆ ಇರುತ್ತಾರೆ? ಜಗತ್ತಿನಲ್ಲಿ ಹೇಗೆ ಇರುತ್ತಾರೆ? ಎನ್ನುವದಕ್ಕೆ, ಮಾನವನು ಹೇಗೆ ದೇಹದಲ್ಲಿ ವಾಸವಾಗಿದ್ದಾನೆಯೋ ಅದೆ ತೆರನಾಗಿ ಅಗ್ನಿಯೂ ಇರುವನು. ಆಂಗಿಕಾಭಿನಯದ ಹಿನ್ನೆಲೆಯಲ್ಲಿ ಹೇಗೆ ವೈಚಾರಿಕತೆಯು ಇರುವದೋ ಅದೇ ರೀತಿಯಲ್ಲಿ ಅಗ್ನಿಯೂ ಇರುತ್ತಾನೆ. ಎಲ್ಲರಿಗೂ ಒಪ್ಪಿತವಾಗಿರುವ ಸಂಗತಿಯಂತೆ, ಈ ದೇಹವೇ ಮಾನವನಲ್ಲ; ಅವನ ಆಂಗಿಕಾಭಿನಯಗಳೇ ವಿಚಾರವಲ್ಲ; ಹೀಗಾಗಿ, ಮನುಷ್ಯನೆಂದರೆ "ದೇಹದ ಮೂಲಕ ಪ್ರಕಾಶನಗೊಂಡವನು" ಎಂದರ್ಥ. ಆಂಗಿಕಾಭಿನಯಗಳೂ ಸಹಿತ

ಪ್ರಕಾಶನಗೊಂಡ "ವಿಚಾರ"ವಾಗಿರುತ್ತವೆ. ಇದೇ ತೆರನಾಗಿ ಬೆಂಕಿಯಲ್ಲಿ ಪ್ರಕಾಶನಗೊಂಡವನು ಅಗ್ನಿ; ಲೋಕವೆಂದರೆ ಪ್ರಕಾಶನಗೊಂಡ ದೈವ ಎಂದಾಗುತ್ತದೆ.

ಹೀಗಾಗಿ ಮಾನವನು ಕೇವಲ ದೇಹದ ಮೂಲಕ ಮಾತ್ರ ಪ್ರಕಾಶನಗೊಳ್ಳುವದಿಲ್ಲ. ಅದಕ್ಕಿಂತ ಮಿಗಿಲಾಗಿ ಅವನ ಕಾರ್ಯ–ಚಿಂತನಗಳ ಮೂಲಕ ಪ್ರಕಾಶನಗೊಳ್ಳುತ್ತಾನೆ. ವಿಚಾರ (ಚಿಂತನವೂ) ಸಹಿತ ಕೇವಲ ಅವನ ಆಂಗಿಕಾಭಿನಯ ಮಾತ್ರವಾಗಿ ಪ್ರಕಟಗೊಳ್ಳುವದಿಲ್ಲ. ಇದಕ್ಕೆ ವಾಕ್ ಮತ್ತು ಕರ್ಮದ ಅವಶ್ಯಕತೆಯೂ ಇರುತ್ತದೆ. ಇದೇ ರೀತಿಯಲ್ಲಿ ಅಗ್ನಿಯೂ ಸಹಿತ ಕೇವಲ ಬೆಂಕಿಯಲ್ಲಿ ಮಾತ್ರ ದರ್ಶನಕ್ಕೆ ಸಿಗುವದಿಲ್ಲ. ಜಗತ್ತಿನ ಎಲ್ಲ ಆಗು–ಹೋಗುಗಳ ಮೂಲಕ–ಸೂಕ್ಷ್ಮಾತಿಸೂಕ್ಷ್ಮವಾಗಿ ಹಾಗೂ ಬೃಹತ್ ರೂಪದಲ್ಲಿಯೂ, ಮತ್ತೆ ಶಾಖದ ರೂಪದಲ್ಲಿಯೂ, ಬಲದ ಸ್ವರೂಪದಲ್ಲಿ ಜೊತೆಗೆ ಪ್ರದೀಪ್ತತೆಯಲ್ಲಿ ಪ್ರಕಾಶನಗೊಳ್ಳುತ್ತಾನೆ. ಅದೆ ರೀತಿಯಲ್ಲಿ ದೇವರೂ (ದೈವವೂ) ಸಹಿತ ಪ್ರಪಂಚದಲ್ಲಿ ಮಾತ್ರ ಪ್ರಕಾಶನಗೊಳ್ಳುವದಿಲ್ಲ. ಅದಕ್ಕಿಂತ ಹೆಚ್ಚಾಗಿ, ನಿಖರವಾಗಿ ಎಲ್ಲ ಸಂಚಲನಗಳಲ್ಲಿ ಪ್ರಕಾಶನಗೊಳ್ಳುತ್ತ ಪ್ರಜ್ಞೆಯ ಸಹಕಾರದೊಡನೆ ಕಾರ್ಯರೂಪ ಪಡೆಯುತ್ತ ಮತ್ತು ಅಸ್ತಿತ್ವಕ್ಕೆ ಬರುವ ಸೌಷಮ್ಯ(Harmony)ದೊಡನೆ ಪ್ರಕಾಶನಗೊಳ್ಳುತ್ತಾನೆ.

ಅದೇ ರೀತಿಯಲ್ಲಿ ಯಜ್ಞವೂ ಸಹಿತ ತನ್ನಲ್ಲೆ ತಾನು**(ಯಜ್ಞೇನ ಯಜ್ಞಮಯಂ)** ಎನ್ನುವದಕ್ಕೆ ಏನರ್ಥ? ಅದೇ ರೀತಿಯಲ್ಲಿ ಅಗ್ನಿಯೂ ತನ್ನೊಳಗೆ ತಾನು ಎನ್ನುವದಕ್ಕೆ ಏನರ್ಥವಿದೆ? ಇದನ್ನು ವಿಶ್ಲೇಷಿಸಿದರೆ, **– ಯಜ್ಞ ಎಂದರೆ ಅಸ್ತಿತ್ವ ಅಥವಾ ಆತ್ಮ** ಎಂದರ್ಥ. **ಜಾಗ್ರತಿ ಎಂದರೆ ಆನಂದ. ಇದೇ ಸತ್–ಚಿತ್–ಆನಂದವಾಗಿರುತ್ತದೆ.** ಏಕೆಂದರೆ ಚಿತ್ತು ಮತ್ತು ಆನಂದ ಇವೆರಡೂ ಸತ್ತಿನಲ್ಲಿಯೇ ಅಂತರ್ಗತವಾಗಿರುತ್ತವೆ. ಯಾವಾಗ ಅಸ್ತಿತ್ವದಲ್ಲಿ ಇರುತ್ತಾನೆಯೋ – ರೂಪಧಾರಿಯಾಗಿರುತ್ತಾನೆಯೋ, ಆಗ ಜಾಗ್ರತ್ ಮತ್ತು ಆನಂದವು ಗುಣಸ್ವರೂಪಿಯಾಗಿದ್ದು ಸಗುಣನೆನಿಸಿಕೊಳ್ಳುತ್ತಾನೆ. ಯಾವಾಗ ತನ್ನದೇ ಆತ್ಮದಲ್ಲಿ ಅಂತರಂಗದಲ್ಲಿ ಜಾಗ್ರತಿ ಮತ್ತು ಆನಂದದ ಮೂಲ ಸ್ವರೂಪದಲ್ಲಿ ಇದ್ದಲ್ಲಿ ಆಗ ನಿರ್ಗುಣಾತ್ಮಕನಾಗಿರುತ್ತಾನೆ.

ಹೀಗಾಗಿ ಚಿಂತನವು ಕೇವಲ ದೇಹಾಭಿವ್ಯಕ್ತಿ ಮಾತ್ರ ಅಲ್ಲ. ಅದು ದೇಹದ ಮೂಲಕವೇ ನಡೆಸಲ್ಪಡುವ ಕ್ರಿಯಾತ್ಮಕ ಕರ್ಮವಾಗಿದ್ದು ಜೊತೆಗೆ ಅವನ ವಾಣಿಯ ಮೂಲಕವೇ ರೂಪುಗೊಳ್ಳುತ್ತದೆ. ಅದೇ ತೆರನಾಗಿಯೆ ಅಗ್ನಿಯು ಸಹಿತ ಬೆಂಕಿಯಿಂದಲೇ ಮಾತ್ರ ರೂಪುಗೊಂಡಿರುವದಿಲ್ಲ. ಅದಕ್ಕಿಂತ ಹೆಚ್ಚಾಗಿ ಜಗತ್ತಿನ (ವಿಶ್ವದ) ಎಲ್ಲ ಕಾರ್ಯಗಳಿಂದ ಉದಿಸುತ್ತಾನೆ. ಇದು ಸೂಕ್ಷ್ಮಾತಿಸೂಕ್ಷ್ಮವಾದ ಕಣಗಳಲ್ಲಿಯೂ ಇರಬಹುದು ಅಥವಾ ಸಾಕಾರ ಸ್ವರೂಪದ ಘನಸ್ಥಿತಿಯಲ್ಲಿಯೂ ಇರಬಹುದು. ಇದನ್ನೇ ನಾವು ಶಾಖ–ಉಷ್ಣತೆ, ಶಕ್ತಿ ಮತ್ತು ಬಲದ ರೂಪದ ಮೂಲತತ್ತ್ವವನ್ನಾಗಿಸಿಕೊಂಡಿದ್ದೇವೆ, ಅದೇ ತೆರನಾಗಿ ದೇವರೂ ಸಹಿತ ಕೇವಲ ಈ ಭೌತಿಕ ಜಗತ್ತಿನಲ್ಲಿ ಮಾತ್ರವೇ ರೂಪುಗೊಳ್ಳುವದಿಲ್ಲ. ಚಿತ್ತದ–ಚೇತನದ–ಸೌಷಮ್ಯದೊಡನೆ ಜರುಗುವ ಎಲ್ಲ ಜೀವಮೂಲಗಳಲ್ಲಿ ಚಲನವಲನಗಳಲ್ಲಿಯೂ ರೂಪುಗೊಳ್ಳುತ್ತಾನೆ. ಅವನ ಇರುವಿಕೆಯಿಂದಾಗಿಯೇ ಲೌಕಿಕ ಜಗತ್ತಿನ ಸ್ವರೂಪವನ್ನು ಮಾನವನು ಅರ್ಥೈಸಿಕೊಳ್ಳಬಲ್ಲವನಾಗಿದ್ದಾನೆ.

ಒಟ್ಟಿನಲ್ಲಿ, **ಯಜ್ಞ ಎಂದರೆ ಆತ್ಮ; ಜಾಗೃತ್; ಆನಂದ**ವಾಗಿದೆ. ಯಜ್ಞವೆಂದರೆ **ಸತ್–ಚಿತ್–ಆನಂದ**ವಾಗಿದೆ. ಏಕೆಂದರೆ ಚಿತ್ ಮತ್ತು ಆನಂದಗಳು ಸತ್ತಿನ ಸ್ವರೂಪಗಳೇ ಆಗಿವೆ. ಯಾವಾಗ ಯಜ್ಞವು ಆತ್ಮರೂಪಿಯಾಗಿರುತ್ತದೆಯೋ ಆಗ ಜಾಗ್ರತಿ ಮತ್ತು ಅವನಲ್ಲಿ ಗುಣಗಳಾಗಿರುದರಿಂದ ಆಗ ನಿರ್ಗುಣ ಸತ್ ಎನಿಸಿಕೊಳ್ಳುತ್ತಾನೆ. ದೈಹಿಕ ಸ್ವರೂಪವಿಲ್ಲದಿರುವದರಿಂದ (ನಿರಾಕಾರವಾಗಿರುದರಿಂದ), ಜಾಗೃತ್ ಮತ್ತು ಆನಂದಗಳು ಆತ್ಮನಲ್ಲಿಯೇ ಸಂಯೋಗಗೊಂಡು ನಿವೃತ್ತ ಭಾವದಲ್ಲಿ ಇರುತ್ತವೆ. ನಿವೃತ್ತ ಎಂದರೆ ಮಮಕಾರರಹಿತವಾದ ಚಟುವಟಿಕೆಯಿಂದ ಕೂಡಿದ ಕಾರ್ಯ ಎಂದರ್ಥ. ಇಂಥ ಸ್ಥಿತಿಯಲ್ಲಿ ಇದನ್ನು ಯಜ್ಞವೆಂದು ಕರೆಯಲು ಸಾಧ್ಯವಿಲ್ಲ. ಏಕೆಂದರೆ ಅವನು ತನ್ನಲ್ಲೇ ತಾನೂ ತಲ್ಲೀಯವಾಗಿರುದರಿಂದ ಯಾವುದೇ ಚಟುವಟಿಕೆಯಿಲ್ಲದೇ ಇರುವದರಿಂದ, ತನ್ನಲ್ಲೇ ತಾನು ತನ್ನನ್ನು ಸಾಕ್ಷಾತ್ಕರಿಸಿಕೊಳ್ಳುವ ಹಂತದಲ್ಲಿ ಇರುವದರಿಂದ "ಯಜ್ಞ"ವೆಂದು ಕರೆಯಲು ಬರುವದಿಲ್ಲ.

ಆದರೆ ಅವನು ಅಸ್ತಿತ್ವ ಪಡೆದುಕೊಂಡಲ್ಲಿ, ಗುಣವನ್ನು ಪ್ರಕಟಪಡಿಸುತ್ತಿದ್ದಲ್ಲಿ ಆಗ "ಸಗುಣನಾಗಿದ್ದರೂ ಸಹಿತ ಅವನ ಸಹಜ ಪ್ರವೃತ್ತಿಯು ನಿವೃತ್ತಿ ಹಂತದಲ್ಲಿಯೇ ಇರುತ್ತದೆ. ಸಗುಣತ್ವದಲ್ಲಿಯೂ ಸಹಿತ ಮಮಕಾರರಹಿತನಾಗಿ

ಲೌಕಿಕ– ಚಟುವಟಿಕೆಗಳನ್ನು ನಡೆಸುವ ಮೂಲಕ ಜಾಗೃತ್ ಮತ್ತು ಆನಂದವನ್ನು ಹೊಂದುತ್ತಾನೆ." ಆದಾಗ್ಯೂ ಸಹಿತ ಅವನು ತನ್ನ ಶಕ್ತಿಯ ಮೂಲಕವಾಗಿ ಕರ್ಮಗಳಲ್ಲಿ ತೊಡಗಿಕೊಳ್ಳುತ್ತಾನೆ. ಈ ಮೂಲಕ, ಅದನ್ನು ಕಾಣುವ ಮೂಲಕ, ಅವನ ವಿಶ್ವಾತ್ಮಕತ್ವವನ್ನು ತಿಳಿಸುವದರ ಮೂಲಕ (ಪ್ರವಿಶ್ಯ, ಅಧಿಷ್ಠಿತಾ) ಅವನು ಪ್ರವೃತ್ತನಾಗುತ್ತಾನೆ. ಅವನ ಮೂಲಕ ಪ್ರಕಟಗೊಂಡದ್ದೆಲ್ಲವೂ ಪ್ರವೃತ್ತವಾಗಿರುತ್ತವೆ. ಆವಾಗ ತನ್ನಲ್ಲೇ ತನ್ನನ್ನು ತಾನು ಅರಿತುಕೊಳ್ಳುವ ಮೂಲಕ ಅವನು "ಯಜ್ಞ" ಎನಿಸಿಕೊಳ್ಳುತ್ತಾನೆ. ಆದರೆ ಮುಖ್ಯ ಸಂಗತಿ ಎಂದರೆ ಕೇವಲ ಇವನನ್ನು ಮಾತ್ರ ಯಜ್ಞ ಎನ್ನುವಂತಿಲ್ಲ. ಅವನ ಮೂಲಕ ಜರುಗುವ ಎಲ್ಲ ಕ್ರಿಯೆಗಳೂ ಯಜ್ಞವಾಗಿರುತ್ತವೆ. ಸಾಮಾನ್ಯವಾಗಿ ಈ ತೆರನಾದ ಪ್ರಕ್ರಿಯೆಗೆ (ಕ್ರಿಯೆಗಳಿಗೆ) ಯೋಗವೆಂದು ಕರೆಯಲಾಗಿದೆ. ಯಾವುದೇ ಕರ್ಮವನ್ನಾದರೂ ಪರಿಷ್ಕರಣೆಗೊಳಿಸುವದು "ಯೋಗ"ವಾಗುತ್ತದೆ. ಈ ಪರಿಷ್ಕರಣೆಯ ಮೂಲಕವಾಗಿ ಪ್ರಕ್ರಿಯೆಯ ಹಂತದಲ್ಲಿ ಸಂಯೋಗಗೊಳ್ಳುತ್ತದೆ. ಈ ರೀತಿಯ ಪ್ರಕ್ರಿಯೆಗೆ ಯಜ್ಞವೆನ್ನುತ್ತಾರೆ. ಭೌತಿಕ ವಸ್ತುಗಳನ್ನು ಸಮರ್ಪಿಸುವ (ತ್ಯಾಗ/ಬಲಿ?) ಸಲುವಾಗಿ ಪರಿಗಣಿಸಲಾಗುವ ಮತ್ತು ಇಂತಹ ಕರ್ಮವು ಯಜ್ಞದ ಭಾಗವಾಗಿದ್ದುದು ಮನುಷ್ಯ ಮೊದಲಿನಕಿಂತ ಹೆಚ್ಚು ಭೌತಿಕವಾದಿಯಾಗಿ ಪರಿವರ್ತನಗೊಳ್ಳುತ್ತಿದ್ದ ಹಂತದಲ್ಲಿ ಮಾತ್ರ. ಇಂತಹ ಲೌಕಿಕವಾದದ ವಿಜೃಂಭಣೆಯ ಅವಧಿಯಲ್ಲಿ ಬಲಿಗೆ ಹೆಚ್ಚಿನ ಮಹತ್ವ ಬಂದು, ಅದೇ ಪರಂಪರೆಯೆನ್ನುವಂತೆ, ಯಜ್ಞದ(ಯಾಗದ) ಮುಖ್ಯ ಭಾಗವೆನ್ನುವಂತೆ ಪರಿವರ್ತಿತ ಅಭಿಪ್ರಾಯಗಳನ್ನೇ ಪ್ರಚಾರಗೊಳಿಸಲಾಯಿತು.

ಆದರೆ, ದೇವರು ಅಥವಾ ದೈವವು(ವಿಶ್ವಪುರುಷ ವಿಶ್ವದೇವ) ಮಾತ್ರ ಎಲ್ಲ ಕರ್ಮಗಳಿಗೂ ಸೂತ್ರಧಾರನಾಗಿದ್ದಾನೆ. ಪ್ರೇರಕಶಕ್ತಿಯಾಗಿದ್ದಾನೆ. ಅವನ ಸಲುವಾಗಿ ಮಾತ್ರ ಈ ಕ್ರಿಯೆಗಳು ಮತ್ತು ಕರ್ಮಗಳು ನಡೆಯುತ್ತವೆ. ಅವನಿಗೆ ಅರ್ಪಣೆ ಮಾಡುವ ಮೂಲಕ, ಅವನೇ ನೀಡಿರುವ ಅವನ ಕೊಡುಗೆಗಳನ್ನು ಅವನಿಗೇ ಸಮರ್ಪಿಸುವ ಸಲುವಾಗಿಯೇ ರೂಪುಗೊಂಡಿವೆ ಎಂದುಕೊಂಡು, ಬುದ್ಧ್ಯಾಪೂರ್ವಕವಾಗಿಯೋ ಅಥವಾ ಅವಿದ್ಯೆಯ ಆವರಣದಲ್ಲಿಯೋ, ನಾವು ಎಲ್ಲವನ್ನೂ ದೇವರಿಗೆ ಸಮರ್ಪಿಸುವ ಮೂಲಕ ಸಂತೃಪ್ತಿ ಹೊಂದಲು ಬಯಸುತ್ತೇವೆ. ಏಕೆಂದರೆ ಈ ಎಲ್ಲ ಕಾರ್ಯಗಳೂ ಈ ಸೃಷ್ಟಾರನಿಂದಲೇ

ದತ್ತವಾಗಿವೆ ಎನ್ನುವದನ್ನು ಅರಿತ ಮಾನವ, ತನ್ನ ಕೃತಜ್ಞತೆಯನ್ನು ತೋರಿಸಲು ಪ್ರಾರಂಭದ ಅವಧಿಯಲ್ಲಿ ಕೈಕೊಂಡ ಹಂತದಲ್ಲಿ ಈ ರೀತಿಯ ವ್ಯವಸ್ಥೆ ರೂಪುಗೊಂಡಿದ್ದಿತು.

ಹೀಗಾಗಿ, ಮಾನವನ ಪ್ರತಿಯೊಂದು ಕ್ರಿಯೆಯೂ, ಆ ದೇವನಿಗೆ ತ್ಯಾಗ/ ಬಲಿದಾನಗಳ ಮೂಲಕ ಅರ್ಪಿಸುತ್ತಿರುವ ಕೃತಜ್ಞತಾಪೂರ್ವಕವಾದ ಕಾಣಿಕೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರೂಪಿತಗೊಂಡ ಕರ್ಮಕಾಂಡದ ಮಂತ್ರಗಳು ಋತದ ಹಂತವನ್ನು ಕೇವಲ ಯಜ್ಞವೆಂದು ಪರಿಗಣಿಸಿ, ತನ್ನ ಪಥವನ್ನು ಗುರುತಿಸಿಕೊಂಡ ಅವಧಿಯಾಗಿದೆ. ಆದರೆ ಅದಕ್ಕಿಂತ ಮುಂದೆ ಇರುವ ಗುರಿಯೆಡೆಗೆ ಪಥವನ್ನೂ ನಿರ್ಮಿಸಿದೆ. ಹೀಗಾಗಿ ಆಗ ದೇವರನ್ನು ಯಜ್ಞವೆಂದು ಕರೆದಿದ್ದರು.

ಸಗುಣ ಸತ್ ಹಂತದಲ್ಲಿ ಇಂತಹ ಯಜ್ಞವು , ಯಾವುದೇ ಕರ್ಮಗಳನ್ನು ತನ್ನ ಸಲುವಾಗಿ ಕೈಗೊಳ್ಳುವದಿಲ್ಲ. ಇದು ಸತ್ತಿನ ವಿಶೇಷತೆ. ಆದಾಗ್ಯೂ ಸಹಿತ, ಅವನ ಸಲುವಾಗಿ ಅವನು ಕಾರ್ಯಪ್ರವೃತ್ತನಾಗಿರುತ್ತಾನೆ. **ಅವನ ಬಲ–ಶಕ್ತಿ–ಚಿತ್ ಎಲ್ಲವೂ ಅವನ ಜಾಗ್ರತಿಯ ಮೂಲಕ ಅನುಷ್ಠಾನಗೊಳ್ಳುತ್ತವೆ.** ಆದರೆ, ತನ್ನಲ್ಲೇ ಅಂತರ್ಗತವಾಗಿರುವ, ನಿರ್ಮಾಣಗೊಂಡಿರುವ ಜಗತ್ತಿನ ಸಹಕಾರದೊಂದಿಗೆ ವಸ್ತುಗಳು ಉತ್ಪನ್ನಗೊಂಡು, ಸೃಷ್ಟಿಯ ಪ್ರಕ್ರಿಯೆಗೆ ನಾಂದಿಯಾಗುತ್ತದೆ. ಇದು ಪ್ರಕಟಗೊಳ್ಳುತ್ತದೆ. ಒಟ್ಟಿನಲ್ಲಿ ನಿರಾಕಾರಮಯದ ಹಂತದಿಂದ ಸಾಕಾರರೂಪಿ ಹಂತಕ್ಕೆ, ಅದೂ ಅವನ ಅಂತರಂಗದಲ್ಲಿಯೇ ಸೃಷ್ಟಿಗೊಳ್ಳುತ್ತದೆ. ಹೀಗಾಗಿ ಶಕ್ತಿ ಮತ್ತು ಜಾಗೃತಿ, ಚಿತ್ ಮತ್ತು ಶಕ್ತಿ ಇವು ಒಂದೇ ಆಗಿವೆ. ನಮ್ಮ ನಮ್ಮ ಅನುಕೂಲಕ್ಕಾಗಿ ನಾವು ಅದನ್ನು ಚಿಚ್ಛಕ್ತಿ ಎಂದು ನಾಮಕರಣಗೊಳಿಸಿದ್ದೇವೆ..

**ಅಗ್ನಿ; ಋಕ್ಕಿನ ವೈಜ್ಞಾನಿಕ ಮತ್ತು ಮನಶ್ಶಾಸ್ತ್ರೀಯ ವಿಶ್ಲೇಷಣೆ:**

ಅಗ್ನಿಯು ದೇವತೆಗಳ ಪೈಕಿ ಓರ್ವ ದೇವತೆಯಾಗಿದ್ದಾನೆ. ಸದಾ ಕಾಂತಿಮಯತೆಯಲ್ಲಿ, ಪ್ರಕಾಶದ ಒಡೆಯನಾಗಿ, ಬೃಹತ್–ಬ್ರಹ್ಮಾಂಡದ ಕ್ರೀಡಾಪಟುವಾಗಿ ಲೀಲೆಯಲ್ಲಿ ತೊಡಗಿದ್ದಾನೆ. ಇವನ ಲೀಲೆಗಳ ವಿಷಯದಲ್ಲಿ – ಪ್ರಮುಖ ಸ್ಥಾನದಲ್ಲಿ ಪರಿಗಣಿತವಾಗದೇ ಇದ್ದರೂ ಸಹಿತ– ಯಜ್ಞವೇ

ಮಹೇಶ್ವರನಾಗಿರುವ ಸರ್ವಶಕ್ತ ದೇವನಾಗಿದ್ದಾನೆ. ಇವನೇ ಬೆಂಕಿಯ ಸ್ವರೂಪದಲ್ಲಿಯೂ, ತನ್ನದೇ ಆಂತರ್ಯದಂತೆ, ತನ್ನದೇ ಚಟುವಟಿಕೆಗಳಲ್ಲಿ – ಕ್ರೀಡೆಗಳಲ್ಲಿ–ಲೀಲೆಗಳಲ್ಲಿ–ರೂಪಗಳಲ್ಲಿ ಪ್ರಕಾಶಗೊಳ್ಳುತ್ತಾನೆ. ಇವನು ಜನ್ಮತಃ ಪರಮಾತಿಪರಮ ಪರಿಶುದ್ಧನಾಗಿದ್ದು ಇವನು ಯಾವುದೇ ರೀತಿಯ ಮೃಣ್ಮಯದ ಘಟನೆಗಳಲ್ಲಿ ಅಥವಾ ಆಶುದ್ಧವಾದ ಘಟನೆಗಳಲ್ಲಿ ಸಿಲುಕುವದೇ ಇಲ್ಲ. ಧನಾತ್ಮಕದ ವಿಷಯವೇ ಆಗಿರಲಿ ಅಥವಾ ನಿಷೇಧಾತ್ಮಕದ ವಿಷಯಗಳೆ ಆಗಿರಲಿ, ಎಲ್ಲೆಡೆಗೂ ಸಮಾನ ಮನೊಭಾವದಿಂದ ವರ್ತಿಸುತ್ತಾನೆ. ಅದು ಅವನ ಸಹಜ ಭೂಮಿಕೆಯೂ ಆಗಿದೆ. ಇದರಿಂದಾಗಿಯೆ ಅವನು ಸದಾ ಉನ್ನತಿಗೊಳ್ಳುತ್ತ, ಅಭಿವೃದ್ಧಿಗೊಳ್ಳುತ್ತ ಜೊತೆಗೆ ದುಷ್ಟತೆಯನ್ನು ನಿಗ್ರಹಿಸಿ ಶಿಷ್ಟಗೊಳಿಸುವ ಕ್ರಿಯೆಯಲ್ಲಿ ಕಾರ್ಯ–ಪ್ರವೃತ್ತನಾಗಿರುತ್ತಾನೆ. ಇವನು ಸರ್ವವನ್ನೂ ಪರಿಶುದ್ಧಗೊಳಿಸುತ್ತಿರುವದರಿಂದ ಸದಾ ಜ್ವಲಿಸುತ್ತಲೆ ಇರುತ್ತಾನೆ. ಶುಭವನ್ನು ಉಳಿಸುವದರ ಸಲುವಾಗಿ ಅಶುಭವನ್ನೂ ದಹಿಸುತ್ತಾನೆ.

ಯಾವಾಗ ಸಾಧಕನ ದೇಹವು ತಪಸ್ಸಿನಿಂದ ಜ್ವಲಿಸತೊಡಗುತ್ತದೆಯೋ, ಆ ತಪಸ್ಸಿನ ಜ್ವಲನಶಕ್ತಿಯ ಕಾರಣದಿಂದಾಗಿ ಅವನು ಸಾಕ್ಷಾತ್ಕಾರದೆಡೆಗೆ ಸಾಗುತ್ತಾನೆ. ಇದೆ ಅವನ ದೇಹದಲ್ಲಿ ಸ್ಥಿತವಿರುವ ಎಲ್ಲವನ್ನೂ ಪರಿಶುದ್ಧಗೊಳಿಸಿ, ಎಲ್ಲ ಅಡೆತಡೆಗಳನ್ನೂ ನಿವಾರಿಸುವ ಅಜೇಯ ಶಕ್ತಿಯನ್ನು ದಯಪಾಲಿಸುತ್ತದೆ. ಅವನೇ ಸರ್ವಶಕ್ತ, ಆನಂದದಾಯಕ, ಯಾವುದೇ ತಾರತಮ್ಯವಿರದ ಸರ್ವಸಮತೆಯನ್ನು ಸಾರುವ ಅಪ್ರತಿಮದೇವತೆಯಾಗಿದ್ದಾನೆ. ಈ ರೀತಿಯಾಗಿ ಜ್ಞಾನವು ಅಗ್ನಿಯ ಮೂಲಕವೇ ಪ್ರಾಪ್ತವಾಗುವದಿರಿಂದ ಅಗ್ನಿಯನ್ನು **"ಜಾತವೇದ"** ಎನ್ನುತ್ತಾರೆ.

**ಋಕ್ಕಿನ ವೈಜ್ಞಾನಿಕ ಮತ್ತು ಮನಶ್ಶಾಸ್ತ್ರೀಯ ವಿಶ್ಲೇಷಣೆ:**

**ಅ) ಅಗ್ನಿ:** ಅಗ್ನಿಯು ದೇವತೆಯಾಗಿದ್ದಾನೆ. ಮನಸ್ಸಿನ ಪ್ರಜ್ಞಾನ ಹಂತದ ಸೂತ್ರಧಾರನಾಗಿ, ಶಕ್ತಿವಂತನಾಗಿ, ಅತ್ಯಪೂರ್ವ ಮೇಧಾಶಕ್ತಿಯ ದೇವತೆಗಳಲ್ಲಿ ಓರ್ವ ದೇವತೆಯಾಗಿದ್ದಾನೆ. ವೈದಿಕ ಮನೋಶಾಸ್ತ್ರದ ಅಭಿಮತದಂತೆ , ಇದು ಸಪ್ತ ತತ್ತ್ವಗಳ ಸಂಗಮವಾಗಿದೆ. ಇವುಗಳ ಮೂಲಕವೇ ಆತ್ಮವು ಸಾಕಾರ ರೂಪ ಪಡೆದುಕೊಳ್ಳುವ ಹಂತದಲ್ಲಿ – ಅನ್ನ–ಪ್ರಾಣ–ಮನ–ವಿಜ್ಞಾನ–ಆನಂದ–ಚಿತ್–ಸತ್– ಇವುಗಳು ಆತ್ಮದ ಸಪ್ತ ರೂಪಿ ತತ್ತ್ವವಾಗಿರುತ್ತದೆ.

1. **ಅನ್ನ (ಲೌಕಿಕ ಭೌತಿಕ ಸಮೂಹ) –**
2. **ಪ್ರಾಣ (ಸೂಕ್ಷ್ಮ ಶಕ್ತಿ)**
3. **ಮನಸ್ಸು, ಪ್ರಜ್ಞಾನಮನ,**
4. **ವಿಜ್ಞಾನ, ಆದರ್ಶಮನ,**
5. **ಆನಂದ – ಪರಿಶುದ್ಧಾತ್ಮಕವಾದ ಮತ್ತು ಅತ್ಯವಾಶ್ಯವಿರುವ ತೋಷ,**
6. **ಚಿತ್ – ಎನ್ನುವದು ಪರಿಶುದ್ಧಾತ್ಮಕವಾದ ಮತ್ತು ಮೂಲಭೂತವಾದ ಜಾಗ್ರತ್ತು ಆಗಿದೆ**
7. **ಸತ್; ಎನ್ನುವದು ಪರಮ ಪರಿಶುದ್ಧ ಮೂಲಭೂತ ಆತ್ಮವಾಗಿದೆ.**

ನಮಗೆ ಪತ್ಯವಾಗಿರುವ ಪ್ರಕಾರ – ಲಭ್ಯವಿರುವ ವಿಕಾಸವಾದದ ಹಿನ್ನೆಲೆಯಲ್ಲಿ – ಸದ್ಯದ ನಮ್ಮ ಜ್ಞಾನದ ಸ್ಥಿತಿಯ ಹಿನ್ನೆಲೆಯಲ್ಲಿ – ಸಾಮಾನ್ಯ ಮಾನವ (ಮನುಷ್ಯ, ಮಾನವತೆ) ತತ್ತ್ವವು ಅನ್ನ–ಪ್ರಾಣ–ಮನಸ್ಸುಗಳ ಮೂರು ತತ್ತ್ವಗಳಲ್ಲಿ ಮಾತ್ರ ರೂಪಿತವಿದೆ. ಇವುಗಳಲ್ಲಿಯೇ ನಮ್ಮ ಬದುಕು ರೂಪಿತಗೊಂಡಿದೆ. ಚಿಂತನಶಕ್ತಿ ಜಾಗ್ರತವಾಗಿರುವ ಮಾನವ ವರ್ಗಗಳಲ್ಲಿ ವಿಜ್ಞಾನದ ಬಲವನ್ನೂ(ಶಕ್ತಿಯನ್ನು) ಅದರ ಮೂಲಭೂತ ತತ್ತ್ವದ ಆಧಾರದಲ್ಲಿ ಉಪಯೋಗಿಸಿಕೊಳ್ಳುತ್ತಿಲ್ಲ. (ಸ್ವೇದಮೇ). ಅದರದೆ ರೂಪದಲ್ಲಿಯೂ ಬಳಸಿಕೊಳ್ಳುತ್ತಿಲ್ಲ.

ಆದರೆ, ವಿಜ್ಞಾನವನ್ನು ಮನೋಭೂಮಿಕೆಯಲ್ಲಿ ಮತ್ತು ಯುಕ್ತಾಯುಕ್ತ ವಿಷಯ(Reasoning Faculty)ದ ರೀತಿಯಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಮತ್ತೆ ಕೆಲವು ಅಸಾಮಾನ್ಯ ವ್ಯಕ್ತಿಗಳು ಮನಸ್ಸಿನ ಮತ್ತು ಬುದ್ಧಿಯ ಕ್ರಿಯೆಗಳನ್ನು ಸೂಕ್ತವಾಗಿ ಉಪಯೋಗಿಸಿಕೊಂಡು ವಿಜ್ಞಾನದ ಹಂತದಲ್ಲಿ ಕಾರ್ಯ–ಪ್ರವತ್ತರಾಗುತ್ತಾರೆ. ಪ್ರಜ್ಞಾವಂತ ಮನಸ್ಸು ಇಲ್ಲಿ ಮುಖ್ಯವಾದ ಅಂಶವಾಗಿದೆ. ಇದು ತನ್ನ ಸೂಕ್ತ ವಲಯವನ್ನು ಇಲ್ಲಿಯೇ ರೂಪಿಸಿಕೊಳ್ಳುತ್ತದೆ. ಆದರೆ ಇದರದೇ ಮೂಲ ಸ್ವರೂಪದಲ್ಲಿ, ಮಾನಸಿಕ ಮತ್ತು ವೈಜ್ಞಾನಿಕ ಅಂಶಗಳ ಸಂಯೋಗದಲ್ಲಿ ಆದರ್ಶಮಯ ಚಿತ್ತವಾಗಿ ಪರಿವರ್ತಿತಗೊಂಡು, ಮೇಧಾವಿತನ, ಪ್ರತಿಭಾನ ಎಂದು ಕರೆಯಲಾಗುವ ಹಂತದಲ್ಲಿ ಮತ್ತು ಮನಸ್ಸಿನ ಊರ್ಧ್ವಮುಖೀ ವಿಕಸನದ ಹಂತದಲ್ಲಿ ಕಾಂತಿಮಯವಾಗಿಯೇ ಇರುತ್ತದೆ.

ಇನ್ನು ಯೋಗದ ವಿಷಯವನ್ನು ನೋಡಿದರೆ, ಇದು ವಿಜ್ಞಾನದಿಂದಲೂ ಆತೀತವಾದ ವಲಯಕ್ಕೆ ಸಾಗುತ್ತದೆ. ಇದು ಯೋಗಿಗಳಿಗೆ ಸುಲಭ ಸಾಧ್ಯ. ಅಪರೂಪದಲ್ಲಿಯೇ ಅಪರೂಪವೆನ್ನುವಂತೆ ಈ ವಲಯದಲ್ಲಿ ಅಪ್ರತಿಮವಾಗಿ ಸಾಧನೆ ಮಾಡಿ, ಸಿದ್ಧಿ ಪಡೆದ ಪ್ರಸಿದ್ಧ ವ್ಯಕ್ತಿ ಎಂದರೆ ಯಾಜ್ಞವಲ್ಕ್ಯ ಋಷಿ. ಈ ಋಷಿಯು ಆನಂದದ ಹಂತವನ್ನು ದರ್ಶಿಸಿದವನು; ಆದಿತ್ಯ ಹೃದಯವನ್ನು ಸಾಕ್ಷಾತ್ಕರಿಸಿಕೊಂಡವನು; ಸಾಮಾನ್ಯವಾಗಿ, ಜಾಗ್ರದಾವಸ್ಥೆಯಲ್ಲಿ ಇರುವ ಹಂತದಲ್ಲಿ ಯಾರೂ ಈ ಆನಂದದ ಆಚೆ ಸಾಗಲು ಸಾಧ್ಯವಾಗುವದಿಲ್ಲ. ಚಿತ್ ಮತ್ತು ಸತ್‌ಗಳಿಗೆ ಮಾತ್ರ ಈ ಸುಷುಪ್ತಿಯ ಹಂತಕ್ಕೆ ಏರಲು ಸಾಧ್ಯವಾಗುತ್ತದೆ. ಏಕೆಂದರೆ ಪಂಚ ಕೋಶಗಳು ದೃಷ್ಟವಾಗಲಿಕ್ಕೆ ಬೇಕಾಗಿರುವ ಎಲ್ಲ ಭೌತಿಕ ಅಂಶಗಳಲ್ಲಿಯೇ ಇದು ರೂಪಿತಗೊಂಡಿರುತ್ತದೆ. ಆದರೆ ಸತ್ಯ ಯುಗದಲ್ಲಿ ಈ ಪಂಚ ಕೋಶಗಳ ಹಂತದ ಆಚೆ–ಆಚೆ ಎಲ್ಲರೂ ಗಮನಿಸಲು ಸಫಲರಾಗಿದ್ದಾರೆ ಎನ್ನುವಂತಿಲ್ಲ. ವಿಜ್ಞಾನಮಯ ಕೋಶದಿಂದ ಅನ್ನಮಯ ಕೋಶದವರೆಗೆ ಇರುವ ವ್ಯವಸ್ಥೆಯನ್ನು ಅಪರಾರ್ಧ ಅಥವಾ ವಿದ್ಯೆಯ ಮೇಲೆ ಅವಿದ್ಯೆಯೇ ಪ್ರಾಮುಖ್ಯ ಪಡೆದಿರುವ ಗತಿಯ ಹಂತವೆಂದು ಕರೆಯಲಾಗುತ್ತಿದೆ. ಆನಂದ ಹಂತದಿಂದ ಸತ್ ಹಂತದವರೆಗೆ ಇರುವದು ಪರಾರ್ಧ. ಇಲ್ಲಿ ಅಜ್ಞಾನ, ನೋವು, ಸೀಮಿತತನ ಯಾವುದೂ ಇರುವದಿಲ್ಲ.

ಪ್ರಚಲಿತ ವ್ಯವಸ್ಥೆಯಲ್ಲಿ ಇರುವ ಮಾನವನ ಪ್ರಜ್ಞಾ ಹಂತದಲ್ಲಿ, ಬುದ್ಧಿವಂತ ಮನಸ್ಸು ಮನೋವೈಜ್ಞಾನಿಕ ವಿಶ್ಲೇಷಣೆಗಳಲ್ಲಿ ಪ್ರಮುಖ ವಿಷಯವಾಗಿದೆ. ಈ ಹಂತದಿಂದ ಪರಿಶುದ್ಧ ತತ್ತ್ವದ ಎಡೆಗೆ – ನೆಲೆಗೆ ಕರೆದುಕೊಂಡು ಹೋಗಲು ಬೇಕಾದ ಸಾಮರ್ಥ್ಯವನ್ನು ವೇದದ ಋಕ್ಕುಗಳು ಹೊಂದಿವೆ. ಈ ಹಂತದ ಮನಸ್ಸಿನಲ್ಲಿ ಈ ಕೆಳಕಂಡ ತತ್ತ್ವಗಳು ರೂಪುಗೊಳ್ಳುತ್ತವೆ.

**1) ಸೂಕ್ಷ್ಮ ಅನ್ನ** – ಅಂದರೆ ದೇಹವು ಸೇವಿಸಿದ ಅನ್ನವು (ಆಹಾರವು) ಸೂಕ್ಷ್ಮರೂಪವಾಗಿ ಶಕ್ತಿಯಾಗಿ ಪರಿವರ್ತಿತಗೊಳ್ಳುತ್ತದೆ. ಈ ಅನ್ನದ ಒಂದಂಶವೇ ಮನೋಕೋಶವಾಗಿ ಅಥವಾ ಸೂಕ್ಷ್ಮದೇಹಿಯಾಗಿ ರೂಪಾಂತರ ಹೊಂದಿರುತ್ತದೆ.

**2) ಸೂಕ್ಷ್ಮ ಪ್ರಾಣ** – ಇದು ಮನಸ್ಸಿನ ಸೂಕ್ಷ್ಮಾತಿಸೂಕ್ಷ್ಮ ಬಲವಾಗಿದ್ದು (ಶಕ್ತಿಯಾಗಿದ್ದು) ನಾಡಿಗಳ ಮೂಲಕ ಕ್ರಿಯಾಪ್ರವೃತ್ತವಾಗಿರುತ್ತದೆ. ಇದೇ ಇಚ್ಛೆಯಾಗಿಯೂ ಪ್ರಕಟಗೊಳ್ಳುತ್ತದೆ. ಚಿತ್ತವು ಸೂಕ್ಷ್ಮದೇಹದ ತಾಮಸಿಕ

ಪ್ರತಿಕ್ರಿಯೆಯ ರೂಪದಲ್ಲಿ ಅಂತರಂಗದಲ್ಲಿ ಅಥವಾ ಅದಿಲ್ಲದೆಯೂ ಅಭಿವ್ಯಕ್ತಿಗಳನ್ನು ಸ್ವೀಕರಿಸುತ್ತದೆ. ಆದರೆ, ತಾಮಸಿಕ ರೀತಿಯಲ್ಲಿ (ಹಂತದಲ್ಲಿ), ಸಾತ್ವಿಕ ಚಿತ್ತವು ಯಾವುದೇ ಸಾಕ್ಷ್ಯವನ್ನು ಪಡೆಯಲು ಅವಕಾಶ ಇರುವದಿಲ್ಲ.

ಈ ಸಾತ್ವಿಕ ಚಿತ್ತನ್ನೇ ನಾವು ಜಾಗೃತ ಪ್ರತಿಭೆ ಎನ್ನುತ್ತೇವೆ. ಈ ಜಾಗೃತ ಪ್ರತಿಭೆಯು ಜ್ಞಾನಕ್ಕೆ ಪಥವನ್ನು ನಿರ್ಮಿಸುತ್ತದೆ. ಹೀಗಾಗಿ ಚಿತ್ತವು ಗಮನಿಸಿದ, ಗಮನಿಸದ ಎಲ್ಲವನ್ನೂ ನಾವು ಕಾಣುತ್ತೇವೆ. ಆದರೆ ಈ ರೀತಿಯಲ್ಲಿ ಇರುವ (ಗೊಂದಲದ) ಸ್ಥಿತಿಯಲ್ಲಿನ ಜ್ಞಾನವು ಉಪಯೋಗಕ್ಕೆ ಬರುವದಿಲ್ಲ. ಏಕೆಂದರೆ ಅದಿನ್ನೂ ತಾಮಸದ ಹಂತದಲ್ಲಿಯೇ ಸಿಲುಕಿಕೊಂಡಿರುತ್ತದೆ.

(ಸಶೇಷ)

---

**ಟಿಪ್ಪಣಿಗಳು:**

1. ಸಂಸ್ಕೃತಕ್ಕಿಂತಲೂ ಪ್ರಾಚೀನ; ಲೌಕಿಕ ಸಂಸ್ಕೃತ ಬೇರೆ ದೇವ ಭಾಷೆ ಬೇರೆ; ಅನು.
2. **"ಸೃಷ್ಟಾರ"**. (ಇದನ್ನು ದರ್ಶಿಸುವವನು ದೃಷ್ಟಾರ)

## ಶತಮಾನ ಕಂಡ **"ಶಂ.ಬಾ. ಜೋಶಿ"**ಯವರ ಪ್ರಥಮ ಕೃತಿ
## **"ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು"**

6

ಇದು ಸರಕಾರಕ್ಕೆ ಹೇಗೆ ಸರಿ ಹೋದೀತು? ಆ ಜನ ಸಮುದಾಯದಲ್ಲಿ ದೇಶಾಭಿಮಾನ ಪ್ರಸಾರವಾಗುತ್ತದೆ ಎಂದರೆ ಅದು ಬ್ರಿಟೀಶರ ಚಿರಸ್ಥಾಯಿತ್ವಕ್ಕೆ ಭಂಗ ತರುವಂಥ ಸಂಗತಿ. ತಮ್ಮ ದೇಶದಲ್ಲಿ ತಾವೇ ಬಾಧ್ಯಸ್ತರಿರಲಿಕ್ಕೇ ಬೇಕು. ಪರಗೃಹಸ್ಥನು ಬಂದು ನಮ್ಮ ಮನೆಯಲ್ಲಿ ಅಧಿಕಾರ ನಡೆಸಿದರೆ ಯಾರಿಗೆ ಸೇರೀತು? ಮನೆಯ ಮಾಲಿಕನು ಮಬ್ಬಿನಲ್ಲಿ ಇರುವವವರೆಗೆ ಮಾತ್ರ ಪರಗೃಹಸ್ಥನ ಆಟ ನಡೆಯುವದು. ಮನೆಯ ಯಜಮಾಣನಿಗೆ ಇದು ನಿನ್ನ ಮನೆ, ಅಧಿಕಾರ ನಡೆಸುವವನು ಪರ ವ್ಯಕ್ತಿ, ಪಾಲು ಆಗಲಿ, ಹೊಡೆದಾಡಲಿ, ಒಡೆದಾಡಲಿ, ಅದೇನೇ ಇದ್ದರೂ ಇದು ಈ ಮನೆಯ ಅಣ್ಣ–ತಮ್ಮಂದಿರಲ್ಲಿರಲಿ; ಇಂದಿಲ್ಲ ನಾಳೆಯಾದರೂ ನಮ್ಮ ಕೈಗೆ ಬಂದೀತು. ಪರ ಮನುಷ್ಯನ ಕೈಲಿ ಅದು ಹೋದರೆ, ತಿರುಗಿ ಬರುವ ಬಗೆ ಹೇಗೆ? ಎನ್ನುವ ವಿಚಾರಗಳು ಮನೆಯ ಮಾಲಿಕನಿಗೆ ಬರಲು ಪ್ರಾರಂಭಿಸಿದರೆ, ಆಗ ಆ ಮನೆಯಲ್ಲಿ ಇದ್ದ ಆ ಪರ ಮನಷ್ಯನ ಕಾಲು ಹೇಗೆ ತಾನೆ ಸ್ಥಿರವಾಗಿ ನಿಂತೀತು? ಇಂಥ ಸಮಯದಲ್ಲಿಯೇ ಆ ಪರಗೃಹಸ್ಥನ ಕರ್ತವ್ಯವೇನು ಉಳಿದೀತು? ಆಗ ಅವನು ಅಣ್ಣ–ತಮ್ಮಂದಿರಲ್ಲಿ ನ್ಯಾಯ ಹಚ್ಚುವದು, ಅಥವಾ ಅವರೆಲ್ಲರನ್ನೂ ಯಾವುದೊಂದು ಮೋಹದಲ್ಲಿ ಸಿಲುಕಿಸಿ, ತೊಡಕಿನಲ್ಲಿ ಸಿಲುಕಿಸಿ, ಮಬ್ಬಿನಲ್ಲಿ ಇರಿಸುವದನ್ನು ಮಾಡತೊಡಗುತ್ತಾನೆಯಲ್ಲವೇ? ಇಂಗ್ಲೀಷ ರಾಜಕಾರಣ ಪಟುಗಳಾದರೂ ಈ ಯುಕ್ತಿಯನ್ನು ಹೇಗೆ ಮಾಡದೇ ಬಿಟ್ಟಾರು? ಆರಂಭದಲ್ಲಿ ಕಾಂಗ್ರಸ್ಸಿನಲ್ಲಿ ಹಿಂದೂ–ಮುಸಲ್ಮಾನರೆಲ್ಲರೂ ಒಕ್ಕಟ್ಟಾಗಿಯೇ ಇದ್ದರು. ಮುಂದೆ ಮುಸಲ್ಮಾನರಿಗೆ ಸರಕಾರದ ಸವಲತ್ತು–ಪುಸಲತ್ತು ಸಿಕ್ಕಿತು. ಮೊದಲೇ ಹಿಂದೂ ಮುಸಲ್ಮಾನರಿಗೆ ಹೊಂದುವದಿಲ್ಲ [ಸೌಹಾರ್ದತೆ ಇಲ್ಲ]. ಅದರಲ್ಲಿ ಸರಕಾರದ ಪುಟ(ಕುಮ್ಮಕ್ಕು) ಸಿಕ್ಕ ಬಳಿಕ ಕೇಳುವದೇನು, ಹಿಂದೂ ಮುಸಲ್ಮಾನರಲ್ಲಿ ಕೆಲವು ಕಡೆ ದಂಗೆಗಳಾದವು. ಮುಸಲ್ಮಾನರು ಕಾಂಗ್ರೆಸ್ಸಿನಿಂದ ವಿಭಕ್ತರಾಗಿ(ಬೇರೆಯಾಗಿ) ತಮ್ಮದೊಂದು ಬೇರೆ ಒಲೆ ಹೂಡಿದರು. ಇದೇ **"ಮುಸ್ಲೀಂ ಲೀಗ್"** ಆಯಿತು. ಸರಕಾರದ ದರಬಾರದಲ್ಲಿ ಮುಸಲ್ಮಾನರು ತುಂಬತೊಡಗಿದರು. ಮಳ್ಳ ಮುಸಲ್ಮಾನರು! ಸರಕಾರವು ತಮ್ಮನ್ನು ನಿಜವಾಗಿಯೂ ಪ್ರೀತಿಸುತ್ತಿದೆ ಎಂದು ತಿಳಿದರು! ಆದರೆ **ಭವಿಷತ್ ಕಾಲವೇ ನಿಜವಾದ ನ್ಯಾಯಾಧೀಶನಲ್ಲವೇ**?

ಮುಸಲ್ಮಾನರು ಕಾಂಗ್ರಸ್ಸಿನಿಂದ ದೂರ ಹೋದ ಮಾತ್ರಕ್ಕೆ ಅದು ಕಟ್ಟಾಗಲಿಲ್ಲ (ನಿಲ್ಲಲಿಲ್ಲ). ಮುಂದೆ ಇದೇ ನಡೆಯಿತು. ಯಥಾಪ್ರಕಾರ ಲೋಕ ಸೇವೆಯ ಕೆಲಸವನ್ನು ಮಾಡಿತು. ತರುಣ ಪಕ್ಷದ ವರ್ಚಸ್ಸು ದೇಶದಲ್ಲಿ ಹೆಚ್ಚಾಗಹತ್ತಿತು. ಈ ಪಕ್ಷ ವರ್ಚಸ್ಸು ಹೆಚ್ಚಾಗಲಿಕ್ಕೆ ಇಂಗ್ಲೀಷ ಸರಕಾರವರೂ ಬಹಳ ಸಹಾಯ ಮಾಡಿದರು.

ದೇಶದಲ್ಲಿ ರೇಲ್ವೆಗಳು ಹೆಚ್ಚಾಗಿ ದೇಶದ ವ್ಯಾಪಾರಕ್ಕೆ ಅನುಕೂಲವಾಗದೇ ಧಾನ್ಯಾದಿ ಆಹಾರ ಪದಾರ್ಥಗಳು ಪರದೇಶಕ್ಕೆ ಹೋಗಲಿಕ್ಕೆ ಸಹಾಯವಾಯಿತು.; **ಪ್ಲೇಗು ಮುಂತಾದ ರೋಗಗಳ ಪ್ರಸಾರವಾಗಿ ಜನರಿಗೆ ಪೀಡೆಯೂ ಹೆಚ್ಚಿತು.**[1] ಇಂಗ್ಲೀಶ ಕಲಿತ ಜನರಿಗೆ ಆರಂಭಕ್ಕೆ ದೊಡ್ಡ ದೊಡ್ಡ ಸಂಬಳಗಳ ನೌಕರಿ ಸಿಕ್ಕವು. ಅದರಿಂದ ಈ ಜನರು ತಮಗೆ ದೇಶದ ಪರಿಸ್ಥಿತಿಯ ಯಥಾರ್ಥ ಜ್ಞಾನವಿದ್ದರೂ ಸರಕಾರದ ಪಿಂಡದಿಂದ ಬಾಯಿಯನ್ನು ಕಟ್ಟಿಕೊಂಡಿದ್ದರಿಂದ, ಅದನ್ನು ಜನರಿಗೆ ಹೇಳಲಿಕ್ಕೆ ಸಮರ್ಥರಾಗಲಿಲ್ಲ. ವ್ಯಾಪಾರ ಉದ್ಯೋಗದ ಎಲ್ಲ ದಾರಿಗಳನ್ನೂ ಬಂದು ಮಾಡಿ ನೌಕರಿಯ ಒಂದೇ ಒಂದು ದಾರಿಯನ್ನು ತೆರೆದಿಟ್ಟ ಕಾರಣದಿಂದ, ಆ ಮಾರ್ಗದ ಮೇಲೆ ವಿಶೇಷ ದಟ್ಟಣೆಯಾಯಿತು. ಮುಲ್ಕೀ ಪರೀಕ್ಷೆಯವನಿಂದ ಬಿ.ಎ., ಆದವನವರೆಗೂ ಎಲ್ಲರಿಗೂ ಒಂದೇ ದಾರಿ – ನೌಕರಿ; ನೌಕರಿ. ದಿನದಿನಕ್ಕೆ ಇಂಗ್ಲೀಷ ಬಲ್ಲ ಜನರು ಹೆಚ್ಚಾದರು. ನೌಕರಿಯ ಸ್ಥಳಗಳು (ಅವಕಾಶಗಳು) ವಿಶೇಷ ಬೆಳೆಯಲಿಲ್ಲ. ಇದರಿಂದಲೂ ಜನರಲ್ಲಿ ಒಂದು ತರದ ಅಸಂತೋಷವುಂಟಾಯಿತು. ಬಿ.ಎ., ಎಂ.ಎ., ಆಗುವವರೆಗೆ ಕಲಿಯಬೇಕು, ಕಡೆಗೆ ತಕ್ಕಂತೆ ಪ್ರತಿಫಲವೇನೂ ಸಿಗುವಂತೆ ಇಲ್ಲ. ಸ್ವತಂತ್ರ ಉದ್ಯೋಗ ಮಾಡುವದೆಂದರೆ ಪರದೇಶದ ಮಾಲಿನ ದಲಾಲಿ ಮಾಡುವ ವ್ಯಾಪಾರಿ ಅಥವಾ ಡಾಕ್ಟರ್ ಆಗಬೇಕು. ಇಲ್ಲವೇ ಅಸಡ್ಡಾಳ (ಒಂದಕ್ಕೊಂದು ಸಂಬಂಧವಿರದ) ಕಾಯಿದೇ ಇಲ್ಲದ ಕಲಮು ಹುಡುಕಿ ಅಣ್ಣ–ತಮ್ಮಂದಿರ ನ್ಯಾಯಗಳಿಗೆ ಪುಟ(ಒತ್ತು)ಕೊಟ್ಟು, ಅವರಿಂದ ಬರುವ ಕೂಳಿನಿಂದ ಜೀವಿಸಬೇಕು. ಇದರಿಂದ ಸುಶಿಕ್ಷಿತ ವರ್ಗದಲ್ಲಿ ಅಸಮಾಧಾನ ಉಂಟಾಯಿತು. **ದೇಶದಲ್ಲಿ 100ಕ್ಕೆ 5ರಂತೆಯಾದರೂ ಈ ರೀತಿಯ ಸರಕಾರಿ ನೌಕರರು ಇರುವರೋ ಇಲ್ಲವೋ ಎನ್ನುವ ಸಂಶಯವಿದೆ. ಈ 5 ಜನರ ಸಲುವಾಗಿ ಬೇಕಾಗುವ ಶಿಕ್ಷಣವೇ ಎಲ್ಲರಿಗೂ ಕೊಡಲ್ಪಟ್ಟರೆ ಹೀಗಾಗದೇ ಏನಾಗುತ್ತದೆ? 95 ಜನಕ್ಕೆ ಅವಶ್ಯವಾದ ಕಲಾಕೌಶಲ್ಯಾದಿಗಳ ಶಿಕ್ಷಣದ ವ್ಯವಸ್ಥೆಯೇ ಇಲ್ಲ.**[2]

ಹಲವು ತರದ ವ್ಯಸನಗಳೂ, ಚೈನೀ ವಸ್ತುಗಳೂ, ದುಂದುಗಾರಿಕೆಯೂ ಜನರಲ್ಲಿ ಹೆಚ್ಚಾಗಹತ್ತಿತು. ಆಹಾರದ ಪದಾರ್ಥಗಳು ತುಟ್ಟಿಯಾದವು [ದುಬಾರಿಯಾದವು]. ಹೈನವು ಕಡಿಮೆಯಾಗುತ್ತ ಬಂದಿತು. ಸಾಂಸಾರಿಕ ಭಾರವನ್ನು ಹೇಗೆ ಸಾಗಿಸಬೇಕೆಂಬ ಚಿಂತೆಯಿಂದ ಸಾಮಾನ್ಯ ಜನರು ಕ್ಷೀಣರಾಗಹತ್ತಿದರು(ತೊಂದರೆಗೆ ಒಳಗಾಗತೊಡಗಿದರು). ಮನೆತನಕ್ಕೆ ಒಬ್ಬನು ದುಡಿದರೆ ಅವನ ಹಿಂದೆ ಹತ್ತು ಜನರ ಸಂಸಾರವು ಸುಖವಾಗಿ ಸಾಗುತ್ತಿತ್ತು. ಅಲ್ಲಿ ಈಗ ಹೆಂಡಿರು ಮಕ್ಕಳೂ ಕೂಡಿ ದುಡಿದರೂ ಹೊಟ್ಟೆ ತುಂಬುವದೇ ಕಠಿಣವಾಗತೊಡಗಿತು. ಹೀಗಾಗಿ ಶಾರೀರಿಕ ಹ್ರಾಸವೂ ಹೆಚ್ಚಾಯಿತು. ಎಲ್ಲಿ ನೋಡಿದರಲ್ಲಿ ಅಕಾಲದಲ್ಲಿ ಬಂದ ತಾರುಣ್ಯ ನಾಶದಿಂದ (ಆರೋಗ್ಯಹೀನತೆಯಿಂದ) ಸಪ್ಪನ್ನ ಮೋರೆ ಮಾಡಿಕೊಂಡು ತಿರುಗಾಡುವ ಸುದಾಮರಾಯರೇ(ಬಡವರೇ) ಕಾಣುವಂತಾಯಿತು. ಹೀಗೆ ಶಾರೀರಿಕ ಮತ್ತು ಮಾನಸಿಕ ಹ್ರಾಸವು ದೇಶದಲ್ಲಿ ಹೆಚ್ಚಾಗಿ ಒಂದು ತರಹದ ಅಸಂತೋಷವು ದೇಶವನ್ನೆಲ್ಲ ವ್ಯಾಪಿಸಿತು.

"ರಾಜಾ ಕಾಲಸ್ಯ ಕಾರಣಂ" ಎಂದಿದೆ. ದೇಶದ ಪರಿಸ್ಥಿತಿಗೆ ಬಹು ಅಂಶದಿಂದ ರಾಜನೇ ಕಾರಣವೆಂಬುದನ್ನು ಜನರು ಮರೆತಿದ್ದರು. ಈ ವಿಷಯವನ್ನು "ವೀರಪಕ್ಷ"ದವರು ವೀರತನದಿಂದ ತಿಳಿಸಿಕೊಡತೊಡಗಿದರು. ವೀರಪಕ್ಷದ ಉದಯ ಕಾಲವೆಂದರೆ, ಕರ್ಝನ್ ಸಾಹೇಬರು ಬಹು ಉಪದ್ವ್ಯಾಪಿ (ಪೀಡಕ) ವ್ಹಾಯಿಸರಾಯರಾಗಿದ್ದರು. ತಮ್ಮ ಆಳ್ವಿಕೆಯಲ್ಲಿ ಹಿಂದೂ ಜನರ ಅಪಮಾನವನ್ನು ಹಲವು ತರದಿಂದ ಮಾಡಿದರು. ಯುನಿವರ್ಸಿಟಿ ಕಮೀಶನದಿಂದ ವಿದ್ಯಾಲಯಗಳ ಕಾರ್ಯಕ್ಷೇತ್ರವನ್ನು ಸಂಕುಚಿತಗೊಳಿಸಿದರು. "ಪ್ರೆಸ್ ಕಾಯಿದೆ"ಯಿಂದ ಲೇಖಕರ ಸ್ವಾತಂತ್ರ್ಯ ಹರಣ ಮಾಡಿದರು. ಹೀಗೆ ಒಂದೇ, ಎರಡೇ, ಅನೇಕ ಕೃತ್ಯಗಳಿಂದ ಬಹುಜನ ಸಮಾಜಕ್ಕೆ ಅಪ್ರಿಯರಾದರು. ಇವರು ಮಾಡಿದ ಎಲ್ಲ ಕೃತ್ಯಗಳಲ್ಲಿ ಜನರನ್ನು ರೊಚ್ಚಿಗೆಬ್ಬಿಸಲಿಕ್ಕೆ ಕಾರಣವದದ್ದು 'ವಂಗ–ಭಂಗ' ಅಂದರೆ ವಂಗ ದೇಶದ ಭಂಗ.

ವಂಗ ದೇಶವನ್ನು (ಈಗಿನ ಪಶ್ಚಿಮ ಬಂಗಾಳ ಮತ್ತು ಬಾಂಗ್ಲಾ ದೇಶ) ಮಾಡುವದರಲ್ಲಿ ಸರಕಾರದ ಅಂತಸ್ಥ ಧೋರಣೆಯೊಂದು ಇತ್ತು. ಬಂಗಾಲದಲ್ಲಿ ಇತರ ಪ್ರಾಂತಗಳಿಗಿಂತ ಹೆಚ್ಚು ವಿದ್ಯಾ ಪ್ರಸಾರವಿತ್ತು. ಯಾಕೆಂದರೆ ಬ್ರಿಟಿಶರ

ಪರಿಚಯವು ಬಂಗಾಲಿಗಳಿಗೇ ಮೊದಲು ಆಗಿದೆ. ಬಂಗಾಲಿಗಳಲ್ಲಿ ಉಂಟಾದ ನವಜೀವನ ಜ್ಯೋತಿಯು ದಿನೇ ದಿನೇ ಹೆಚ್ಚು ಪ್ರಜ್ವಲಿತವಾಗಹತ್ತಿತು. ಇದು ಅಧಿಕಾರಿಗಳಿಗೆ ಹೇಗೆ ಸಹನವಾದೀತು? ಅವರು ಈ ಜ್ಯೋತಿಯನ್ನು ದೊಡ್ಡದು ಮಾಡಬೇಕೆಂದು ಎಣಿಕೆ ಹಾಕಹತ್ತಿದರು. (ನಿಜವಾಗಿ ಅದು ದೊಡ್ಡದಾಯಿತು!) ಇದರ ನಾತವು(ವಾಸನೆಯು) ಬಂಗಾಳಿಗಳಿಗೆ ಬಡಿಯಿತು. ಈ ಕಾಲಕ್ಕೆ ಕರ್ಝನ್ ಸಾಹೇಬರು ವ್ಹಾಯಿಸರಾಯರಾಗಿದ್ದರು. ಅವರು ಬಲು ಸಕ್ಕರೆಯ ಮಾತನಾಡುವವರು, ಗೋಖಲೆಯಂಥವರನ್ನು ತಮ್ಮ ಸವಿಮಾತಿನಿಂದ ಬಲೆಯಲ್ಲಿ ಹಿಡಿದವರು. ಬಂಗಾಲ ವಿಭಾಗದ ಅವಶ್ಯಕತೆಯ ಮೇಲೆ ಬಣ್ಣದ ಮಾತುಗಳಿಂದ ತುಂಬಿದ ವ್ಯಾಖ್ಯಾನಗಳನ್ನು ಕೊಟ್ಟರು. ಮುಸಲ್ಮಾನರನ್ನು ಅನುಕೂಲ ಮಾಡಿಕೊಳ್ಳಲಿಕ್ಕೆ ಹೆಣಗಿದರು. ಒಬ್ಬ ಲೆಫ್ಟಿನೆಂಟ್‌ನಿಂದಾಗಿ ಇಡೀ ಬಂಗಾಲದ ಕೆಲಸವನ್ನು ನೋಡಲಾಗುದಿಲ್ಲ ಎಂಬ ನೆಪದಿಂದ ಈ ವಿಭಾಗವು ಮಾಡಲ್ಪಡುತ್ತದೆಂದು ಅಧಿಕಾರಿಗಳು ಪ್ರತಿಪಾದಿಸುತ್ತಿದ್ದರು.

ಆದರೆ ಇದು ಜನರ ಮನಸ್ಸಿಗೆ ಎಳ್ಳಷ್ಟೂ ಹಿಡಿಸಲಿಲ್ಲ. ಪೂರ್ವ ಬಂಗಾಲವನ್ನು ಆಸಾಮಕ್ಕೆ[3] ಕೂಡಿಸುವದು ಗೊತ್ತಾಗಿತ್ತು. ಆಸಾಮವು ಅಶಿಕ್ಷಿತರ ಪ್ರಾಂತವಾಗಿದೆ. ಆದ ಕಾರಣ ಆಸಾಮದ ಕೆಂಚರೊಡನೆ ಕೂಡುವದು ಪೂರ್ವ ಬಂಗಾಲಿಗಳಿಗೆ ಸೇರಲಿಲ್ಲ. ಕೆಲವು ಜನರಿಗೆ ಕಲಕತ್ತೆಯನ್ನು ಬಿಟ್ಟು ತಮ್ಮ ರಾಜಧಾನಿ ಡಾಕಾ ಪಟ್ಟಣವಾದದ್ದನ್ನು ನೋಡಿ ಕೆಡಕೆನಿಸಿತು. ಅನೇಕ ಶ್ರೀಮಂತರಿಗೆ ತಮ್ಮ ಹೊಲ-ಮನೆಗಳು ಎರಡೂ ಭಾಗಗಳಲ್ಲಿ ಬರುತ್ತಿದ್ದುದರಿಂದ, ನ್ಯಾಯಕೋರ್ಟಿಗೆ ಹೋಗುವದಾದಲ್ಲಿ ಕಲಕತ್ತೆ ಮತ್ತು ಡಾಕಾ ಎನ್ನುವ ಎರಡೂ ಕಡೆಗೆ ಓಡಾಡಬೇಕಾಯಿತು. ಕಲಕತ್ತೆಯು ದೊಡ್ಡ ವ್ಯಾಪಾರದ ಸ್ಥಳವೂ, ಹಲವು ಆಟನೋಟಗಳ ಆಗರವೂ ಆದುದರಿಂದ ಒಂದು ಕಾರ್ಯ ನಿಮಿತ್ತವಾಗಿ ಕಲಕತ್ತೆಗೆ ಹೋದರೆ, ಎರಡು-ಮೂರು ಕೆಲಸಗಳನ್ನು ಏಕಕಾಲಕ್ಕೆ ಮಾಡಿಕೊಳ್ಳಲಿಕ್ಕೆ ಬರುತ್ತಿತ್ತು. ಡಾಕಾಕ್ಕೆ ನ್ಯಾಯಕೋರ್ಟಿಗೆ ಹೋದರೆ ಶರ್ಯತ್ತಿನ ಆಟನೋಟಗಳ ಸಲುವಾಗಿ ಕಲಕತ್ತೆಗೆ ಬರಬೇಕಾಯಿತು. ಹೀಗೆ ಒಂದಿಲ್ಲೊಂದು ರೀತಿಯಿಂದ ಶ್ರೀಮಂತರಿಂದ ಬಡವರವರೆಗೆ ಎಲ್ಲರೂ ಕೆಣಕಲ್ಪಟ್ಟರು. ಆಗ ಜನರು ದೊಡ್ಡ ಸಭೆಗಳನ್ನು ಸೇರಿಸಿ, ಠರಾವು ಪಾಸು ಮಾಡಿ, ವಂಗಭಂಗವನ್ನು ಮಾಡಬಾರದೆಂದು ಸರಕಾರಕ್ಕೆ ಬೇಡಿಕೊಂಡರು. ಆದರೆ ಎಲ್ಲವೂ

ನಿರರ್ಥಕವಾಯಿತು. ಸುಡುವದರಲ್ಲಿ ಹುಲ್ಲು ಹಾಕುವಂತೆ, ಕರ್ಝನ್ ಸಾಹೇಬರು 'ಬಂಗಾಲಿಗಳು ಕೈಲಾಗದ ಹೇಡಿಗಳೆಂದು' ಘೋಷಿಸಿದರು. ವರಿಷ್ಠ ಅಧಿಕಾರಿಯೇ ಪ್ರಜಾಪೀಡನೆಗೆ ಅನುಕೂಲವಿದ್ದ ಬಳಿಕ ಕೆಳಗಿನ ಅಧಿಕಾರಿಗಳಿಗೆ ಕೇಳುವವರಾರು ಉಳಿಯುತ್ತಾರೆ? ಕೋತಿಯ ಕೈಯಲ್ಲಿ ಕೊಳ್ಳಿಯನ್ನು ಕೊಟ್ಟಂತಾಯಿತು. ವಂಗೀಯರು (ಅಖಂಡ ಬಂಗಾಲದ ಜನರು) 70 ಸಾವಿರ ಸಹಿಗಳ ದೊಡ್ಡ ಹೊರೆಯನ್ನು(ಫೈಲ್) ಬಂಗಾಲದ ವಿಭಜನೆ ಮಾಡಬಾರದು ಎಂದು ಸರಕಾರಕ್ಕೆ ಕಳಿಸಿದರು. ಆದರೆ ಎಲ್ಲವೂ ವ್ಯರ್ಥವಾಯಿತು. 1905ನೆ ಇಸವಿಯ 16 ಅಗಸ್ಟ ಸಮೀಪಿಸಿತು. ದೇಶದಲ್ಲಿ ಒಂದೇ ಗೊಂದಲವೆದ್ದಿತು. ಸರಕಾರದವರು 16ನೇ ಅಗಸ್ಟಗೆ 'ಬಂಗಾಲ ವಿಭಾಗ'ವಾಯಿತೆಂದು ಪ್ರಕಟಿಸಿದರು. ಬಂಗಾಳಿಗಳು ಅದಕ್ಕೂ ಮುಂಚಿತವಾಗಿಯೇ ಅಂದರೆ 7ನೆಯ ಅಗಸ್ಟಗೆ ಸಭೆಯನ್ನು ಮಾಡಿ, ಸರಕರದವರು ತಮ್ಮ ಮಾತಿಗೆ ಮಾನ ಕೊಡದಿದ್ದರೆ, ಬ್ರಿಟೀಷ ಮಾಲಿಗೆ(ವಸ್ತುಗಳಿಗೆ) ಬಹಿಷ್ಕಾರ[4] ಹಾಕುವದನ್ನು ನಿಶ್ಚಯಿಸಿ ಸಾವಿರಾರು ಜನರು ಹಾಗೆ ಆಣೆ(ಪ್ರಮಾಣ) ಇಟ್ಟುಕೊಂಡರು. 16ನೆ ಅಗಸ್ಟನ್ನು **'ರಾಷ್ಟ್ರೀಯ ಸೂತಕದ ದಿನ'**ವೆಂದು ಪಾಲಿಸಹತ್ತಿದರು. ಪ್ರತಿಯೊಂದು ಊರಿನ ಎಲ್ಲ ಜನರು ಅಂದು ಒತ್ತಟ್ಟಿಗೆ ಕೂಡಿ, ಬೊಕ್ಕನೆತ್ತಿಯಿಂದ, ಪಾದರಕ್ಷೆಗಳಿಲ್ಲದೇ ಗಂಗೆಯ ದಡಕ್ಕೆ ಹೋಗಿ ಸ್ನಾನ ಮಾಡಿ ಉಪವಾಸದಿಂದಿರುತ್ತಿದ್ದರು. ಈ ಕ್ರಮವು ಮುಂದೆ ಬಂಗಾಳದ ವಿಭಾಗಣೆಯು ರದ್ದು ಆಗುವವರೆಗೂ ನಡೆದಿತ್ತು.

ಸರಕಾರದ ಕಲ್ಪನೆಯೇನು, ಈ ಜನರಲ್ಲಿ ಶಸ್ತ್ರಾಸ್ತ್ರಗಳಿಲ್ಲ; ಇವರಿಗೆ ಪರರಾಷ್ಟ್ರಗಳ ಸಹಾಯವಿಲ್ಲ, ಇವರಲ್ಲಿ ಒಕ್ಕಟ್ಟು ಸಹ ಇಲ್ಲ; ಒಂದು ಜಾತಿಯವರು ಮತ್ತೊಂದು ಜಾತಿಯವರ ವಿರುದ್ಧವಾಗಿ ಎಗ್ಗು ಇಲ್ಲದೇ (ವಿಚಾರವಿಲ್ಲದೇ) ಚಾಡಿಯನ್ನು ಹೇಳಲಿಕ್ಕೆ, ಅವರನ್ನು ಮುರಿಯಲಿಕ್ಕೆ ಸಹ ಸಹಾಯ ಮಾಡುವರು. ಅಂದ ಬಳಿಕ ನಮ್ಮ ಮನಸ್ಸಿಗೆ ಬಂದುದನ್ನು ಯಾಕೆ ಮಾಡದೇ ಬಿಡಬೇಕು? ಎಂಬ ವಿಚಾರವಿತ್ತು. "ಇಂದು ನಾವು ಯಾವಯದೊಂದನ್ನೂ ಮಾಡುವದು ಗೊತ್ತು ಮಾಡಿ ಜನರು ಬೇಡೆಂದೊಡನೆ ಅವರು(ಜನರು) ಸುಮ್ಮನೇ ಕೂಡ್ರುವರೆಂದು" ಸರಕಾರವು ತಿಳಿದಿತ್ತು. ಹೀಗೆ, ಸರಕಾರವು ಮಾಡಿಯೇ ಮಾಡುತ್ತೇವೆ ಎನ್ನುವ ಹಟಕ್ಕೆ ಬಿತ್ತು. ಆನರು ಸರಕಾರದವರಿಂದ ಇದನ್ನು ರದ್ದು ಮಾಡಿಸೇ ಬಿಟ್ಟೇವೆಂಬ ಆಗ್ರಹಕ್ಕೆ ಬಿದ್ದರು. ತಿರಗಿಮುರಗಿ (ಪದೇಪದೇ) ಜನರು ಮಾಡುವದೇನು, ಬೈಲು

ಸ್ಥಳ ನೋಡಿ ಸಭೆ ಕೂಡಿಸುವದು, ಆವೇಶಪೂರ್ಣ ನಾಲ್ಕು ವ್ಯಾಖ್ಯಾನಗಳನ್ನು ಕೊಡುವದು, ಕೆಲವು ಠರಾವುಗಳನ್ನು ಪಾಸು ಮಾಡುವದು, ಆಯಿತು, ಮತ್ತೇನು? ಇದರಿಂದ ಆಗಬೇಕಾದುದೇನು? ಇಷ್ಟು ದಿನ ಕಾಂಗ್ರೆಸ್ಸು ಕೂಡಿತು. ಅಲ್ಲಿ ಪಾಸಾದ ಠರಾವುಗಳೆಂದರೆ "ಸರಕಾರದ ಅನ್ಯಾಯಗಳ ಪಟ್ಟಿಯೇ" ಆಗಿತ್ತು ಎಂದು ಹೇಳಬಹುದು. ಅನೇಕ ಠರಾವುಗಳಾದವು. ವಕ್ತೃತ್ವಪೂರ್ಣ ಭಾಷಣಗಳಾದವು. ಪರಿಣಾಮವೇನಾಯಿತು?

ದೃಶ್ಯ ಪರಿಣಾಮ (ಕಣ್ಣಿಗೆ ಕಾಣುವಂತಹ ಪರಿಣಾಮ) ಇಲ್ಲದಿದ್ದರೂ ಕೆಲವು ಲಾಭಗಳಾದದ್ದು ಸುಳ್ಳಲ್ಲ. ಬಂಗಾಲಿಗಳು ಇನ್ನೂ ಹೆಚ್ಚು ಜಾಗೃತಿಯನ್ನು ಮಾಡಲಿಕ್ಕೆ ಟೊಂಕ ಕಟ್ಟಿದರು. ರಾಜರ ಸಿಂಹಾಸನವು ಪ್ರಜೆಗಳ ಸಂತೋಷವೆಂಬ ನೆಲೆಗಟ್ಟಿನ ಮೇಲೆ ಕಟ್ಟಲ್ಪಟ್ಟಿರುತ್ತದೆ. ರಾಜರಿಗೆ ಎಚ್ಚರದ ಮೇಲೆ ತರಲಿಕ್ಕೆ ಲೋಕಜಾಗೃತಿಯೇ ಬಲವಾದ ಉಪಾಯವು. ಈ ಕಾರ್ಯಕ್ಕಾಗಿ ಬಂಗಾಲದಲ್ಲಿ ವಿವಿಧ ಕಾರ್ಯಗಳಲ್ಲಿ ಆಸಕ್ತರಾದರು. ಬಾಬೂ ಸುರೇಂದ್ರನಾಥರು ಸ್ಫುರಣಗೊಡುವ ವಕ್ತೃತ್ವದಿಂದಲೂ, ಬ್ರಹ್ಮಬಂಧೋಪಾಧ್ಯಾಯರು ತೇಜಸ್ವಿಯಾದ ಲೇಖನಗಳಿಂದಲೂ, ಅಶ್ವನಿಕುಮಾರರು ತಮ್ಮ ಪ್ರತ್ಯಕ್ಷ ಕೃತಿಯಿಂದಲೂ ಬಂಗಾಲ ದೇಶದ ಉದ್ಧಾರಕ್ಕೆ ಹೆಣಗಹತ್ತಿದರು. ಬಂಗಾಲಿಗಳ ಅಂತಃಕರಣದಲ್ಲಿ ತೊಳಗಿ ಬೆಳಗುತ್ತಿದ್ದ ಈ ನವಜೀವನ ಜ್ಯೋತಿಗೆ ಇತರ ಪ್ರಾಂತದ ಮುಖಂಡರು ತಮ್ಮ ಅಂತಃಕರಣಸ್ಥ ಜ್ಯೋತಿಗಳನ್ನು ಹಚ್ಚಿ ತಮ್ಮ ತಮ್ಮ ಪ್ರಾಂತಗಳನ್ನು ಪ್ರಕಾಶಿತಗೊಳಿಸಿದರು. ಹೀಗಾಗಿ ಇಡೀ ಹಿಂದುಸ್ಥಾನವು ನವಚೈತನ್ಯದಿಂದ ತನ್ನ ಉದ್ದಾರಕ್ಕೆ ಯತ್ನಿಸಹತ್ತಿತು. ಈ ಯಜ್ಞಕರ್ಮದಲ್ಲಿ ಶ್ರೀ ಅರವಿಂದ ಘೋಷರವರು ಬಹು ದೊಡ್ಡ ಭಾಗದಲ್ಲಿ ತೊಡಗಿಕೊಂಡಿದ್ದರು. ಅದರ ವರ್ಣನವು ಯಥಾಕ್ರಮವಾಗಿ ಮುಂದೆ ಬರುವದು.

ವೃತ್ತಪತ್ರಗಳು ಜನರನ್ನು ಎಚ್ಚರಿಸತೊಡಗಿದವು. ವ್ಯಾಖ್ಯಾನಕಾರರು ಸ್ಫೂರ್ತಿಯನ್ನು ತುಂಬಹತ್ತಿದರು. ಹೀಗೆ ವಾಙ್ಮಯ ಸೇವೆಯು ಬಹು ವಿಧವಾಗಿ ಸಾಗಿತು. 'ಮೊದಲು ಕಲ್ಪನೆ, ಆ ಮೇಲೆ ವಿಚಾರ ಬಳಿಕ ಕೃತಿ' ಈ ಕ್ರಮದಂತೆ ಮೊದಲು ವಾಙ್ಮಯ ಸೇವೆಯಿಂದ ಮುಖಂಡರು ಜನರಲ್ಲಿ ಹೊಸಹೊಸ ಕಲ್ಪನೆಗಳನ್ನು ಪಸರಿಸಿದರು; ಮಾನಸಿಕ ದಾಸ್ಯವಿಮೋಚನೆ ಮಾಡಿದರು. ಬ್ರಿಟೀಷ ಸರಕಾರದ ಬಣ್ಣದ ಮಾತುಗಳ ಮಬ್ಬಿಗೆ, ಬಣ್ಣದ ಸುಧಾರಣೆಗಳ ಮೋಹಕ್ಕೆ ಸಿಕ್ಕು

ಗತಿಗಾಣದ ಸ್ಥಿತಿಯಲ್ಲಿದ್ದ ಜನರನ್ನು ಎಚ್ಚರಿಸಿದರು. ಪಾಶ್ಚಿಮಾತ್ಯರಂತೆ ತಮಗೂ ಶಿಕ್ಷಣ ದೊರೆತು ಬೇಕಾದಂಥ ಹೊಸ ಶೋಧಗಳನ್ನು ಮಾಡುವ ಯೋಗ್ಯತೆಯ ತಮ್ಮ ಜನರಲ್ಲಿ ಇರುವದೆಂಬುದನ್ನು ಸಿದ್ಧಪಡಿಸಿದರು. "ಶೋಧಗಳನ್ನು ಮಾಡಿದರೆ ಇಂಗ್ಲೀಷರೇ ಮಾಡಬೇಕು; ಆಳುವವರು ಯುರೋಪಿಯನ್ನರು, ಆಳಿಸಿಕೊಳ್ಳುವವರು ತಾವು(ಭಾರತೀಯರು)" ಎನ್ನುವ ಆತ್ಮವಿನಾಶಕ ಕಲ್ಪನೆಗಳನ್ನು ಬಹು ವಿಧದ ಉಪಾಯಗಳಿಂದ ಜನರೊಳಗಿಂದ ಓಡಿಸಿಬಿಟ್ಟರು. ಹುಡುಗರು ರಾಜಕಾರಣದಲ್ಲಿ ಭಾಗ ತಕ್ಕೊಳ್ಳುವರು ಎನ್ನುವ ನಿಮಿತ್ತದಿಂದ ಸರಕಾರೀ ಶಾಲೆಗಳೊಳಗಿಂದ ಅವರಿಗೆ ಅರ್ಧಚಂದ್ರವು(ಶಾಲೆಯಿಂದ ಹೊರಹಾಕುವ ಶಿಕ್ಷೆ) ಸಿಗಹತ್ತಿತು. ಆಗ ಈ ಸಂಧಿಯನ್ನು ಸಾಧಿಸಿಕೊಂಡು "ರಾಷ್ಟ್ರೀಯ ಶಾಲೆಗಳು"[5] ಪ್ರಾರಂಭವಾದವು. ಈ ಶಾಲೆಗಳು ಸರಕಾರೀ ಶಾಲೆಗಳಿಂದ ಬಹಿಷ್ಕೃತರಾದ ವಿದ್ಯಾರ್ಥಿಗಳನ್ನು ತಕ್ಕೊಳ್ಳುವದಕ್ಕಾಗಿಯೇ ಮಾತ್ರ ಸ್ಥಾಪಿಸಲ್ಪಟ್ಟಿದ್ದಿಲ್ಲ. ಹೊಸ ಮಾದರಿಯ ನವಜೀವನದಾಯಿಯಾದ ಶಿಕ್ಷಣವನ್ನು ಮಕ್ಕಳಿಗೆ ಕೊಡಬೇಕೆಂಬ ಉದ್ದೇಶವು ಅದರಲ್ಲಿ ಮುಖ್ಯವಾಗಿತ್ತು. ಸರಕಾರೀ ಶಾಲೆಗಳಲ್ಲಿ ಕಲಿಯುದರಿಂದ ಮಕ್ಕಳಲ್ಲಿ ಮಾನಸಿಕ ದೌರ್ಬಲ್ಯವು ಉಂಟಾಗುವದು; ಶಾರೀರಿಕ ಅವನತಿಯಾಗುವದು. ಈ ದೋಷಗಳನ್ನು ತೆಗೆದು ಹಾಕುವದು ಈ ರಾಷ್ಟ್ರೀಯ ಶಾಲೆಗಳ ಉದ್ದೇವಾಗಿತ್ತು. ರಾಜಾ ಸುಬೋಧಚಂಧ್ರ ಮಲ್ಲಿಕ ಎಂಬ ಶ್ರೀಮಂತ ಗೃಹಸ್ಥನು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಈ ಕಾರ್ಯಕ್ಕೆ ಆರಂಭ ಮಾಡಿದನು. ರಾಷ್ಟ್ರೀಯ ಶಿಕ್ಷಣ ಮಂಡಲವು ಸ್ಥಾಪಿಸಲ್ಪಟ್ಟು ವಿದ್ಯಾಲಯವು ಪ್ರಾರಂಭವಾಯಿತು. ಶ್ರೀ ಅರವಿಂದ ಘೋಷರು ಈ ವಿದ್ಯಾಲಯದ ಪ್ರಾಚಾರ್ಯ(ಪ್ರಿನ್ಸಿಪಾಲ್) ಆದರು.

ವಾಙ್ಮಯಾತ್ಮಕ ಸೇವೆ ಮಾಡಿ ಜನರ ಬೌದ್ಧಿಕ ದಾಸ್ಯವನ್ನು ನಾಶ ಮಾಡಿದ ಬಳಿಕ ಮುಖಂಡರು ಇತರ ಕಾರ್ಯಗಳನ್ನು ಕೈಕೊಂಡರು. ಸ್ವದೇಶೀ ವಸ್ತುಗಳ ಪ್ರಚಾರವು ದೇಶದಲ್ಲಿ ಹೆಚ್ಚಾಗಹತ್ತಿದ್ದರಿಂದ ಅನೇಕ ದೇಶೀ ಉದ್ಯಮಗಳು ಪ್ರಾರಂಭಗೊಂಡವು. ಔದ್ಯೋಗಿಕ ಉನ್ನತಿಯ ಕಡೆಗೆ ಜನರ ಲಕ್ಷ್ಯವು ಹೆಚ್ಚಾಗಹತ್ತಿತು. ದೇಶೀ ಸಕ್ಕರೆ, ದೇಶಿ ಅರಿವೆ(ಬಟ್ಟೆ) ಹೀಗೆ ಆಯುಷ್ಯಕ್ಕೆ ಹತ್ತುವ(ಜೀವನಕ್ಕೆ ಬೇಕಾಗುವ) ಎಲ್ಲ ವಸ್ತುಗಳನ್ನೂ ಇಲ್ಲಿಯೇ ತಯಾರಿಸುವ ಕಾರ್ಖಾನೆಗಳನ್ನು ತೆಗೆಯಲಿಕ್ಕೆ ಕಂಪನಿಗಳು ಪ್ರಾರಂಭಗೊಂಡವು. ಆನರಲ್ಲಿ

ಮಾನಸಿಕ ದೌರ್ಬಲ್ಯದಂತೆ ಶಾರೀರಿಕ ದೌರ್ಬಲ್ಯವೂ ಹೆಚ್ಚಾಗುತ್ತಿದ್ದುದರಿಂದ ಅದನ್ನು ತಡೆಯಲಿಕ್ಕೆ ವ್ಯಾಯಾಮ ಶಾಲೆಗಳು ಪ್ರಾರಂಭಗೊಂಡವು. ಜಾತ್ರೆಗಳಲ್ಲಿ ಕುಸ್ತಿಗಳಿಗೆ ಪ್ರಾಧಾನ್ಯವು ಸಿಗಹತ್ತಿತು. ತುರಣರು ಸ್ವಯಂಸೇವಕರಾಗಿ ಜನರಿಗೆ ಅನುವು–ಆಪತ್ತುಗಳಲ್ಲಿ ಸಹಾಯ ಮಾಡಲಿಕ್ಕೆ ಸಂಘಗಳನ್ನು ಸ್ಥಾಪಿಸಿದರು. ಊರ ಜಗಳಗಳು ಹೊರಗೆ ಹೋಗಬಾರದೆಂದು ಗ್ರಾಮ ಪಂಚಾಯತಿಗಳ ಸ್ಥಾಪನೆಗೆ ಅನೇಕರು ಯತ್ನಿಸಹತ್ತಿದರು. ಹೀಗೆ ಎಲ್ಲ ದಿಕ್ಕಿನಿಂದಲೂ ದೇಶದೊಳಗೆ ಜಾಗತಿಯಾಗಿ ಸುಧಾರಣೆಯಾಗಹತ್ತಿತು. ಬಾರಿಸಾಲ ಜಿಲ್ಲೆಯಲ್ಲಿಯ ಒಂದು ಸಂಘದ ಉದಾಹರಣೆಯನ್ನು ಇಲ್ಲಿ ಕೊಡಬಹುದು. ಅಲ್ಲಿ "ಸ್ವದೇಶ ಬಾಂಧವ ಸಮಿತಿ" ಎಂಬ ಸಂಘವು ಪ್ರಾರಂಭಗೊಂಡಿತು. ಅದರ 150 ಶಾಖೆಗಳು ಬೇರೆ ಬೇರೆ ಕಡೆಯಲ್ಲಿ ಕಾರ್ಯ ಪ್ರಾರಂಭಿಸಿದವು. ಊರೂರಿಗೆ ಹೋಗಿ ಉಪದೇಶ ಮಾಡಲಿಕ್ಕೆ ಮೂರು ಕಾಯಂ ಉಪದೇಶಕರನ್ನು ನಿಯಮಿಸಲಾಗಿತ್ತು. ನೂರಾರು ಸಭೆಗಳನ್ನು ಮಾಡಿ ಜನರಿಗೆ ಪರಿಸ್ಥಿತಿಯ ಜ್ಞಾನ ಮಾಡಿಕೊಟ್ಟರು. ಪರದೇಶೀ ಸಕ್ಕರೆಗೆ ಬಹಿಷ್ಕಾರ ಹಾಕಿದರು. ತಮ್ಮ ಭಾಗದಲ್ಲಿ ಹೆಂಡದ ವ್ಯಸನವು ಉಳಿಯಬಾರದೆಂದು ಅವಿಶ್ರಾಂತವಾಗಿ ಶ್ರಮಪಟ್ಟರು. ಇದರಿಂದ "ಸರಕಾರಕ್ಕೆ 20 ಸಾವಿರದ ಹಾನಿಯಾಯಿತು!!". ಸ್ವದೇಶೀ ವ್ರತವನ್ನು ಮುರಿದ 90 ಜನರಿಗೆ ಬಹಿಷ್ಕಾರವನ್ನೂ ಹಾಕಲಾಗಿತ್ತು. ಇಷ್ಟೊಂದು ಅಧಿಕಾರವನ್ನು ಗಳಿಸಿಕೊಳ್ಳಲಾಗಿತ್ತು. ಪಂಚರ ವತಿಯಿಂದ ಅನೇಕಾನೇಕ ವ್ಯಾಜ್ಯಗಳನ್ನು ತೀರಿಸಿದರು. ಅಲ್ಪ ಖರ್ಚಿನಲ್ಲಿ ಸರಿಯಾದ ನ್ಯಾಯವು ಸಿಗುತ್ತಿದ್ದುದರಿಂದ ಜನರು ಇಲ್ಲಿಯೇ ತಮ್ಮ ನಯಾಯಗಳನ್ನು ತೀರಿಸಿಕೊಳ್ಳಲಿಕ್ಕೆ ಬರುತ್ತಿದ್ದರು. ಇಲ್ಲಿ ತೀರಿಸಲ್ಪಟ್ಟ ವ್ಯಾಜ್ಯಗಳಲ್ಲಿ ಒಂದು ರೂ.90 ಸಾವಿರದ ವ್ಯಾಜ್ಯವಾಗಿತ್ತು; ಮತ್ತೊಂದು 65 ಸಾವಿರದ ವಿಷಯವಾಗಿತ್ತು. ಹಿಗೆ ಸರಕಾರದ ಕೋಟುಗಳ ಮೇಲಿನ ಪತ್ತು ಕಡಿಮೆಯಾಗಹತ್ತಿತು.

ಕಲಕತ್ತೆಯಲ್ಲಿ 1906ರಲ್ಲಿ ದಾದಾಭಾಯಿ ನವರೋಜಿಯವರ ಅಧ್ಯಕ್ಷತೆಯಲ್ಲಿ ಆದ ರಾಷ್ಟ್ರೀಯ ಸಭೆಯಲ್ಲಿ "ತರುಣ ವೀರ ಪಕ್ಷದ" ಜಯವಾಗಿ "ಸ್ವರಾಜ್ಯವು ಹಿಂದೂಸ್ಥಾನದ ಧ್ಯೇಯ"ವೆಂದು ನಿಶ್ಚಿತವಾಯಿತು. ಸ್ವರಾಜ್ಯ ಸಂಪಾದನೆಯ ಸಲುವಾಗಿ ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ಬಳಕೆ, ರಾಷ್ಟ್ರೀಯ ಶಿಕ್ಷಣಗಳೆಂಬ ಉಪಾಯಗಳಿಂದ ಕಾರ್ಯವನ್ನು ಪ್ರಾರಂಬಿಸಬೇಕೆಂದು ನಿರ್ಣಯಿಸಲಾಯಿತು. ಈಗಿನ ಅಸಹಕಾರವು ಈ ಹಿಂದೆ ಇದ್ದ "ಬಹಿಷ್ಕಾರದ

ಯೋಗವನ್ನೆ ತಿದ್ದಿ ಬೆಳೆಸಿದ ಹೊಸ ಆವೃತ್ತಿಯೆಂದೇ ಹೇಳಬಹುದು. ಈ ಠರಾವುಗಳನ್ನು ಪಾಸು ಮಾಡಿಕೊಳ್ಳಲಿಕ್ಕೆ "ವೃದ್ಧ ಕಾಂಗ್ರೆಸ್ ಭಕ್ತರೊಡನೆ ವೀರಪಕ್ಷದವರಿಗೆ" ಬಹು ಕಲಿತನದಿಂದ ಕಾದಬೇಕಾಯಿತು. ವೀರಪಕ್ಷದ ಅಗ್ರಣಿಗಳಾದ **ಲೋಕಮಾನ್ಯ ತಿಲಕ**ರ ಸಂಗಡ ಬಂಗಾಲದ ವತಿಯಿಂದ **ಬಿಪಿನಚಂದ್ರ ಪಾಲ್** ಅವರೂ, **ಶ್ರೀ ಅರವಿಂದ ಘೋಷ**ರೂ ಪ್ರಾಮುಖ್ಯವಾಗಿ ಇದ್ದರು. **(ಸಶೇಷ)**

---

**ಟಿಪ್ಪಣಿಗಳು:**

1) 19ನೇ ಶತಮಾನದ ಪ್ರಾರಂಭದ ದಶಕದಲ್ಲಿ 'ಪ್ಲೇಗ ಮಹಾಮಾರಿ'ಯಿಂದಾಗಿ ಲಕ್ಷಾಂತರ ಜನರು ಸಾವಿಗೀಡಾದರು. ಅದು ಮಹಾಯುದ್ಧದ ಸಲುವಾಗಿ ದೇಶ–ದೇಶಗಳ ಮಧ್ಯೆ ಪೈಪೋಟಿಯಲ್ಲಿ ತಯಾರಿಸಲ್ಪಟ್ಟ 'ರೋಗಾಣು'ವಾಗಿತ್ತು ಎನ್ನುವದು ಪುರಾವೆಗೊಂಡಿತ್ತು. ಈಗಲೂ ಇಡೀ ಜಗತ್ತು 'ಕೊರೋನಾ ವೈರಾಣು"ವಿನಿಂದ ತತ್ತರಿಸುತ್ತಿದೆ. ವಿಶ್ವ ಸಂಸ್ಥೆಯ ಕಾರಣದಿಂದಾಗಿ, ನೇರವಾಗಿ ದಾಳಿ ಮಡಲು ಸಾಧ್ಯವಿಲ್ಲದ ಪರಸ್ಪರ ಒಪ್ಪಂದಗಳಿಂದಾಗಿ, ಒಳಗಿಂದೊಳಗೇ ಮತ್ತೊಂದು ದೇಶದ ಆರ್ಥಿಕ ವ್ಯವಸ್ಥೆಯನ್ನು ಹಾಳುಮಾಡುವ ಹುನ್ನಾರು "ಶೀತಲ ಯುದ್ಧದ ಸ್ವರೂಪದಲ್ಲಿ" ಮುಂದುವರೆದೇ ಇದೆ.

2) ಶಿಕ್ಷಣದ ಸ್ಥಿತಿ; ಆ ಸಂದರ್ಭದಲ್ಲಿ ಬ್ರಿಟೀಷರು ಯಾವ ರೀತಿಯಲ್ಲಿ ಭಾರತೀಯ ಮಾನಸಿಕತೆಯನ್ನು ದಾಸ್ಯಮನೋಭಾವದಲ್ಲಿಯೇ ಇರಿಸುವಂತೆ ರೂಪಿಸಿತ್ತೋ, ಈಗಲೂ ಸಹಿತ ಸ್ವಾತಂತ್ರ್ಯಾನಂತರವೂ ಸಹಿತ, ಅದೇ ಮಾನಸಿಕ ದಾಸ್ಯದ ಶಿಕ್ಷಣ ಪದ್ಧತಿಯನ್ನೇ ಮುಂದುವರೆಸಿಕೊಂಡು ಬರಲಾಯಿತು. 100 ನೌಕರಿಗಳಲ್ಲಿ ಕೇವಲ 5 ನೌಕರಿಗಳು ಮಾತ್ರ ಸರಕಾರೀ ನೌಕರಿಗಳಾಗಿರುತ್ತವೆ ಎನ್ನುವದನ್ನು ಮುಚ್ಚಿಟ್ಟು, ಎಲ್ಲರಿಗೂ ಸರಕಾರೀ ನೌಕರಿಯ ಆಶೆ ತುಂಬಿ, ಶಿಕ್ಷಣವನ್ನು ನೀಡಲಾಗುತ್ತಿದೆ. ಆಗ ಯೋಜಿಸಿದ "ರಾಷ್ಟ್ರೀಯ ಶಿಕ್ಷಣದ" ಮಹತ್ವವೂ ಮತ್ತೆ ನೂರು ವರ್ಷದ ನಂತರ ಆಗಮಿಸಿರುವದು ಕಾಲದ ವಿಚಿತ್ರವೋ ಅಥವಾ ಭಾರತೀಯ ಮನೋವಿಕಾಸದ ಮಂದಗತಿಯೋ ತಿಳಿಯದಾಗಿದೆ.

3) ಬಂಗಾಲವನ್ನು ವಿಭಜಿಸಿ, ಆಡಳಿತ ದೃಷ್ಟಿಯಿಂದ ಅದನ್ನು ಆಸಾಮ ರಾಜ್ಯಕ್ಕೆ ಜೋಡಿಸುವ ಒಂದು ವಿಚಾರವೂ ಮೊದಲಿತ್ತು. ಆದರೆ ಮೊದಲಿನಿಂದಲೂ ಬಂಗಾಲ ಮತ್ತು ಆಸಾಮ ಪ್ರದೇಶಗಳು ತಮ್ಮ ತಮ್ಮ ಅಸ್ಮಿತೆಯಲ್ಲಿಯೇ ಗುರುತಿಸಿಕೊಂಡಿದ್ದರಿಂದ, ಬಂಗಾಲಿಗಳು ಆಸಾಮದ ಜೊತೆಗೆ ಕೂಡಲು ಒಪ್ಪಿಕೊಳ್ಳುವದಿಲ್ಲ. ಇದನ್ನೇ ಕಾರಣವಾಗಿಸಿಕೊಂಡು, ವಂಗ–ಭಂಗ ಮಾಡಿದ್ದರು. ಅದು ಈಗಲೂ "ಬಾಂಗ್ಲಾ" ದೇಶದ ಸ್ವರೂಪದಲ್ಲಿ ಸಂಘರ್ಷ ಮುಂದುವರೆದೇ ಇದೆ.

4) ವಿದೇಶಿ ವಸ್ತುಗಳ ಬಹಿಷ್ಕಾರಕ್ಕೆ ಮೂಲ ನಾಂದಿಯಾದದ್ದು ಈ 'ವಂಗ–ಭಂಗ' ಚಳವಳಿ ಎನ್ನುವದು ಐತಿಹಾಸಿಕ ಘಟನೆ. ಇದನ್ನೇ ಮುಂದೆ ಸ್ವಾತಂತ್ರ್ಯ ಹೋರಾಟದಲ್ಲಿಯೂ ಯಶಸ್ವಿಯಾಗಿ ರೂಪಿಸಿಕೊಂಡು "ಖಾದೀ ಉದ್ಯಮ" ಉದ್ಯಮಕ್ಕೆ ನಾಂದಿಯಾಯಿತು.

5) ರಾಷ್ಟ್ರೀಯ ಶಿಕ್ಷಣ ನೀತಿಯೂ ಸಹಿತ ಈ ವಂಗ–ಭಂಗದ ಕ್ರಿಯೆಯಿಂದ ಜನಿತವಾಯಿತು. ಒಂದು ಶತಮಾನದ ನಂತರದಲ್ಲಿ ಮತ್ತೆ ಅದೇ ತೆರನಾದ ವಾತಾವರಣ ನಿರ್ಮಾಣಗೊಂಡಿರುವದು ಒಂದು ನಿಯತಿಯೇ?

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್

## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926<br>(Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |




ತೆರೆಗಳಬ್ಬರವು ಇರದ ದಿವ್ಯಾಗ್ನಿ ಅರ್ಣವದ ರೂಪವಾಗಿ
ದೇವಶಾಂತಿ ಜೊತೆ ದೇವಬಲಗಳವು ಅವಳ ಕೊಡುಗೆಯಾದಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 2 ಪುಟ 16)**

Photo: Imaging Savitri

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಈ ತೆರದಿ ಈಗ ಮೃಣ್ಮಯವು ತಾನು ಚಿನ್ಮಯದ ಎಡೆಗೆ ಅರಳಿ
ಊರ್ಧ್ವಮುಖಿಯಾಗಿ ಸರ್ವಭಾವಗಳು ವಿಶ್ವಾತ್ಮ ಸ್ಪಂದವಾಗಿ
ವಿಶ್ವಮಾತೆಯಾ ಶಾಶ್ವತದ ಕೃಪೆಯು ಸರ್ವಸಮತೆಯಲಿ ಈಗ
ತೇಜದಲಿ ಅರಳಿ ಹೃದಯದುಲ್ಲಾಸ ದಿವ್ಯತ್ವ ತೋಷವೀಗ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 12 ಶಾಶ್ವತದ ಬೆಳಗು ಪುಟ 710)**

Photo: Imaging Savitri

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.